## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمْرِهٖ وَاَمْرِهٖ

بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ


ವರ್ಷ: 06

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 20–21

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

15–22 ಮೇ 2025, 15–22 ಹಿಜ್ರತ್ 1404 ಹಿಜರಿ ಶಮ್‌ಸಿ,
16–23 ಝುಲ್‌ಖಅದಃ 1445 ಹಿಜರಿ ಖಮರಿ.


## ಅಲ್ಲಾಹನ ಉಪದೇಶ

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِي الْاَرْضِ كَمَا اسْتَخْلَفَ الَّذِيْنَ مِنْ قَبْلِهِمْ

(ಅನ್ನೂರ್: 56)

ಅಂದರೆ: ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ.

ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ದೇವ ವಚನ ನನಗೆ ಹೀಗೆ ತಿಳಿಸಿದೆ:ಅನೇಕ ವಿಪತ್ತುಗಳು ಪ್ರಕಟವಾಗುವುವು. ಅನೇಕ ಆಪತ್ತುಗಳು ಭೂಮಿಯ ಮೇಲೆರಗುವುವು. ಅವುಗಳು ನನ್ನ ಜೀವಿತ ಕಾಲದಲ್ಲಿ ಪ್ರಕಟವಾಗುವುವು. ಕೆಲವು ನನ್ನ ಮರಣದ ನಂತರ ಪ್ರಕಟವಾಗುವುವು. ಅಲ್ಲಾಹನು ಈ ಸಂಘಟನೆಗೆ ಪರಿಪೂರ್ಣ ಅಭಿವೃದ್ಧಿ ದಯಾಪಾಲಿಸುವನು. ನನ್ನ ಕಾಲದ ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಉಂಟಾಗುವುದು ಮತ್ತು ನನ್ನ ನಂತರ ಇನ್ನಷ್ಟು ಅಭಿವೃದ್ಧಿ ಆಗುವುದು.

ಇದು ಅಲ್ಲಾಹನ ನಡೆವಳಿಕೆಯಾಗಿದೆ. ಮನುಷ್ಯನು ಭೂಮಿಯಲ್ಲಿ ಸೃಷ್ಟಿಸಿದ ನಂತರ ಅವನು ಇದೇ ನಡೆಳಿಕೆಯನ್ನು ಪ್ರಕಟಿಸುತ್ತಾ ಇದ್ದಾನೆ. ಅವನು ತನ್ನ ಪ್ರವಾದಿಗಳಿಗೆ ಮತ್ತು ಸಂದೇಶವಾಹಕರಿಗೆ ಸಹಾಯ ಮಾಡುತ್ತಾನೆ ಮತ್ತು ಜನರಿಗೆ ಜಯವನ್ನು ದಯಾಪಾಲಿಸುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆನ್ನುತ್ತಾನೆ: **ಕತಬಲ್ಲಾಹು ಲಅಗ್‌ಲಿಬನ್ನ ಅನಾ ವರುಸುಲೀ** ಅರ್ಥ:"ಅಲ್ಲಾಹನು ಬರೆದಿಟ್ಟಿರುವನು: ನಾನು ಮತ್ತು ನನ್ನ ಪ್ರವಾದಿಗಳು ನಿಶ್ಚಯವಾಗಿಯೂ ಜಯಶಾಲಿಗಳಾಗುವೆವು.

ಈ ವಚನದಲ್ಲಿ ಜಯ ಎಂಬ ಪದದ ಅರ್ಥವೆನೆಂದರೆ ಅಲ್ಲಾಹನ ಅಸ್ತಿತ್ವದ ಸಾಕ್ಷಧಾರಗಳ ಭೂಮಿಯಲ್ಲಿ ಪೂರ್ಣವಾಗಿ ಪ್ರಕಟ್ಟಗೊಳ್ಳಬೇಕು ಎಂಬ ಇಚ್ಛೆಯನ್ನು ಪ್ರವಾದಿಗಳೂ ಸಂದೇಶವಾಹಕರೂ ಹೊಂದಿರುತ್ತಾರೆ. ಈ ಇಚ್ಛೆಯ ಈಡೇರುವಿಕೆಯನ್ನು ತಡೆಯಬಲ್ಲರು ಯಾರು ಇರುವುದಿಲ್ಲ. ಈ ರೀತಿ ಬಲಿಯುತವಾದ ದೃಷ್ಟಾಂತಗಳ ಮೂಲಕ ಅಲ್ಲಾಹನು ತನ್ನ ಪ್ರವಾದಿಗಳ ಮತ್ತು ಸಂದೇಶವಾಹಕರ ಸತ್ಯವನ್ನು ಪ್ರಕಟಿಸುತ್ತಾನೆ. ಯಾವ ಸತ್ಯವನ್ನು ಲೋಕದಲ್ಲಿ ಹರಡಲು ಇಚ್ಛಿಸುತ್ತಾನೋ ಅದರ ಬೀಜ ಬಿತ್ತುವಿಕೆಯನ್ನು ಅವರ ಕೈಗಳ ಮೂಲಕ ನೆಡೆಸುತ್ತಾನೆ. ಆದರೆ ಅದರ ಪೂರ್ಣ ಬೆಳವಣಿಗೆಯನ್ನು ಅವರ ಕೈಗಳಿಂದ ಈಡೇರಿಸುವುದಿಲ್ಲ. ಅಲ್ಲಾಹನು ಅವರನ್ನು ಎಂತಹ ಸಮಯದಲ್ಲಿ ಮೃತಪಡಿಸುತ್ತಾನೆಂದರೆ ಆಗ ಬಾಹ್ಯವಾಗಿ ನೋಡಿದರೆ ಅಪಜಯದ ಭಯ ಅದರೊಂದಿಗೆ ಇರುತ್ತದೆ. ಆಗ ಅಲ್ಲಾಹನು ವಿರೋಧಿಗಳ ಪರಿಹಾಸ. ಚುಚ್ಚು ಮಾತು ಮತ್ತು ನಿಂದೆಗೆ ಸಂಧರ್ಭವನ್ನು ಒದಗಿಸುತ್ತಾನೆ. ವಿರೋಧಿಗಳ ಪರಿಹಾಸ ಮತ್ತು ನಿಂದನೆಗಳನ್ನು ಮಾಡಿ ಮುಗಿಸಿದಾಗ ಅಲ್ಲಾಹನು ತನ್ನ ಶಕ್ತಿಯ ಇನ್ನೊಂದು ಹಸ್ತವನ್ನು ತೋರಿಸುತ್ತಾನೆ. ಅವನು ಎಂತಹ ಸಾಮಾಗ್ರಿಗಳನ್ನು ಸೃಷ್ಟಿಸುತ್ತಾನೆಂದರೆ ಅಪೂರ್ಣವಾಗಿ ಉಳಿದಿದ್ದ ಉದ್ದೇಶ ಲಕ್ಷ್ಯಗಳು ಅವುಗಳ ಮೂಲಕ ಪೂರ್ಣತೆಗೆ ತಲುಪುತ್ತದೆ. ಒಟ್ಟಾರೆ ಹೇಳುವುದಾದರೆ ಅಲ್ಲಾಹನು ಎರಡು ವಿಧಗಳ ಶಕ್ತಿ ಪ್ರದರ್ಶನ ಮಾಡುತ್ತಾನೆ. 1. ಪ್ರವಾದಿಗಳ ಮೂಲಕ ಅಲ್ಲಾಹನು ತನ್ನ ಶಕ್ತಿಯ ಹಸ್ತವನ್ನುತೋರಿಸುತ್ತಾನೆ. 2. ಪ್ರವಾದಿಗಳು ಮೃತರಾದ ನಂತರ ಅವರ ಅನುಯಾಯಿಗಳ ಸಮುದಾಯದ ವಿವಿಧ ಕಷ್ಟಗಳನ್ನು ಎದುರಿಸಬೇಕಾಗಿ ಬರುತ್ತದೆ ಮತ್ತು ಶತ್ರುಗಳು ತೀವ್ರವಾಗಿ ವಿರೋಧಿಸುತ್ತಾ ಕೆಲಸ ಬಿಗಡಾಯಿಸಿತೆಂದು ಭಾವಿಸುತ್ತಾ ಈ ಜಮಾಅತ್ ನಾಶವಾಗುವುದೆಂದು ದೃಢನಂಬಿಕೆ ಹೊಂದುತ್ತಾರೆ.ಜಮಾತಿನ ಒಳಗಿರುವವರು ಸಹ ಸಂಶಯಗಳಿಗೆ ತುತ್ತಾಗಿ ಬಲಗುಂದಿದವರಾಗುತ್ತಾರೆ. ಕೆಲವರು ದುರದೃಷ್ಟವಂತರು ಜಮಾಅತನ್ನು ಬಿಟ್ಟು ಹೋಗುತ್ತಾರೆ. ಆಗ ಅಲ್ಲಾಹನು ತನ್ನ ಶಕ್ತಿಯನ್ನು ಎರಡನೆಯ ಸಾರಿ ಬಲಯುತವಾಗಿ ಪ್ರರ್ದಶಿಸುತ್ತಾನೆ. ಕುಸಿದು ಹೋಗುವ ಜಮಾಅತನ್ನು ಅವನು ಹಿಡಿದು ನಿಲ್ಲಿಸುತ್ತಾನೆ.

ಯಾರು ಕೊನೆಯ ವರೆಗೆ ಸಹನೆ ತೋರುತ್ತಾನೋ ಅವನು ಅಲ್ಲಾಹನ ಈ ಅದ್ಭುತ ದೃಷ್ಟಾಂತವನ್ನು ನೋಡುತ್ತಾನೆ. ಹಝ್‌ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಹೀಗೆ ಸಂಭವಿಸಿತು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಮೃತರಾದುದು ಅಕಾಲದಲ್ಲಿಯೆಂದು ಗ್ರಹಿಸಲಾಗಿತ್ತು. ಗ್ರಾಮವಾಸಿಗಳಾದ ಅನೇಕ ತಿಳಿಗೇಡಿಗಳು ಧರ್ಮತ್ಯಾಗ ಮಾಡಿದರು. ಸಹಾಬ(ಪೈಗಂಬರ ಶಿಷ್ಯರು) ದುಃಖದಿಂದ ಮತಭ್ರಷ್ಟರ ಹಾಗೆ ಆಗಿದ್ದರು. ಆಗ ಹಝ್‌ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರನ್ನು ಅಲ್ಲಾಹನು ನಿಲ್ಲಿಸಿ ತನ್ನ ದಿವ್ಯ ಶಕ್ತಿಯನ್ನು ಎರಡನೆಯ ಸಾರಿ ಪ್ರಕಟಿಸುತ್ತಾ ನಾಶೋನ್ಮುಖವಾಗಿದ್ದ ಇಸ್ಲಾಮನ್ನು ರಕ್ಷಿಸಿದನು ಮತ್ತು ತನ್ನ ವಾಗ್ದನವನ್ನು ಈಡೇರಿಸಿದನು.

**ವಲಯುಮಕ್ಕಿನನ್ನಲಹುಮ್ ದೀನಹುಮುಲ್ಲಝಿರ್ತಝಾಲಹುಮ್ ವಲಯುಬದ್ದಿಲನ್ನಲಹುಮ್ ಮಿಮ್ ಬಅ್‌ದಿ ಖೌಫಿಹಿಮ್ ಅಮ್‌ನಾ** (ಪವಿತ್ರ ಖುರ್‌ಆನ್ 24:56) "ಎಂದರೆ ಭಯದ ನಂತರ ಅವರ ಪಾದಗಳನ್ನು ನಾವು ಸ್ಥಿರಗೊಳಿಸುವೆವು." ಎಂದು ಅಲ್ಲಾಹನು ಈ ವಚನದಲ್ಲಿ ವಾಗ್ದನ ಮಾಡಿರುವನು.

ಹಝ್‌ರತ್ ಮೂಸಾ ಅಲೈಹಿಸ್ಸಲಾಮ್‌ರವರ ಕಾಲದಲ್ಲಿ ಸಹ ಹೀಗೆ ಸಂಭವಿಸಿತು. ಬನೀ ಇಸ್ರಾಈಲ್ ಜನರನ್ನು ಅವರಿಗೆ ವಾಗ್ದನ ನೀಡಲ್ಪಟ್ಟ ಭೂಪ್ರದೇಶಕ್ಕೆ ಕೊಂಡೊಯ್ದು ತಲುಪಿಸುವ ಮೊದಲೇ ಹಝ್‌ರತ್ ಮೂಸಾ ಅಲೈಹಿಸ್ಸಲಾಮ್‌ರವರು ಈಜಿಪ್ಟ್ ಮತ್ತು ಕನ್‌ಆನದ ಮಧ್ಯದ ಮಾರ್ಗದಲ್ಲಿ ಮೃತರಾದರು. ಅವರು ಮೃತರಾದಾಗ ಬನೀ ಇಸ್ರಾಈಲ್ ಜನರಲ್ಲಿ ಈ ಅಕಾಲಿಕ ಮರಣದಿಂದಾಗಿ ಅಗಾಧವಾದ ಶೋಕ ಉಂಟಾಯಿತು. ಅವರು ನಲ್ವತ್ತು ದಿವಸಗಳು ರೋಧಿಸುತ್ತಾ ಇದ್ದರೆಂದು ತೌರಾತ್ ಗ್ರಂಥದಲ್ಲಿ ಬರೆಯಲಾಗಿದೆ.

ಹಝ್‌ರತ್ ಈಸಾ ಅಲೈಹಿಸ್ಸಲಾಮ್‌ರವರು ಶಿಲುಬೆಗೆ ಏರಿಸಲ್ಪಟ್ಟಾಗ ಹೀಗೆಯೇ ಸಂಭವಿಸಿತು. ಎಲ್ಲಾ ಶಿಷ್ಯರು ಚದುರಿ ಓಡಿಹೋದರು. ಅವರೊಬ್ಬರ ಧರ್ಮಭ್ರಷ್ಟನೂ ಆದನು.

ಆದುದರಿಂದ ಪ್ರಿಯರೇ,ಪುರಾತನ ಕಾಲದಿಂದಲೂ ಅಲ್ಲಾಹನ ನಡವಳಿಕೆ ಹೀಗೆ ಇದೆ: ಅವನು ಎರಡು ದಿವ್ಯ ಶಕ್ತಿಗಳನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕ ಎಂದು ತೋರಿಸಿ ಕೊಡುತ್ತಾನೆ. ಅಲ್ಲಾಹನು ತನ್ನ ಪುರತನವಾದ ನಡವಳಿಕೆಯನ್ನು ಬಿಟ್ಟುಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನಿ ನಿಮ್ಮೊಂದಿಗೆ ಹೇಳಿದ ಮಾತಿನಿಂದ ನೀವು ದುಃಖಿತರಾಗಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ

*(ಪುಟ ಸಂಖ್ಯೆ–12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ರಮಝಾನ್ ದಿನಗಳಲ್ಲಿ ನರಕದ ಬಾಗಿಲುಗಳನ್ನು ಮುಚ್ಚುತ್ತೇನೆ, ಶೈತಾನನನ್ನು ಬಂಧಿಸುತ್ತೇನೆ ಮತ್ತು ಸ್ವರ್ಗದ ಬಾಗಿಲುಗಳನ್ನು ತೆರೆಯುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ. (ಹದೀಸ್)

ಪ್ರತಿಯೊಂದು ಪ್ರಾರ್ಥನೆಗೆ ಮೊದಲು ದೇವನು ಇದ್ದಾನೆ ಮತ್ತು ಅವನು ಅನಂತ ಗುಣಗಳನ್ನು ಹೊಂದಿದ್ದಾನೆ, ಎಲ್ಲ ಶಕ್ತಿಗಳು ಮತ್ತು ಸಾಮರ್ಥ್ಯಗಳನ್ನು ಹೊಂದಿದ್ದಾನೆ ಎಂಬ ನಂಬಿಕೆ ಇರಬೇಕು. ಈ ನಂಬಿಕೆಯೊಂದಿಗೆ ಅಲ್ಲಾಹನ ಕಡೆಗೆ ಧಾವಿಸುವಾಗ, ಅವನ ಮುಂದೆ ಬಾಗುವಾಗ, ಅವನೊಡನೆ ದುಆ ಮಾಡುವಾಗ, ಆಗ ನಿಮಗೆ ಅಲ್ಲಾಹನ ಸಂಪೂರ್ಣ ಪರಿಚಯವಾಗುತ್ತದೆ, ಜ್ಞಾನವು ಲಭಿಸುತ್ತದೆ ಮತ್ತು ಪ್ರಾರ್ಥನೆಯ ಸ್ವೀಕಾರದ ಚಿಹ್ನೆಗಳನ್ನು ಸಹ ನೋಡುವಿರಿ.

ಮನುಷ್ಯನು ತಪ್ಪುಗಳ ಮೂಟೆ, ಅವನಿಂದ ತಪ್ಪುಗಳು ಸಂಭವಿಸುತ್ತವೆ, ಆದರೆ ಅಲ್ಲಾಹನು ಬಹಳ ಕರುಣಾಮಯಿ ಮತ್ತು ದಯಾಮಯಿ, ಅವನು ಕ್ಷಮಿಸುವವನಾಗಿದ್ದಾನೆ, ಆದ್ದರಿಂದ ಅವನು ನಮಗೆ ಈ ಅವಕಾಶವನ್ನು ಒದಗಿಸಿದ್ದಾನೆ, ಒಂದು ವರ್ಷದ ಅವಧಿಯಲ್ಲಿ ನಮ್ಮಿಂದ ತಪ್ಪುಗಳು ಸಂಭವಿಸಿದ್ದರೆ, ಇನ್ನು ಮುಂದೆ ಅಲ್ಲಾಹನ ಆರಾಧನೆಯ ಹಕ್ಕನ್ನು ಪೂರೈಸುವವರಾಗುತ್ತೇನೆ ಮತ್ತು ಅಲ್ಲಾಹನು ಆದೇಶಿಸಿದ ಎಲ್ಲ ಸತ್ಕಾರ್ಯಗಳನ್ನು ಈಡೇರಿಸುತ್ತೇನೆ ಎಂದು ಈಗ ಹೊಸದಾಗಿ ಪ್ರತಿಜ್ಞೆ ಮಾಡಬೇಕು ಮತ್ತು ನೀವು ಅದರಲ್ಲಿ ನೆಲೆನಿಲ್ಲಲು ಪ್ರಯತ್ನಿಸಬೇಕು.

ಆದ್ದರಿಂದ, ರಮಝಾನಿನಲ್ಲಿ ಈ ಸ್ಥಾನವನ್ನು ಪಡೆಯಲು ನಾವು ಪ್ರಯತ್ನಿಸಬೇಕು ಮತ್ತು ನಾವು ಈ ಸ್ಥಾನದಿಂದ ಹಿಂದೆ ಸರಿದರೆ ಮತ್ತು ರಮಝಾನಿನಲ್ಲಿ ಮಾಡಿದಂತೆ ಈ ಆರಾಧನೆಗಳನ್ನು ಪೂರೈಸದಿದ್ದರೆ ಮತ್ತು ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸದಿದ್ದರೆ, ಅಲ್ಲಾಹನು ಹೇಗೆ ಸ್ನೇಹಿತನಾಗುವನು ಎಂದು ನಾವು ಯೋಚಿಸಬೇಕು.

ರಮಝಾನಿನಲ್ಲಿ ನಾವು ನಮ್ಮ ಆರಾಧನೆಗಳನ್ನು ಜೀವಂತಗೊಳಿಸುವೆವು ಎಂದು ಪ್ರತಿಜ್ಞೆ ಮಾಡಬೇಕು ಮತ್ತು ಆ ಪ್ರತಿಜ್ಞೆಯನ್ನು ಪೂರೈಸಲು ಅಲ್ಲಾಹನು ನಮಗೆ ಶಕ್ತಿ ನೀಡಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಬೇಕು ಮತ್ತು ಅದನ್ನು ಪೂರೈಸಲು ನಮ್ಮ ಎಲ್ಲ ಶಕ್ತಿಗಳನ್ನು ಬಳಸಲು ಪೂರ್ಣ ಪ್ರಯತ್ನ ಮಾಡಬೇಕು.

ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮಲ್ಲಿ ಯಾರಿಗಾದರೂ ದುಆದ ಬಾಗಿಲು ತೆರೆಯಲ್ಪಟ್ಟರೆ ಅವನಿಗಾಗಿ ಕರುಣೆಯ ಬಾಗಿಲುಗಳು ತೆರೆದಂತೆಯೇ ಆಗಿದೆ. ಅಲ್ಲಾಹನಲ್ಲಿ ಬೇಡಿಕೊಳ್ಳುವ ವಿಷಯಗಳಲ್ಲಿ, ಅವನಿಂದ ಕ್ಷೇಮವನ್ನು ಬೇಡುವುದು ಅವನಿಗೆ ಅತ್ಯಂತ ಪ್ರಿಯವಾದುದಾಗಿದೆ. (ತಿರ್ಮಿಝಿ, ಕಿತಾಬುದ್ದಾವಾತ್, ಹದೀಸ್-3548)

ಹಝುರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾವು ಯಾವ ದೇವನ ಕಡೆಗೆ ಕರೆಯುತ್ತಿದ್ದೇವೆಯೋ ಆ ದೇವನು ಅತ್ಯಂತ ದಯಾಮಯಿ ಮತ್ತು ಕರುಣಾಮಯಿ, ಲಜ್ಜೆಯ ಸ್ವಭಾವದವನು, ಸತ್ಯವಂತ, ನಿಷ್ಠಾವಂತ, ವಿನಯವಂತರಿಗೆ ಕರುಣೆ ತೋರುವವನು ಆಗಿದ್ದಾನೆ. ಆದ್ದರಿಂದ, ನೀವೂ ನಿಷ್ಠಾವಂತರಾಗಿ ಹಾಗೂ ಪರಿಶುದ್ಧ ಹೃದಯ ಮತ್ತು ನಿಷ್ಠೆಯಿಂದ ದುಆ ಮಾಡಿ, ಅವನು ನಿಮ್ಮ ಮೇಲೆ ಕರುಣೆ ತೋರುವನು. ಲೋಕದ ಗದ್ದಲದಿಂದ ದೂರವಿರಿ ಮತ್ತು ಸ್ವಾರ್ಥದ ಜಗಳಗಳಿಗೆ ಧರ್ಮದ ಬಣ್ಣವನ್ನು ನೀಡಬೇಡಿ. ಅಲ್ಲಾಹನಿಗಾಗಿ ಸೋಲನ್ನು ಆಯ್ಕೆಮಾಡಿರಿ ಮತ್ತು ಸೋಲನ್ನು ಒಪ್ಪಿಕೊಳ್ಳಿ, ಆಗ ನೀವು ದೊಡ್ಡ ದೊಡ್ಡ ವಿಜಯಗಳಿಗೆ ಉತ್ತರಾಧಿಕಾರಿಗಳಾಗುವಿರಿ.

"**ಲಾ ಇಲಾಹ ಇಲ್ಲಾ ಅಂತ ಸುಬ್ಹಾನಕ ಇನ್ನೀ ಕುಂತು ಮಿನಝ್ ಝಾಲಿಮೀನ್**" ಮತ್ತು ಹಝ್ರತ್ ಪೈಗಂಬರ್(ಸ) ಹೇಳಿರುವರು, ಯಾವುದೇ ಮುಸ್ಲಿಮನು ಈ ದುಆವನ್ನು ಯಾವುದೇ ತೊಂದರೆಯ ಸಮಯದಲ್ಲಿ ಮಾಡಿದರೆ, ಅಲ್ಲಾಹನು ಖಂಡಿತವಾಗಿಯೂ ಆ ದುಆವನ್ನು ಸ್ವೀಕರಿಸುತ್ತಾನೆ.

**ಪವಿತ್ರ ಖುರ್‌ಆನ್, ಪ್ರವಾದಿ(ಸ)ರ ಹದೀಸ್‌ಗಳು ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಧ್ಯಾಪನೆಗಳ ಬೆಳಕಿನಲ್ಲಿ ದುಆವಿನ ಮಹತ್ವದ ಕುರಿತು ವಿಶ್ವಾಸವರ್ಧಕ ಪ್ರಸ್ತಾವನೆ ಹಾಗೂ ಪವಿತ್ರ ಮಾಸ ರಮಝಾನ್‌ನ ಬಗ್ಗೆ ಜಮಾಅತ್ತಿನ ಸದಸ್ಯರಿಗೆ ಹಿತೋಪದೇಶಗಳು**

ಅಲ್ಲಾಹನು ನಮ್ಮನ್ನು ಶತ್ರುಗಳಿಂದ, ಎಲ್ಲ ವಿರೋಧಿಗಳಿಂದ ರಕ್ಷಿಸಲಿ, ಎಲ್ಲ ದೌರ್ಜನ್ಯಗಾರರಿಂದ ನಮಗೆ ಮುಕ್ತಿ ನೀಡಲಿ. ಈ ರಮಝಾನನ್ನು ನಮ್ಮ ಜೀವನದಲ್ಲಿ ನಿರಂತರ ಪರಿಶುದ್ಧ ಬದಲಾವಣೆಯನ್ನು ಉಂಟುಮಾಡುವ ಮಾರ್ಗನ್ನಾಗಿ ಮಾಡಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07-03-2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ -

اَلْحَمْدُ لِلّٰهِ رَبِّ الْعٰلَمِيْنَ ○ الرَّحْمٰنِ الرَّحِيْمِ ○ مٰلِكِ يَوْمِ الدِّيْنِ ○ إِيَّاكَ نَعْبُدُ وَإِيَّاكَ نَسْتَعِيْنُ ○

اِهْدِنَا الصِّرَاطَ الْمُسْتَقِيْمَ ○ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ○

وَ إِذَا سَأَلَكَ عِبَادِيْ عَنِّيْ فَإِنِّيْ قَرِيْبٌ أُجِيْبُ دَعْوَةَ الدَّاعِ إِذَا دَعَانِ فَلْيَسْتَجِيْبُوْا لِيْ وَ لْيُؤْمِنُوْا بِيْ لَعَلَّهُمْ يَرْشُدُوْنَ (البقرة:187)

ಅಲ್ಲಾಹನು ಹೇಳುತ್ತಾನೆ, ನನ್ನ ದಾಸರು ನನ್ನ ಬಗ್ಗೆ ನಿನ್ನೊಡನೆ ಕೇಳುವಾಗ, ಖಂಡಿತವಾಗಿಯೂ ನಾನು ಹತ್ತಿರದಲ್ಲಿದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರಿಸುತ್ತೇನೆ. ಆದ್ದರಿಂದ ಮಾರ್ಗದರ್ಶನ ಪಡೆಯಲಿಕ್ಕಾಗಿ ಅವರು ಸಹ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.

ರಮಝಾನ್ ಪ್ರಾರಂಭವಾದ ಕೂಡಲೇ ಇದು ಅನುಗ್ರಹದ ತಿಂಗಳು ಎಂದು ನಮಾಝ್‌ಗಳ ಕಡೆಗೆ ಗಮನ ಹರಿಸುವ ಆಲೋಚನೆ ತಕ್ಷಣವೇ ಮನಸ್ಸಿನಲ್ಲಿ ಬರುತ್ತದೆ. ಇದರಲ್ಲಿ ಪ್ರಾರ್ಥನೆಗಳನ್ನು ಸ್ವೀಕರಿಸಲಾಗುತ್ತದೆ, ಆದ್ದರಿಂದ ಜನರು ಸಾಮಾನ್ಯವಾಗಿ ಮಸೀದಿಯ ಕಡೆಗೆ ಹೆಚ್ಚು ಬರುತ್ತಾರೆ. ಮಸೀದಿಗಳಲ್ಲಿ ಹಾಜರಾತಿ ಹೆಚ್ಚಾಗುತ್ತದೆ, ಅದು ಫಜರ್ ನಮಾಝ್ ಆಗಿರಲಿ ಅಥವಾ ಇಶಾ

ನಮಾಝ್ ಆಗಿರಲಿ. ಸಾಮಾನ್ಯ ದಿನಗಳಲ್ಲಿ, ಫಜರ್ ಮತ್ತು ಮಗ್ರಿಬ್ ಇಶಾ ನಮಾಝ್‌ಗಳಲ್ಲಿ ರಮಝಾನಿನಲ್ಲಿ ಇರುವಷ್ಟು ಹಾಜರಾತಿ ಇರುವುದಿಲ್ಲ, ಮತ್ತು ಕನಿಷ್ಠ ಈ ದಿನಗಳಲ್ಲಿ ನಾವು ಮಸೀದಿಗೆ ಹೋಗಬೇಕು ಮತ್ತು ಅಲ್ಲಾಹನಿಂದ ಅವನ ಅನುಗ್ರಹವನ್ನು ಬೇಡಬೇಕು ಎಂದು ಜನರಿಗೆ ನೆನಪಾಗುವುದು ಅಲ್ಲಾಹನ ಅನುಗ್ರಹವಾಗಿದೆ.

ರಮಝಾನ್ ದಿನಗಳಲ್ಲಿ ನರಕದ ಬಾಗಿಲುಗಳನ್ನು ಮುಚ್ಚುತ್ತೇನೆ, ಶೈತಾನನನ್ನು ಬಂಧಿಸುತ್ತೇನೆ ಮತ್ತು ಸ್ವರ್ಗದ ಬಾಗಿಲುಗಳನ್ನು ತೆರೆಯುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ. (ಬುಖಾರಿ ಕಿತಾಬ್ ಬದಅಲ್ ಖಲ್ಕ್, ಬಾಬ್ ಸಿಫ್ತ್ ಇಬ್ಲೀಸ್ ವ ಜುನೂದಃ ಹದೀಸ್-3277)

ಆದ್ದರಿಂದ ಜನರು ರಮಝಾನಿನಲ್ಲಿ ಮಾತ್ರ ಆರಾಧನೆಯ ಅಗತ್ಯವಿದೆ ಎಂದೂ ರಮಝಾನಿನಲ್ಲಿ ಮಾಡುವ ಪ್ರಾರ್ಥನೆಗಳು ಅಥವಾ ಆರಾಧನೆಗಳೇ ನಮ್ಮ ಕ್ಷಮೆಗೆ ಕಾರಣವಾಗುವುದು ಎಂದು ಭಾವಿಸುತ್ತಾರೆ. ಅಹ್ಮದೀಯೇತರ ಇಸ್ಲಾಮಿಕ್ ಚಾನೆಲ್‌ಗಳಲ್ಲಿ, ದೇಶೀಯ ಚಾನೆಲ್‌ಗಳಲ್ಲಿ, ಈ ಹದೀಸನ್ನು ಪದೇ ಪದೇ ಪುನರಾವರ್ತಿಸಲಾಗುತ್ತದೆ, ಆದರೆ ಇದು ತಪ್ಪು ಭಾವನೆಯಾಗಿದೆ.

ಅಲ್ಲಾಹನು ರಮಝಾನಿನಲ್ಲಿ ಆರಾಧನೆಯ ಕಡೆಗೆ ಗಮನ ಹರಿಸಲು ಹೇಳಿದ್ದು, ಅದನ್ನು ನಿಮ್ಮ ಜೀವನದ ಭಾಗವಾಗಿಸಿಕೊಳ್ಳಲಿಕ್ಕಾಗಿದೆ. ಇಲ್ಲದಿದ್ದರೆ, ಕೇವಲ ರಮಝಾನಿನ ಆರಾಧನೆಗಳಿಂದ ಯಾವುದೇ ಪ್ರಯೋಜನವಿಲ್ಲ. ಬದಲಾಗಿ, ನೀವು ಒಂದು ತಿಂಗಳು ಆರಾಧಿಸಿದ್ದೀರಿ, ಹನ್ನೊಂದು ತಿಂಗಳು ಏನು ಮಾಡಿದ್ದೀರಿ ಎಂದು ಅಲ್ಲಾಹನು ಕೇಳುವನು. ಆದ್ದರಿಂದ, ರಮಝಾನಿನಲ್ಲಿ ನಮಾಝ್‌ಗಳನ್ನು ಅನುಷ್ಠಿಸುವುದು ಮತ್ತು ಮಸೀದಿಗಳನ್ನು ತುಂಬುವುದು ಮಾತ್ರ ಸಾಕು ಎಂಬ ತಪ್ಪು ತಿಳುವಳಿಕೆಯನ್ನು ಒಬ್ಬ ವ್ಯಕ್ತಿಯು ತನ್ನೊಳಗಿಂದ ತೆಗೆದುಹಾಕಬೇಕು. ಏಕೆಂದರೆ ಹಝ್ರತ್ ಪೈಗಂಬರ್(ಸ) ಹೇಳಿರುವರು: ಪೂರ್ಣ ನಂಬಿಕೆಯೊಂದಿಗೆ ಮತ್ತು ಪ್ರತಿಫಲವನ್ನು ಪಡೆಯುವ ಉದ್ದೇಶದಿಂದ ರಮಝಾನ್ ರಾತ್ರಿಗಳಲ್ಲಿ ಎದ್ದು ನಮಾಝ್ ನಿರ್ವಹಿಸುವ ವ್ಯಕ್ತಿಯ ಹಿಂದಿನ ಪಾಪಗಳನ್ನು ಕ್ಷಮಿಸಲಾಗುವುದು. (ಬುಖಾರಿ ಕಿತಾಬುಸ್ಸೌಮ್, ಬಾಬ್ ಮನ್ ಸಾಮ ರಮಝಾನ ಈಮಾನನ್....., ಹದೀಸ್-1901)

ಇದು ನಿಸ್ಸಂಶಯವಾಗಿಯೂ ಹಝ್ರತ್ ಪೈಗಂಬರ್(ಸ)ರ ನಿರ್ದೇಶನವಾಗಿದೆ. ಈಗ, ಒಬ್ಬ ವ್ಯಕ್ತಿಯು ಈ ಸದ್ಗುಣಗಳನ್ನು ತನ್ನ ಜೀವನದ ಭಾಗವಾಗಿಸಲು ನಿರಂತರವಾಗಿ ಪ್ರಯತ್ನಿಸುವಾಗ ಮತ್ತು ನಮಾಝ್‌ಗಳ ಕಡೆಗೆ ಗಮನ ಹರಿಸುವಾಗ, ತಹಜ್ಜುದ್‌ನ ಕಡೆಗೆ ಗಮನ ಹರಿಸುವಾಗ, ನವಾಫಿಲ್‌ನ ಕಡೆಗೆ ಗಮನ ಹರಿಸುವಾಗ, ರಮಝಾನಿನಲ್ಲಿ ಹೆಚ್ಚು ಗಮನವು ಉಂಟಾಗುತ್ತದೆ, ಆರಾಧಿಸುವವರು, ನಿರಂತರವಾಗಿ ಆರಾಧಿಸುವವರು ಈ ಆಲೋಚನೆಯೊಂದಿಗೆ ಈ ಕೆಲಸವನ್ನು ಮಾಡುತ್ತಾರೆ. ಆದರೆ ಕೆಲವರು ರಮಝಾನ್ನಲ್ಲಿ ರಾತ್ರಿ ಎದ್ದರೆ ಸಾಕು ಎಂದು ಭಾವಿಸುತ್ತಾರೆ. ಮನುಷ್ಯನು ತಪ್ಪುಗಳ ಮೂಟೆ, ಅವನಿಂದ ತಪ್ಪುಗಳು ಸಂಭವಿಸುತ್ತವೆ, ಆದರೆ ಅಲ್ಲಾಹನು ಬಹಳ ಕರುಣಾಮಯಿ ಮತ್ತು ದಯಾಮಯಿ, ಅವನು ಕ್ಷಮಿಸುವವನಾಗಿದ್ದಾನೆ, ಆದ್ದರಿಂದ ಅವನು ನಮಗೆ ಈ ಅವಕಾಶವನ್ನು ಒದಗಿಸಿದ್ದಾನೆ, ಒಂದು ವರ್ಷದ ಅವಧಿಯಲ್ಲಿ ನಮ್ಮಿಂದ ತಪ್ಪುಗಳು ಸಂಭವಿಸಿದ್ದರೆ, ಇನ್ನು ಮುಂದೆ ಅಲ್ಲಾಹನ ಆರಾಧನೆಯ ಹಕ್ಕನ್ನು ಪೂರೈಸುವವರಾಗುತ್ತೇನೆ ಮತ್ತು ಅಲ್ಲಾಹನು ಆದೇಶಿಸಿದ ಎಲ್ಲ ಸತ್ಕಾರ್ಯಗಳನ್ನು ಈಡೇರಿಸುತ್ತೇನೆ ಎಂದು ಈಗ ಹೊಸದಾಗಿ ಪ್ರತಿಜ್ಞೆ ಮಾಡಬೇಕು ಮತ್ತು ನೀವು ಅದರಲ್ಲಿ ನೆಲೆನಿಲ್ಲಲು ಪ್ರಯತ್ನಿಸಬೇಕು.

ಆದ್ದರಿಂದ, ನೀವು ಸನ್ಮಾರ್ಗವನ್ನು ಗಳಿಸಲಿಕ್ಕಾಗಿ ರಮಝಾನಿನ ಆರಾಧನೆಯ ಆಜ್ಞೆಯನ್ನು ಅಲ್ಲಾಹನು ನೀಡಿದ್ದಾನೆ ಎಂದು ಪ್ರತಿಯೊಬ್ಬ ಮುಸ್ಲಿಮನು ವಿಶೇಷವಾಗಿ ನೆನಪಿಟ್ಟುಕೊಳ್ಳಬೇಕು. ಸನ್ಮಾರ್ಗವು ಕೇವಲ ಒಂದು ತಿಂಗಳಲ್ಲಿ ಗಳಿಸಲಾಗುವುದಿಲ್ಲ, ಅದನ್ನು ನಿರಂತರವಾಗಿ ಗಳಿಸಬೇಕಾಗಿದೆ. ಮರೆತು ದಾರಿ ತಪ್ಪಿದ ಮನುಷ್ಯನಿಗೆ ತನ್ನ ಕರ್ತವ್ಯಗಳು ನೆನಪಾಗಲಿಕ್ಕಾಗಿ, ಅಲ್ಲಾಹನ ಹಕ್ಕುಗಳು ಮತ್ತು ಮನುಷ್ಯರ ಹಕ್ಕುಗಳು ನೆನಪಾಗಲಿಕ್ಕಾಗಿ ಮತ್ತು ತನ್ನ ಕರುಣೆಯನ್ನು ತೋರಿಸಲಿಕ್ಕಾಗಿ ಅಲ್ಲಾಹನು ಪದೇ ಪದೇ ರಮಝಾನನ್ನು ತರುತ್ತಾನೆ ಎಂದು ಅಲ್ಲಾಹನು ಹೇಳಿದ್ದಾನೆ. ಅನಂತರ ಅಲ್ಲಾಹನ ಮತ್ತು ಅವನ ದಾಸರ ಹಕ್ಕುಗಳನ್ನು ಹೇಗೆ ಪೂರೈಸಬಹುದು ಮತ್ತು ಅಲ್ಲಾಹನ ಹಕ್ಕುಗಳನ್ನು ಹೇಗೆ ಪಾಲಿಸಬಹುದು ಎಂದು ಅವನು ನೋಡಬೇಕು. **ಸಅಲಕ ಇಬಾದೀ** "ನನ್ನ ದಾಸರು ನಿನ್ನೊಡನೆ ಕೇಳುವಾಗ" ಎಂದು ಅಲ್ಲಾಹನು ಹೇಳುವಾಗ, ಇಲ್ಲಿ ನನ್ನ ದಾಸರು ಎಂದರೆ ಅಲ್ಲಾಹನನ್ನು ಪ್ರೀತಿಸುವವರು ಎಂದಾಗಿದೆ ಅದರ ಅರ್ಥ. ಒಬ್ಬ ಪ್ರೇಮಿಯು ವರ್ಷದ ಹನ್ನೊಂದು ತಿಂಗಳು ಪ್ರೀತಿಯನ್ನು ವ್ಯಕ್ತಪಡಿಸದೆ ಇದ್ದುಕೊಂಡು ಕೇವಲ ಒಂದು ತಿಂಗಳು ಮಾತ್ರ ಪ್ರೀತಿಯನ್ನು ವ್ಯಕ್ತಪಡಿಸುವುದಿಲ್ಲ. ಅಲ್ಲಾಹನ ಪ್ರೇಮಿಗಳ ಕೆಲಸವೇನು, ಅಲ್ಲಾಹನ ದಾಸರ ಕೆಲಸವೇನು ಎಂದರೆ, ಅಲ್ಲಾಹನು ಆದೇಶಿಸಿದ ಕೆಲಸವನ್ನು ನಿರಂತರವಾಗಿ ಮಾಡಲು ಪ್ರಯತ್ನಿಸುವುದು. ಹನ್ನೊಂದು ತಿಂಗಳುಗಳಲ್ಲಿ ಲೋಪಗಳು ಸಂಭವಿಸಿದ್ದರೆ, ಆ ಲೋಪಗಳು ಮತ್ತು ಕೊರತೆಗಳು ಮತ್ತೆ ಸಂಭವಿಸದಂತೆ ಆ ದಿನಗಳಲ್ಲಿ ವಿಶೇಷ ಪ್ರಯತ್ನಗಳನ್ನು ಮಾಡಬೇಕು ಅಥವಾ ವ್ಯವಸ್ಥೆ ಮಾಡಬೇಕು.

ನಿಜವಾದ ಪ್ರೇಮಿಗಳು ತಮ್ಮ ಪ್ರೀತಿಪಾತ್ರರ ಪ್ರತಿಯೊಂದು ಮಾತನ್ನು ಪಾಲಿಸುತ್ತಾರೆ. ಲೌಕಿಕ ಪ್ರೇಮಿಗಳು, ಲೌಕಿಕವಾದ ಪ್ರೇಮದಲ್ಲಿ ಇರುವ ಜನರಲ್ಲಿ ಬಹಳಷ್ಟು ಕೆಡುಕುಗಳಿರುತ್ತವೆ ಮತ್ತು ಅವುಗಳಿಂದ ಹಾನಿ ಕೂಡ ಉಂಟಾಗಬಹುದು ಅಥವಾ ಕನಿಷ್ಠ ಕೆಲವೊಮ್ಮೆ ಅವುಗಳಿಂದ ಪ್ರಯೋಜನಗಳು ಸಿಗುವುದಿಲ್ಲ, ಆದರೆ ಅಲ್ಲಾಹನನ್ನು ಪ್ರೀತಿಸುವಾಗ ಅದು ಲಾಭವನ್ನೇ ನೀಡುತ್ತದೆ. ಪ್ರಯೋಜನವನ್ನೇ ನೀಡುತ್ತದೆ, ಏಕೆಂದರೆ ಅವನು ಎಲ್ಲ ಒಳಿತಿನ ಮೂಲವಾಗಿದ್ದಾನೆ, ಎಲ್ಲ ಕೆಡುಕುಗಳಿಂದ ರಕ್ಷಿಸುವವನಾಗಿದ್ದಾನೆ, ಎಲ್ಲ ತೊಂದರೆಗಳಿಂದ ಮುಕ್ತಿ ನೀಡುವವನಾಗಿದ್ದಾನೆ. ಅವನು ಹೇಳುತ್ತಾನೆ, ನನ್ನೊಡನೆ ಬೇಡಿರಿ. ನೀವು ದುಆ ಮಾಡಿರಿ, ನಾನು ನಿಮಗೆ ಉತ್ತರ ನೀಡುತ್ತೇನೆ. ನಿಜವಾದ ಪ್ರೇಮಿಯು ಅಲ್ಲಾಹನ ಸಾಮೀಪ್ಯವನ್ನು ಬಯಸುತ್ತಾನೆ. ಆದ್ದರಿಂದ, ನಾವು ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸಬೇಕು. ನಮ್ಮ ಆರಾಧನೆಗಳಲ್ಲಿ, ರಮಝಾನಿನ ಆರಾಧನೆಗಳಲ್ಲಿ ಕೇವಲ ನಮ್ಮ ಲೌಕಿಕ ಹಿತಾಸಕ್ತಿಗಳನ್ನು ಪಡೆಯಲು ಮಾತ್ರ ದುಆ ಮಾಡಬಾರದು, ಬದಲಿಗೆ ನಮ್ಮ ಪ್ರೀತಿಪಾತ್ರನಾದ ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ದುಆ ಮಾಡಬೇಕು. ಅಲ್ಲಾಹನು ನಮಗೆ ತನ್ನ ಸಾಮೀಪ್ಯವನ್ನು ನೀಡಲಿ, ಸ್ವೀಕಾರಾರ್ಹವಾದ ಪ್ರಾರ್ಥನೆಗಳನ್ನು ಮಾಡುವ ಸೌಭಾಗ್ಯವನ್ನು ನೀಡು, ಅವನನ್ನು ಭೇಟಿಯಾಗುವ ಸೌಭಾಗ್ಯವನ್ನು ನೀಡು, ನಮ್ಮ ಉಪವಾಸಗಳನ್ನು ಸ್ವೀಕರಿಸು ಎಂದು ಅವನಲ್ಲಿ ಪ್ರಾರ್ಥಿಸಬೇಕು. ಇದು ಆಗುವಾಗ, ರಮಝಾನ್ ನಂತರವೂ ಯಾವುದೇ ಕೆಡುಕುಗಳನ್ನು ನೀವು ಮಾಡಲಾರಿರಿ, ಬದಲಿಗೆ ಸತ್ಕರ್ಮಗಳನ್ನು ಮಾಡುವ ಅವಕಾಶವು ಸಿಗುತ್ತಲೇ ಇರುವುದು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನ ಹಕ್ಕುಗಳು ಯಾವುವು, ಮನುಷ್ಯರ ಹಕ್ಕುಗಳು ಯಾವುವು, ಅವುಗಳನ್ನು ಪೂರೈಸಲು ಪ್ರಯತ್ನಿಸಿ ಎಂದು ಪದೇಪದೇ ಗಮನ ಸೆಳೆದಿದ್ದಾನೆ. ಹಝ್ರತ್ ಮಸೀಹ್ ಮೌಊದ್(ಅ) ಪವಿತ್ರ ಖುರ್‌ಆನಿನಲ್ಲಿ ಏಳುನೂರು ಆಜ್ಞೆಗಳಿವೆ ಎಂದು ಹೇಳಿದ್ದಾರೆ. (ಕಿಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಪುಟ-19, ಪುಟ-26)

ಮತ್ತು ರಮಝಾನಿನಲ್ಲಿ ಪವಿತ್ರ ಖುರ್‌ಆನ್ ಓದುವ ಕಡೆಗೆ ವಿಶೇಷವಾಗಿ ಗಮನಸೆಳೆಯಲಾಗಿದೆ ಮತ್ತು ನಾವು ಅದನ್ನು ಓದುವಾಗ ಅಲ್ಲಾಹನು ನಮಗೆ ನೀಡಿರುವ ಆಜ್ಞೆಗಳನ್ನು ಸಹ ಹುಡುಕುತ್ತೇವೆ. ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಏಳುನೂರಕ್ಕೂ ಹೆಚ್ಚು ಆಜ್ಞೆಗಳ ಬಗ್ಗೆ ತಿಳಿಸಿದ್ದಾರೆ. ಆದ್ದರಿಂದ, ನಾವು ಆ ಆಜ್ಞೆಗಳನ್ನು ಹುಡುಕುವಾಗ, ನಾವು ಅವುಗಳನ್ನು ಪಾಲಿಸಲು ಪ್ರಯತ್ನಿಸುವೆವು ಮತ್ತು ಇದು ನಿಜವಾದ ಪ್ರೇಮಿಯ ಕೆಲಸವಾಗಿದೆ, ಏಕೆಂದರೆ ತನ್ನ ಪ್ರೀತಿಪಾತ್ರನ ಮಾತುಗಳನ್ನು ಪಾಲಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಬೇಕು, ಏಕೆಂದರೆ ಮಾರ್ಗದರ್ಶನ ಪಡೆಯಲಿಕ್ಕಾಗಿ ನನ್ನನ್ನು ನಂಬಬೇಕು ಎಂದು ನನ್ನ ದಾಸರಿಗೆ ಹೇಳಬೇಕು ಎಂಬುದಾಗಿ ಹಝ್ರತ್ ಪೈಗಂಬರ್(ಸ)ರೊಡನೆ ಅಲ್ಲಾಹನು ಹೇಳಿದ್ದಾನೆ. ಪರಿಪೂರ್ಣ ನಂಬಿಕೆ ಎಂದರೆ ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ಪ್ರಾಮಾಣಿಕವಾಗಿ ಅನುಸರಿಸುವುದು. ನಾನು ಹೇಳಿದಂತೆ, ನಂಬಿಕೆ ಮತ್ತು ಸತ್ಕರ್ಮಗಳು ಜೊತೆಯಾಗಿ ಸಾಗುವ ವಿಷಯಗಳಾಗಿವೆ. ಆದ್ದರಿಂದ, ಈ ವಚನದಲ್ಲಿ, ನನ್ನ ಮಾತಿಗೆ ಓಗೊಡಿರಿ ಎಂದು ಸಹ ಹೇಳಲಾಗಿದೆ. ಆ ಮಾತುಗಳೆಂದರೆ ಸತ್ಕರ್ಮಗಳನ್ನು ಮಾಡಬೇಕು, ಸತ್ಕಾರ್ಯಗಳಲ್ಲಿ ಸ್ಥಿರವಾಗಿ ನಿಲ್ಲಬೇಕು ಎಂದಾಗಿದೆ. ಆರಾಧನೆ ಮಾಡುವಾಗ ದುಆಗಳನ್ನು ಮಾಡಿದರೆ, ಆಗ ನಾನು ನಿಮ್ಮ ಸ್ನೇಹಿತನಾಗುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ, ಇನ್ನೊಂದು ಸ್ಥಳದಲ್ಲಿ ಹೇಳಿರುವಂತೆ, "**ಅಲ್ಲಾಹು ವಲಿಯ್ಯುಲ್ಲಜೀನ ಆಮನೂ**" ಅಂದರೆ ಅಲ್ಲಾಹನು ಸತ್ಯವಿಶ್ವಾಸಿಗಳ ಸ್ನೇಹಿತನಾಗಿರುತ್ತಾನೆ ಮತ್ತು ಅಲ್ಲಾಹನ ಸ್ನೇಹ ಮತ್ತು ನಂಬಿಕೆ ನಿಮಗೆ ಅಲ್ಲಾಹನ ಸಾಮೀಪ್ಯವನ್ನು ನೀಡುತ್ತದೆ ಮತ್ತು ನಂತರ ಈ ಸಾಮೀಪ್ಯವು ನೀಡುತ್ತಲೇ ಇರುತ್ತಾನೆ, ಅದರಲ್ಲಿ ಪ್ರಗತಿಯು ಉಂಟಾಗುತ್ತಲೇ ಇರುತ್ತದೆ. ಈ ಸಾಮೀಪ್ಯವು ಒಂದೆಡೆ ನಿಲ್ಲುವಂತದ್ದಲ್ಲ. ಅವನು ದುಆಗಳನ್ನು ಸಹ ಕೇಳುವನು.

ಆದ್ದರಿಂದ, ರಮಝಾನಿನಲ್ಲಿ ಈ ಸ್ಥಾನವನ್ನು ಪಡೆಯಲು ನಾವು ಪ್ರಯತ್ನಿಸಬೇಕು ಮತ್ತು ನಾವು ಈ ಸ್ಥಾನದಿಂದ ಹಿಂದೆ ಸರಿದರೆ ಮತ್ತು ರಮಝಾನಿನಲ್ಲಿ ಮಾಡಿದಂತೆ ಈ ಆರಾಧನೆಗಳನ್ನು ಪೂರೈಸದಿದ್ದರೆ ಮತ್ತು ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸದಿದ್ದರೆ, ಅಲ್ಲಾಹನು ಹೇಗೆ ಸ್ನೇಹಿತನಾಗುವನು ಎಂದು ನಾವು ಯೋಚಿಸಬೇಕು. ಆಗ ಅಲ್ಲಾಹನು ಸ್ನೇಹಿತನಾಗಲು ಸಾಧ್ಯವಿಲ್ಲ. ಅಲ್ಲಾಹನು ಕೂಡ ಕೆಲವು ನಿಬಂಧನೆಗಳನ್ನು ಇರಿಸಿದ್ದಾನೆ. ಪ್ರಾರ್ಥನೆಗಳ ಸ್ವೀಕಾರಕ್ಕೂ ಕೆಲವು ಶರತ್ತುಗಳನ್ನು ಇಟ್ಟಿದ್ದಾನೆ.

ಅಲ್ಲಾಹನು ಮೊದಲನೆಯದಾಗಿ ಹೀಗೆ ಹೇಳಿದ್ದಾನೆ: ಒಬ್ಬನು ದಾಸನಾಗಿರಬೇಕು, ಸಂಪೂರ್ಣವಾಗಿ ಅಲ್ಲಾಹನವನು ಆಗಿರಬೇಕು,

ಸಂಪೂರ್ಣವಾಗಿ ಅವನನ್ನು ಆರಾಧಿಸಬೇಕು, ಅವನನ್ನು ಎಲ್ಲ ಶಕ್ತಿಗಳ ಮೂಲವೆಂದು ಪರಿಗಣಿಸಬೇಕು ಮತ್ತು ಯಾವುದೇ ಲೌಕಿಕ ದೇವರುಗಳನ್ನು ಮಾಡಿಕೊಳ್ಳಬಾರದು, ಮಿಥ್ಯ ದೇವರುಗಳನ್ನು ಆರಾಧಿಸಬಾರದು. ಸಣ್ಣ ಸಣ್ಣ ಜನರನ್ನು ತಮ್ಮ ಉದ್ದೇಶಗಳಿಗಾಗಿ ತಾನರಿಯದೇ ತಮ್ಮ ದೇವರುಗಳನ್ನಾಗಿ ಮಾಡಿಕೊಳ್ಳಬಾರದು. ಇದು ಶಿರ್ಕಿನ ಕಡೆಗೆ ಕೊಂಡುಹೋಗುವುದು. ಕೆಲವು ದಿನಗಳ ಹಿಂದೆ ಜರ್ಮನಿಯಿಂದ ಹಿಫಾಝುತೇ ಖಾಸಿನ ಖುದ್ದಾಮರು ಬಂದಿದ್ದರು, ತಮ್ಮ ಮೇಲಾಧಿಕಾರಿಗಳನ್ನು ಹೇಗೆ ಸಂತೋಷಪಡಿಸುವುದು ಎಂದು ಅವರು ಕೇಳುತ್ತಿದ್ದರು, ನೀವು ಮಾಡುವ ಕೆಲಸವನ್ನು ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಮಾಡಿ ಎಂದು ನಾನು ಅವರೊಡನೆ ಹೇಳಿದ್ದೆ. ಅಲ್ಲಾಹನ ಸಂಪ್ರೀತಿ ಗಳಿಸಲು ಕೆಲಸ ಮಾಡಿದರೆ, ಅಲ್ಲಾಹನು ಸ್ವತಃ ನಿಮ್ಮ ಅಧಿಕಾರಿಗಳ ಗಮನವನ್ನು ಸಹ ಅವರ ಕಡೆಗೆ ತಿರುಗಿಸುವನು ಮತ್ತು ಅವರು ನಿಮ್ಮ ಒಳಿತಿಗಾಗಿ ಪ್ರಯತ್ನಿಸುವರು ಮತ್ತು ನಿಮ್ಮ ಮೇಲೆ ಕರುಣೆ ಮತ್ತು ದಯೆಯಿಂದ ವರ್ತಿಸುವರು, ಆದರೆ ಮುಖ್ಯ ವಿಷಯವೇನೆಂದರೆ ಅಲ್ಲಾಹನಿಂದ ಅವನ ಕರುಣೆ ಮತ್ತು ದಯೆಯನ್ನು ಬೇಡಬೇಕು ಮತ್ತು ಅವನ ಆಜ್ಞೆಗಳನ್ನು ಪಾಲಿಸಲು ಪ್ರಯತ್ನಿಸಬೇಕು.

ಈಗ ನಾವು ಹಝ್ರತ್ ಚೌಧರಿ ಝುಫರುಲ್ಲಾಹ್ ಖಾನ್ ಸಾಹೇಬರ ಉದಾಹರಣೆಯನ್ನು ನೀಡುತ್ತೇವೆ, ಅವರು ಒಮ್ಮೆ ರಾಣಿಯ ಆಸ್ಥಾನದಲ್ಲಿ ಹೇಗೆ ಅಸ್ವಸ್ಥತೆಯನ್ನು ವ್ಯಕ್ತಪಡಿಸಿದರು ಎಂಬುದರ ಬಗ್ಗೆ. ಅವರು ಅಲ್ಲಿ ಕುಳಿತಿದ್ದರು ಮತ್ತು ಪದೇ ಪದೇ ತಮ್ಮ ಗಡಿಯಾರವನ್ನು ನೋಡುತ್ತಿದ್ದರು. ಅಧಿಕಾರಿಗಳು ಕಾರಣವನ್ನು ಕೇಳಿದಾಗ, ಅವರು ಹೇಳಿದರು: ನನ್ನ ಆರಾಧನೆಯ ಸಮಯವಾಗಿದೆ ಮತ್ತು ಈಗ ಆರಾಧನೆಯ ಸಮಯ ಸಮೀಪಿಸುತ್ತಿದೆ. ಇದು ಅಲ್ಲಾಹನ ಆಜ್ಞೆಯಾಗಿದೆ, ಅದನ್ನು ನಾನು ಮಾಡಲೇ ಬೇಕು. ಆದ್ದರಿಂದ ಆ ಸಮಯ ದಾಟಿಹೋಗಬಾರದು ಎಂದು ನಾನು ಅಸ್ವಸ್ಥನಾಗಿದ್ದೇನೆ, ಆಗ ಅಧಿಕಾರಿಗಳು ಅದರ ವ್ಯವಸ್ಥೆ ಮಾಡಿದರು. ಇದಾಗಿದೆ ಧೈರ್ಯ. ಇದು ಪ್ರತಿಯೊಬ್ಬ ಅಹ್ಮದಿಯಲ್ಲಿರಬೇಕಾದ ಸತ್ಯವಿಶ್ವಾಸದ ಮಟ್ಟವಾಗಿದೆ. ನಾವು ಉದಾಹರಣೆಗಳನ್ನು ನೀಡುತ್ತೇವೆ, ಅದರ ಜೊತೆಗೆ ನಾವು ಈ ಮಾದರಿಗಳನ್ನು ಪಾಲಿಸಲೂ ಬೇಕು. (ಮಾಹ್‌ನಾಮ ಖಾಲಿದ್ ರಬ್ವಾಹ್, ಡಿಸೆಂಬರ್ 1985, ಜನವರಿ 1986, ಪುಟ–89)

ಹಝ್ರತ್ ಪೈಗಂಬರ್(ಸ) ಸತ್ಕರ್ಮಗಳ ಕಡೆಗೆ ಗಮನ ಸೆಳೆಯಲು ನಮಗೆ ಅಸಂಖ್ಯಾತ ವಿಷಯಗಳನ್ನು ಹೇಳಿದ್ದಾರೆ. ಅಸಂಖ್ಯಾತ ಹದೀಸುಗಳಿವೆ.

ಈ ಕಾಲಘಟ್ಟದಲ್ಲಿ ಹಝ್ರತ್ ಪೈಗಂಬರ್(ಸ)ರ ಪ್ರಾಮಾಣಿಕ ಗುಲಾಮರಾದ ಮತ್ತು ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ) ಸತ್ಕರ್ಮಗಳ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಅವರ ಬೈಅತಿನ ಶರತ್ತುಗಳಲ್ಲಿ ಹೆಚ್ಚಿನ ಶರತ್ತುಗಳೂ ಅಲ್ಲಾಹನ ಹಕ್ಕುಗಳು ಮತ್ತು ಮನುಷ್ಯರ ಹಕ್ಕುಗಳ ಕಡೆಗೆ ಗಮನ ಹರಿಸಬೇಕು ಎಂದಾಗಿದೆ. ಆದ್ದರಿಂದ ಇವು ನಾವು ಗಮನ ಹರಿಸಬೇಕಾದ ವಿಷಯಗಳಾಗಿವೆ. ಮತ್ತು ನಾವು ಹಾಗೆ ಮಾಡುವಾಗ, ಅಲ್ಲಾಹನು ನಮ್ಮ ಮಿತ್ರನಾಗುತ್ತಾನೆ, ನಮ್ಮ ಸ್ನೇಹಿತನಾಗುತ್ತಾನೆ ಮತ್ತು ನಮ್ಮ ದುಆಗಳನ್ನು ಸಹ ಕೇಳುತ್ತಾನೆ.

ಹಝ್ರತ್ ಪೈಗಂಬರ್(ಸ) ಹೇಳಿರುವರು: "ಸಹನೆಯಿಂದಿರುವ ಮತ್ತು ನಾನು ಬಹಳ ದುಆ ಮಾಡಿದ್ದೇನೆ, ಅಲ್ಲಾಹನು ಕೇಳುವುದೇ ಇಲ್ಲ ಎಂದು ಹೇಳದಿರುವ ಜನರ ದುಆಗಳನ್ನು ಅಲ್ಲಾಹನು ಆಲಿಸುತ್ತಾನೆ. ಹೀಗೆ ಹೇಳುವುದು ಕುಫ್ರ್ ಆಗಿದೆ ಮತ್ತು ಸತ್ಯವಿಶ್ವಾಸದಿಂದ ದೂರ ಕೊಂಡೊಯ್ಯುವ ಮಾತುಗಳಾಗಿವೆ. ಒಬ್ಬ ಸತ್ಯವಿಶ್ವಾಸಿಯು ಯಾವಾಗಲೂ ಇದರಿಂದ ದೂರವಿರಬೇಕು."

ಆದ್ದರಿಂದ, ಇವು ನಾವು ಗಮನ ಹರಿಸಬೇಕಾದ ವಿಷಯಗಳಾಗಿವೆ. ಕೆಲವರು ನನಗೂ ಬರೆಯುತ್ತಾರೆ: "ನಾವು ಬಹಳ ದುಆ ಮಾಡಿದ್ದೇವೆ." ಮೊದಲನೆಯದಾಗಿ ಅವರು ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ದುಆ ಮಾಡಿಲ್ಲ. ಅವರು ತಮ್ಮ ಲೌಕಿಕ ಉದ್ದೇಶಕ್ಕಾಗಿ ದುಆ ಮಾಡಿದ್ದಾರೆ ಮತ್ತು ಲೌಕಿಕ ಸಮಸ್ಯೆಗಳು ಉಂಟಾದಾಗ ಮಾತ್ರ ದುಆ ಮಾಡುತ್ತಾರೆ. ಕೇವಲ ಲೌಕಿಕ ಸಮಸ್ಯೆಗಳ ಪರಿಹಾರಕ್ಕಾಗಿ ಮಾತ್ರ ಅಲ್ಲಾಹನ ಹತ್ತಿರ ಹೋದರೆ, ಅಲ್ಲಾಹನು ಏಕೆ ಅಂತಹ ಮಾತುಗಳನ್ನು ಕೇಳಬೇಕು? ಒಬ್ಬ ಸ್ನೇಹಿತನು ಸಾಮಾನ್ಯ ಅವಸ್ಥೆಗಳಲ್ಲಿಯೂ ಸ್ನೇಹದ ಹಕ್ಕನ್ನು ಪೂರೈಸುವಾಗ ಮತ್ತು ಅವನ ಮಾತುಗಳನ್ನು ಕೇಳುವಾಗ, ಪಾಲಿಸುವಾಗ ಮಾತ್ರ ಸ್ನೇಹದ ಹಕ್ಕನ್ನು ಪೂರೈಸುತ್ತಾನೆ, ಆಗ ಅವನು ನಿಮ್ಮ ಮಾತುಗಳನ್ನು ಸಹ ಕೇಳುವನು.

ಆದ್ದರಿಂದ, ನಾವು ಕೇವಲ ನಮ್ಮ ಉದ್ದೇಶಗಳಿಗಾಗಿ, ನಮ್ಮ ಲೌಕಿಕ ಕೆಲಸಗಳಿಗಾಗಿ ಅಲ್ಲಾಹನ ಬಳಿಗೆ ಹೋಗಬಾರದು, ಬದಲಿಗೆ ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಅಲ್ಲಾಹನ ಬಳಿಗೆ ಹೋಗಲು ಪ್ರಯತ್ನಿಸಬೇಕು ಎಂದು ಸದಾ ನೆನಪಿಟ್ಟುಕೊಳ್ಳಬೇಕು ಮತ್ತು ನಾವು ಇದನ್ನು ಮಾಡುವಾಗ, ಅಲ್ಲಾಹನು ಖಂಡಿತವಾಗಿಯೂ ನಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುವನು ಮತ್ತು ಆಲಿಸುವನು, ಅವುಗಳಿಗೆ ಉತ್ತರವನ್ನೂ ನೀಡುವನು. ಇನ್ಶಾ ಅಲ್ಲಾಹ್. ಏಕೆಂದರೆ ಅವನು ಸ್ವತಃ ತನ್ನ ದಾಸರಿಗೆ ಉತ್ತರಿಸುತ್ತೇನೆ ಎಂದು ಹೇಳಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದು ಇಬ್ಬರು ಸ್ನೇಹಿತರ ನಡುವಿನ ವಿಷಯವಾಗಿದೆ, ಕೆಲವೊಮ್ಮೆ ಸ್ನೇಹಿತನು ತನ್ನ ಸ್ನೇಹಿತನ ಮಾತನ್ನು ಒಪ್ಪಿಕೊಳ್ಳುತ್ತಾನೆ, ಕೆಲವೊಮ್ಮೆ ಸ್ನೇಹಿತನು ತನ್ನ ಮಾತನ್ನು ಒಪ್ಪುವಂತೆ ಮಾಡುತ್ತಾನೆ. ಅದೇ ರೀತಿ ಅಲ್ಲಾಹನು ವರ್ತಿಸುತ್ತಾನೆ, ಆದರೆ ಬಾಹ್ಯವಾಗಿ ಒಬ್ಬ ಸತ್ಯವಿಶ್ವಾಸಿಯ ಪ್ರಾರ್ಥನೆಯನ್ನು ಅಲ್ಲಾಹನು ತಿರಸ್ಕರಿಸಿದಾಗಲೂ, ವಾಸ್ತವವಾಗಿ ಅಲ್ಲಾಹನು ಹಾಗೆ ಮನುಷ್ಯನ ಒಳಿತಿಗಾಗಿ ಮಾಡುತ್ತಿರುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವ ಮಾತುಗಳ ಅರ್ಥ ಇದಾಗಿದೆ, ಏಕೆಂದರೆ ನಾನು ದುಆ ಮಾಡಿದ್ದೇನೆ ಎಂದು ಹೇಳುವಾಗ ಮೊದಲನೆಯದಾಗಿ ದುಆ ಕೇವಲ ಲೌಕಿಕ ಉದ್ದೇಶಗಳಿಗಾಗಿ ಮಾತ್ರ ಮಾಡಲ್ಪಟ್ಟಿರುತ್ತದೆ. ದೀನಿಗಾಗಿ ಮತ್ತು ಈಮಾನನ್ನು ಉತ್ತಮಗೊಳಿಸಲು, ದೀನಿನಲ್ಲಿ ಅಭಿವೃದ್ಧಿ ಹೊಂದಲು, ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಯಾವುದೇ ದುಆ ಮಾಡಲಾಗಿರುವುದಿಲ್ಲ. ಕೆಲವೊಮ್ಮೆ ಒಬ್ಬ ಸತ್ಯವಿಶ್ವಾಸಿಯ ದುಆಗಳೂ ಕೂಡ ಸ್ವೀಕರಿಸಲ್ಪಡುವುದಿಲ್ಲ. ಇದರ ಕುರಿತು ಹಝ್ರತ್ ಮಸೀಹ್ ಮೌಊದ್ (ಅ) ಹೇಳಿರುವುದೇನೆಂದರೆ, ಇದು ಸ್ನೇಹದ ವಿಷಯವಾಗಿದೆ, ಕೆಲವೊಮ್ಮೆ ಒಪ್ಪಿಕೊಳ್ಳುತ್ತಾನೆ, ಕೆಲವೊಮ್ಮೆ ಒಪ್ಪಿಕೊಳ್ಳುವುದಿಲ್ಲ ಮತ್ತು ಒಪ್ಪಿಕೊಳ್ಳದಿರುವ ವಿಷಯಗಳಲ್ಲಿಯೂ ಅಲ್ಲಾಹನು ತನ್ನ ಸ್ನೇಹಿತನ ಒಳಿತಿಗಾಗಿ ಹಾಗೆ ಮಾಡುತ್ತಾನೆ. ಅವನು ಒಪ್ಪಿಕೊಳ್ಳದ ವಿಷಯಗಳಿಗೆ ಬದಲಾಗಿ ಇತರ ವಿಧಾನಗಳ ಮೂಲಕ ಪ್ರತಿಫಲವನ್ನು ನೀಡುತ್ತಾನೆ.

ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ: ನನ್ನ ದಾಸರು ನನ್ನ ಬಗ್ಗೆ ಪ್ರಶ್ನಿಸುವಾಗ, ದೇವನ ಅಸ್ತಿತ್ವಕ್ಕೆ ಪುರಾವೆ ಏನು ಎಂದು ಕೇಳುವಾಗ ಆಗ ಅದರ ಉತ್ತರವೆಂದರೆ, ನಾನು ಬಹಳ ಹತ್ತಿರದಲ್ಲಿದ್ದೇನೆ, ಅಂದರೆ ದೊಡ್ಡ ಪುರಾವೆಗಳ ಅಗತ್ಯವಿಲ್ಲ, ನನ್ನ ಅಸ್ತಿತ್ವವನ್ನು ಹತ್ತಿರದ ವಿಧಾನದಿಂದ ಅರ್ಥಮಾಡಿಕೊಳ್ಳಬಹುದು. ನನ್ನ ಅಸ್ತಿತ್ವಕ್ಕೆ ಅತ್ಯಂತ ಸುಲಭವಾಗಿ ಪುರಾವೆ ಸಿಗುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ, ಪುರಾವೆ ಏನೆಂದರೆ, ಪ್ರಾರ್ಥಿಸುವವನು ನನ್ನನ್ನು ಕರೆಯುವಾಗ, ನಾನು ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆ ಮತ್ತು ದಿವ್ಯವಾಣಿಯ ಮೂಲಕ ಯಶಸ್ಸಿನ ಭರವಸೆಯನ್ನು ನೀಡುತ್ತೇನೆ, ಇದರಿಂದ ನನ್ನ ಅಸ್ತಿತ್ವದ ಬಗ್ಗೆ ಮಾತ್ರವಲ್ಲದೆ ನನ್ನ ಸಾಮರ್ಥ್ಯದ ಬಗ್ಗೆಯೂ ದೃಢವಾದ ನಂಬಿಕೆ ಉಂಟಾಗುವುದು. ಅಲ್ಲಾಹನು ಆಲಿಸುವಾಗ, ಉತ್ತರವನ್ನೂ ನೀಡುತ್ತಾನೆ.

ನಮ್ಮ ರಿವ್ಯೂ ಆಫ್ ರಿಲಿಜನ್ಸ್‌ನವರು ಹಲವು ವರ್ಷಗಳಿಂದ ಗಾಡ್ ಸಮ್ಮಿಟ್ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದ್ದಾರೆ. ಅವರು ವಿವಿಧ ಸಂದರ್ಭಗಳಲ್ಲಿ ನಡೆಸಿದ್ದಾರೆ, ಈ ವರ್ಷವೂ ನಡೆಸಿದ್ದಾರೆ ಮತ್ತು ಜನರು ತಮ್ಮ ದುಆಗಳ ಸ್ವೀಕಾರದ ಘಟನೆಗಳನ್ನು ಅದರಲ್ಲಿ ಹೇಳುತ್ತಾರೆ. ಅಲ್ಲಾಹನು ಅವರ ಪ್ರಾರ್ಥನೆಗಳನ್ನು ಹೇಗೆ ಆಲಿಸಿದನು ಮತ್ತು ಆ ಪ್ರಾರ್ಥನೆಗಳ ಸ್ವೀಕಾರದಿಂದ ಅವರಿಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ಹೇಗೆ ನಂಬಿಕೆ ಉಂಟಾಯಿತು ಎಂಬುದಾಗಿ ಅದರಲ್ಲಿ ವಿವರಿಸಿದ್ದಾರೆ. ಆದರೆ ಶರತ್ತು ಏನೆಂದರೆ, ಜನರು ತಖ್ವಾ ಮತ್ತು ದೇವಭಕ್ತಿಯ ಸ್ಥಿತಿಯನ್ನು ತಮ್ಮೊಳಗೆ ಉಂಟುಮಾಡಬೇಕು, ಆಗ ನಾನು ಅವರ ಕರೆಯನ್ನು ಕೇಳುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ.

ತಕ್ವಾದ ಸ್ಥಿತಿಯನ್ನು ಉಂಟುಮಾಡಿ, ದೇವಭಕ್ತಿಯನ್ನು ಉಂಟುಮಾಡಿ, ಆಗ ನಾನು ಅವರ ಕರೆಯನ್ನು ಕೇಳುವೆನು ಎಂದು ಅಲ್ಲಾಹನು ಹೇಳುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತಖ್ವದ ಸ್ಥಿತಿ ಮತ್ತು ದೇವಭಕ್ತಿಯ ಸ್ಥಿತಿಯನ್ನು ಉಂಟುಮಾಡುವಾಗ ನಾನು ಆಲಿಸುತ್ತೇನೆ, ಸುಮ್ಮನೆ ಸ್ವೀಕಾರ ಮಾಡುವುದಿಲ್ಲ ಎಂದು ಅಲ್ಲಾಹನು ಹೇಳುತ್ತಾನೆ. ಈಗ ಈ ದೇವಭಕ್ತಿ ಮತ್ತು ತಖ್ವದ ಸ್ಥಿತಿಯನ್ನು ನಿಮ್ಮ ಕರೆಯನ್ನು ಅಲ್ಲಾಹನು ಆಲಿಸುವಂತೆ ಮಾಡಲು ಉಂಟುಮಾಡಬೇಕು. ಪವಿತ್ರ ಖುರ್‌ಆನಿನ ಈ ವಚನವನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನನ್ನು ನಂಬಬೇಕು, ಪ್ರಾರ್ಥಿಸುವವನಿಗೆ ಪರಿಪೂರ್ಣ ಜ್ಞಾನ ಲಭಿಸಲಿಕ್ಕಾಗಿ ಮೊದಲು, ದೇವನು ಅಸ್ತಿತ್ವದಲ್ಲಿದ್ದಾನೆ ಮತ್ತು ಎಲ್ಲ ಶಕ್ತಿಗಳು ಮತ್ತು ಸಾಮರ್ಥ್ಯಗಳನ್ನು ಹೊಂದಿದ್ದಾನೆ ಎಂದು ಪ್ರಾರ್ಥಿಸುವವನು ಒಪ್ಪಿಕೊಳ್ಳಬೇಕು, ಏಕೆಂದರೆ ನಂಬಿಕೆ ಇಡುವವನಿಗೆ ಜ್ಞಾನವನ್ನು ನೀಡಲಾಗುತ್ತದೆ. ಈಗ ಅಲ್ಲಾಹನು ಈ ವಚನದಲ್ಲಿ **ಫಲಿಯಸ್ತಜೀಬೂ ಲೀ ವಲ್ಯೂಮಿನೂ ಬಿ** ಎಂದು ಹೇಳಿದ್ದಾನೆ, ಅಂದರೆ ನನ್ನ ದಾಸರು ನನ್ನ ಮಾತಿಗೆ ಓಗೊಡಬೇಕು ಮತ್ತು ನನ್ನನ್ನು ನಂಬಬೇಕು. ಅಲ್ಲಾಹನು ತನ್ನ ಸತ್ಯವಿಶ್ವಾಸಿಗಳಾದ ನಿಜವಾದ ದಾಸರಿಗೆ ಇದನ್ನು ಹೇಳುತ್ತಿದ್ದಾನೆ.

ಕೆಲವೊಮ್ಮೆ, ನಾನು ಮೊದಲೇ ಹೇಳಿದಂತೆ, ದೌರ್ಬಲ್ಯದ ಸ್ಥಿತಿಯೂ ಉಂಟಾಗುತ್ತದೆ, ಆಗ ಅಲ್ಲಾಹನ ಹತ್ತಿರ ಹೋಗಿ ಅವರು ತಮ್ಮ ನಂಬಿಕೆಗಳನ್ನು ಬಲಪಡಿಸಿಕೊಳ್ಳಬೇಕು. ಮತ್ತು ಈ ಸ್ಥಿತಿ ಉಂಟಾಗುವಾಗ, ಎಲ್ಲ ಶಕ್ತಿಗಳ ಒಡೆಯನಾಗಿರುವ ಅಲ್ಲಾಹನ ಮೇಲಿನ ನಂಬಿಕೆಯೂ ವೃದ್ಧಿಸುತ್ತಲೇ ಹೋಗುವುದು, ನನ್ನ ದಾಸನು ತುಂಬಾ ಹತ್ತಿರ ಬರಲು ಪ್ರಯತ್ನಿಸುತ್ತಿದ್ದಾನೆ ಎಂದು ಅವನು ನೋಡುವಾಗ, ಅವನು ದಾಸನ ವಿಶ್ವಾಸವನ್ನು ಹೆಚ್ಚಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅವನಿಗೆ ಜ್ಞಾನವನ್ನು ನೀಡಲಾಗುತ್ತದೆ. ಎಂದರೆ ಈ ಸ್ಥಿತಿಯಲ್ಲಿ ಅಲ್ಲಾಹನು ಅವನ ದುಆಗಳನ್ನು

ಸಹ ಕೇಳುವನು ಮತ್ತು ಅವನಿಗೆ ಅಲ್ಲಾಹನ ಕುರಿತು ಪರಿಜ್ಞಾನ ಸಹ ಉಂಟಾಗುವುದು. ಯಾವುದಾದರೂ ಪ್ರಾರ್ಥನೆಯನ್ನು ಸ್ವೀಕಾರ ಮಾಡದೇ ಇದ್ದರೆ ಕೂಡ ಅವನಿಗೆ ಎಂತಹ ಸಮಾಧಾನವನ್ನು ನೀಡುವನು ಎಂದರೆ, ಇದರಿಂದ ಅವನಿಗೆ ಅಲ್ಲಾಹನು ನನ್ನ ಪ್ರಾರ್ಥನೆಯನ್ನು ಸ್ವೀಕಾರ ಮಾಡಲಿಲ್ಲ ಎಂಬ ಭಾವನೆ ಬರುವುದಿಲ್ಲ. ಅಲ್ಲಾಹನು ಬೇರೆ ರೀತಿಯಲ್ಲಿ ಅವನ ಅಗತ್ಯಗಳನ್ನು ಪೂರೈಸುವನು ಎಂಬ ಭಾವನೆ ಅವನಿಗೆ ಬರುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ದೇವಭಕ್ತಿ ಇರಬೇಕು. ಅಲ್ಲಾಹನ ಹಕ್ಕುಗಳನ್ನು ಪೂರೈಸುವುದರ ಜೊತೆಗೆ ಮನುಷ್ಯರ ಹಕ್ಕುಗಳನ್ನು ಪೂರೈಸುವುದು ದೇವಭಕ್ತಿಯಾಗಿದೆ. ಹಾಗಾದರೆ, ನಾನು ನಿಮ್ಮ ಪ್ರಾರ್ಥನೆಯನ್ನು ಕೇಳುತ್ತೇನೆ. ಅನಂತರ ಸತ್ಯವಿಶ್ವಾಸ ಮತ್ತು ದೃಢನಂಬಿಕೆಯಲ್ಲಿ ಮನುಷ್ಯನು ಅಭಿವೃದ್ಧಿಪಡುತ್ತಲೇ ಹೋಗಬೇಕು ಎಂದು ಅಲ್ಲಾಹನು ಹೇಳುತ್ತಾನೆ. ಒಂದು ರೀತಿಯ ಪರಿಜ್ಞಾನವು ಉಂಟಾಗುತ್ತದೆ, ನಂತರ ಜ್ಞಾನದಲ್ಲಿ ಮತ್ತಷ್ಟು ಅಭಿವೃದ್ಧಿ ಉಂಟಾಗುತ್ತದೆ.

ನಂತರ, ಪವಿತ್ರ ಖುರ್‌ಆನಿನಲ್ಲಿ "**ಯೂಮಿನೂನ ಬಿಲ್ ಗೈಬ್**" ಅಂದರೆ ಅದೃಶ್ಯದಲ್ಲಿ ನಂಬಿಕೆ ಇರಿಸುತ್ತಾರೆ ಎಂದು ಸತ್ಯವಿಶ್ವಾಸಿಗಳ ಬಗ್ಗೆ ಹೇಳಲಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಅದರ ಅತ್ಯಂತ ಸೂಕ್ಷ್ಮವಾದ ವಿವರಣೆಯನ್ನು ನೀಡಿದ್ದಾರೆ. ಒಂದೆಡೆ ಅವರು ಹೇಳುತ್ತಾರೆ: ಗೈಬ್ ಎಂಬುದು ಸಹ ಅಲ್ಲಾಹನ ಒಂದು ಗುಣನಾಮವಾಗಿದೆ.
(ಮಲ್‌ಫೂಝಾತ್, ಸಂಪುಟ-10, ಪುಟ-11, ಎಡಿಷನ್ 2022)

ಪ್ರತಿಯೊಂದು ಪ್ರಾರ್ಥನೆಗೆ ಮೊದಲು ದೇವನು ಇದ್ದಾನೆ ಮತ್ತು ಅವನು ಅನಂತ ಗುಣಗಳನ್ನು ಹೊಂದಿದ್ದಾನೆ, ಎಲ್ಲ ಶಕ್ತಿಗಳು ಮತ್ತು ಸಾಮರ್ಥ್ಯಗಳನ್ನು ಹೊಂದಿದ್ದಾನೆ ಎಂಬ ನಂಬಿಕೆ ಇರಬೇಕು. ಈ ನಂಬಿಕೆಯೊಂದಿಗೆ ಅಲ್ಲಾಹನ ಕಡೆಗೆ ಧಾವಿಸುವಾಗ, ಅವನ ಮುಂದೆ ಬಾಗುವಾಗ, ಅವನೊಡನೆ ದುಆ ಮಾಡುವಾಗ, ಆಗ ನಿಮಗೆ ಅಲ್ಲಾಹನ ಸಂಪೂರ್ಣ ಪರಿಚಯವಾಗುತ್ತದೆ, ಜ್ಞಾನವು ಲಭಿಸುತ್ತದೆ ಮತ್ತು ಪ್ರಾರ್ಥನೆಯ ಸ್ವೀಕಾರದ ಚಿಹ್ನೆಗಳನ್ನು ಸಹ ನೋಡುವಿರಿ. ಅಲ್ಲಾಹನ ಕೃಪೆಯಿಂದ ಅನೇಕ ಜನರು ನೋಡುತ್ತಾರೆ, ಕೆಲವು ಘಟನೆಗಳನ್ನು ಸಹ ವಿವರಿಸುತ್ತಾರೆ, ನಾನು ಹೇಳಿದಂತೆ, ಗಾಡ್ ಸಮ್ಮಿಟ್‌ನಲ್ಲಿ ಅನೇಕ ಜನರು ವಿವರಿಸಿದ್ದಾರೆ ಮತ್ತು ಅದರಿಂದ ಅವರ ಈಮಾನ್ ಬಲಗೊಳ್ಳುತ್ತದೆ. ನಾವು ಅಲ್ಲಾಹನ ಅಸ್ತಿತ್ವದ ಮೇಲೆ ಸಂಪೂರ್ಣ ವಿಶ್ವಾಸ ಮತ್ತು ನಂಬಿಕೆಯನ್ನು ಹೊಂದಿದ್ದೇವೆ ಎಂದು ಬಾಯಿಯಿಂದ ಹೇಳಿದರೆ ಸಾಲದು, ಅವನ ಆಜ್ಞೆಗಳನ್ನು ಪಾಲಿಸಬೇಕು. ಇತ್ತೀಚಿನ ದಿನಗಳಲ್ಲಿ ಮಸೀದಿಗಳು ತುಂಬಿರುವಂತೆ, ವರ್ಷಕ್ಕೊಮ್ಮೆ ರಮಝಾನಿನಲ್ಲಿ ಮಾತ್ರ ನಮಾಝ್‌ಗಳನ್ನು ಮಾಡಲು ಪ್ರಯತ್ನಿಸುವುದಲ್ಲ, ಈ ಮಸೀದಿಗಳು ಯಾವಾಗಲೂ ತುಂಬಿರಬೇಕು. ಅಲ್ಲಾಹನ ಕೃಪೆಯಿಂದ ಅಹ್ಮದಿಯರು ನಮಾಝಿ?ನ ಕಡೆಗೆ ಬಹಳ ಗಮನ ಹರಿಸುತ್ತಾರೆ. ಆದರೆ ಇನ್ನೂ ಎಲ್ಲಿ ದೌರ್ಬಲ್ಯಗಳಿವೆಯೋ ಅವರು ತಮ್ಮ ದೌರ್ಬಲ್ಯಗಳ ಕುರಿತು ಗಮನವಿರಿಸಬೇಕು ಮತ್ತು ನಮ್ಮ ಆರಾಧನೆಗಳ ಗುಣಮಟ್ಟವನ್ನು ಹೆಚ್ಚಿಸುವ, ಅಲ್ಲಾಹನ ಸಾಮೀಪ್ಯವನ್ನು ನಮಗೆ ನೀಡುವ ರಮಝಾನನ್ನಾಗಿ ಇದನ್ನು ನಾವು ಮಾಡಬೇಕು. ಹೀಗೆ ನಾವು ಅಲ್ಲಾಹನ ನಿಷ್ಠಾವಂತ ದಾಸರಾಗುವಂತಾಗಲಿ. ಅವನ ಮಾತುಗಳನ್ನು ಪಾಲಿಸುವವರಾಗಬೇಕು ಮತ್ತು ಅದರ ಪರಿಣಾಮವಾಗಿ ಅಲ್ಲಾಹನು ನಮ್ಮ ದುಆಗಳನ್ನು ಸಹ ಸ್ವೀಕಾರ ಮಾಡುವಂತಾಗಲಿ.

ಆದ್ದರಿಂದ, ಈ ರಮಝಾನಿನಲ್ಲಿ ನಾವು ನಮ್ಮ ಆರಾಧನೆಗಳನ್ನು ಜೀವಂತಗೊಳಿಸುವೆವು ಎಂದು ಪ್ರತಿಜ್ಞೆ ಮಾಡಬೇಕು ಮತ್ತು ಆ ಪ್ರತಿಜ್ಞೆಯನ್ನು ಪೂರೈಸಲು ಅಲ್ಲಾಹನು ನಮಗೆ ಶಕ್ತಿ ನೀಡಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಬೇಕು ಮತ್ತು ಅದನ್ನು ಪೂರೈಸಲು ನಮ್ಮ ಎಲ್ಲ ಶಕ್ತಿಗಳನ್ನು ಬಳಸಲು ಪೂರ್ಣ ಪ್ರಯತ್ನ ಮಾಡಬೇಕು. ಹೀಗೆ ಈ ಪ್ರಯತ್ನ ನಡೆಯುವಾಗ ಮತ್ತು ಇದಕ್ಕಾಗಿ ನಾವು ನಮ್ಮ ಎಲ್ಲ ಶಕ್ತಿಗಳನ್ನು ಬಳಸಿಕೊಂಡು ಪ್ರಯತ್ನಿಸುವಾಗ, ಅಲ್ಲಾಹನು ಅವನ ಮಾತುಗಳನ್ನು ಪಾಲಿಸುವವರ ಮಿತ್ರನಾಗುತ್ತಾನೆ ಎಂದು ಅವನು ಹೇಳಿರುವಂತೆ, ಅಲ್ಲಾಹನೊಂದಿಗೆ ಎಂತಹ ನಿಕಟ ಸಂಬಂಧವು ಉಂಟಾಗುತ್ತದೆ ಎಂದರೆ, ಅಲ್ಲಾಹನು ಅಂಥವರ ಸ್ನೇಹಿತನಾಗುತ್ತಾನೆ.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಇಬ್ನ್ ಉಮರ್(ರ) ವರದಿ ಮಾಡುತ್ತಾರೆ: ನಿಮ್ಮಲ್ಲಿ ಯಾರಿಗಾದರೂ ದುಆದ ಬಾಗಿಲು ತೆರೆಯಲ್ಪಟ್ಟರೆ ಅವನಿಗಾಗಿ ಕರುಣೆಯ ಬಾಗಿಲುಗಳು ತೆರೆದಂತೆಯೇ ಆಗಿದೆ. ಅಲ್ಲಾಹನಲ್ಲಿ ಬೇಡಿಕೊಳ್ಳುವ ವಿಷಯಗಳಲ್ಲಿ, ಅವನಿಂದ ಕ್ಷೇಮವನ್ನು ಬೇಡುವುದು ಅವನಿಗೆ ಅತ್ಯಂತ ಪ್ರಿಯವಾದುದಾಗಿದೆ. (ತಿರ್ಮಿಝಿ, ಕಿತಾಬುದ್ದಾವಾತ್, ಹದೀಸ್-3548)

ಹಝ್ರತ್ ಪೈಗಂಬರ್(ಸ) ಹೇಳಿರುವರು, ಈಗಾಗಲೇ ಬಂದಿರುವ ಮತ್ತು ಬರಲಿರುವ ವಿಪತ್ತುಗಳಿಗೆ ದುಆವು ಪ್ರಯೋಜನವನ್ನು ನೀಡುವುದು. ಆದ್ದರಿಂದ ಅಲ್ಲಾಹನ ದಾಸರೇ, ನೀವು ದುಆ ಮಾಡುವುದನ್ನು ನಿಮ್ಮ ಮೇಲೆ ಕಡ್ಡಾಯಗೊಳಿಸಿರಿ. ಕೇವಲ ರಮಝಾನ್ ದಿನಗಳಲ್ಲಿ ಮಾತ್ರ ವಿಪತ್ತುಗಳು ಅಥವಾ ತೊಂದರೆಗಳು ಬರುವುದಿಲ್ಲ. ವಿವಿಧ ಸಮಯಗಳಲ್ಲಿ ಬರುತ್ತಲೇ ಇರುತ್ತವೆ, ಆದ್ದರಿಂದ ನೀವು ಈ ದಿನಗಳಲ್ಲಿ ಮಾತ್ರ ದುಆ ಮಾಡುವವರಾಗಬೇಡಿ ಅಥವಾ ಆ ತೊಂದರೆಗಳನ್ನು ನಿವಾರಿಸಲು ನಿಮಗೆ ಅಗತ್ಯವಿದ್ದಾಗ ಮಾತ್ರ ದುಆ ಮಾಡಬಾರದು ಎಂದು ಅಲ್ಲಾಹನು ಹೇಳುತ್ತಾನೆ, ಬದಲಿಗೆ ಹಝ್ರತ್ ಪೈಗಂಬರ್(ಸ) ಹೇಳಿರುವರು, ಇನ್ನೂ ಬರದ ಮತ್ತು ಯಾವುದೇ ಸಮಯದಲ್ಲಿ ಬರಬಹುದಾದ ತೊಂದರೆಗಳಿಂದಲೂ ದುಆವು ರಕ್ಷಿಸುತ್ತದೆ, ಆದ್ದರಿಂದ ನೀವು ನಿರಂತರವಾಗಿ ದುಆ ಮಾಡುತ್ತಿರಬೇಕು. ಅಲ್ಲಾಹನ ಆಶ್ರಯಕ್ಕೆ ಬರಲು ಪ್ರಯತ್ನಿಸಬೇಕು. ಅಲ್ಲಾಹನು ಬಂದಿರುವ ತೊಂದರೆಗಳಿಂದಲೂ ರಕ್ಷಿಸುತ್ತಾನೆ, ಅಲ್ಲಾಹನ ಅನುಗ್ರಹಗಳಿಂದಲೂ ಕರುಣಿಸುತ್ತಾನೆ ಮತ್ತು ಭವಿಷ್ಯದಲ್ಲಿ ಯಾವುದೇ ತೊಂದರೆ ಬರಲಿದ್ದರೆ, ಅದನ್ನು ಅಲ್ಲಾಹನೇ ಬಲ್ಲನು, ಅಲ್ಲಾಹನು ಆ ವಿಪತ್ತುಗಳನ್ನು, ಆ ತೊಂದರೆಗಳನ್ನು ದೂರ ಮಾಡುತ್ತಾನೆ ಮತ್ತು ಯಾವಾಗಲೂ ಪ್ರಯೋಜನವನ್ನು ನೀಡುತ್ತಾನೆ. ಈ ಸ್ಥಿತಿ ಉಂಟಾಗುವಾಗ ಮಾತ್ರ, ಅಲ್ಲಾಹನು ಸತ್ಯವಿಶ್ವಾಸಿಗಳ ವರ್ಗದಲ್ಲಿ ಸೇರಿಸಿರುವ ನಿಜವಾದ ಸತ್ಯವಿಶ್ವಾಸಿಯಾಗಲು ಸಾಧ್ಯ. ಆದ್ದರಿಂದ, ದುಆಗಳಲ್ಲಿ ನೀವು ಅಲ್ಲಾಹನೊಡನೆ ಒಳಿತಿನ ಮಾರ್ಗಗಳನ್ನು ಬೇಡುವಾಗ, ಹಝ್ರತ್ ಪೈಗಂಬರ್(ಸ) ಹೇಳಿರುವರು, ಹಿಂದಿನ ತೊಂದರೆಗಳಿಂದಲೂ ರಕ್ಷಣೆ ಉಂಟಾಗುತ್ತದೆ ಮತ್ತು ಭವಿಷ್ಯದಲ್ಲಿಯೂ ರಕ್ಷಿಸಲ್ಪಡುತ್ತೀರಿ. ಆದ್ದರಿಂದ, ಈ ಕರುಣೆಯ ಬಾಗಿಲುಗಳನ್ನು ತೆರೆಯಲು ನಾವು ನಮ್ಮ ಜೀವನದಲ್ಲಿ ನಿರಂತರವಾಗಿ ಬದಲಾವಣೆಯನ್ನು ಉಂಟುಮಾಡಬೇಕು, ನಮ್ಮ ಸಂಬಂಧವು ಅಲ್ಲಾಹನೊಂದಿಗೆ ಸ್ಥಾಪಿತವಾಗಲು ಮತ್ತು ನಾವು ಸಂತೋಷ, ದುಃಖ, ಸೌಕರ್ಯ, ಕಷ್ಟ ಎಲ್ಲ ಸಮಯದಲ್ಲೂ ಅಲ್ಲಾಹನ ಅನುಗ್ರಹಗಳನ್ನು ಬೇಡುತ್ತಿರಬೇಕು. ಹಝ್ರತ್ ಅಬೂ ಹುರೈರಾ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿರುವರು: ನಮ್ಮ ಪ್ರಭು ಪ್ರತಿ ರಾತ್ರಿ ಹತ್ತಿರದ ಆಕಾಶಕ್ಕೆ ಇಳಿಯುತ್ತಾನೆ, ರಾತ್ರಿಯ ಮೂರನೇ ಒಂದು ಭಾಗ ಉಳಿದಿರುವಾಗ, ಅಲ್ಲಾಹನು ಹೇಳುತ್ತಾನೆ, ನನ್ನನ್ನು ಕರೆಯುವವರು ಯಾರಿದ್ದಾರೆ, ನಾನು ಅವನಿಗೆ ಉತ್ತರ ನೀಡುತ್ತೇನೆ. ನನ್ನಲ್ಲಿ ಬೇಡುವವರು ಯಾರು, ನಾನು ಅವನಿಗೆ ನೀಡುತ್ತೇನೆ. ನನ್ನಲ್ಲಿ ಕ್ಷಮೆಯನ್ನು ಬೇಡುವವರು ಯಾರು, ನಾನು ಅವನನ್ನು ಕ್ಷಮಿಸುತ್ತೇನೆ.(ಬುಖಾರಿ ಕಿತಾಬುದ್ದಾವಾತ್, ಬಾಬ್ ಅದ್ದುಆ ನಿಸ್ಫುಲ್ಲೈಲಿ, ಹದೀಸ್-6321)

ಇದು ರಮಝಾನಿಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಸಾಮಾನ್ಯ ದಿನಗಳ ಬಗ್ಗೆ ಹೇಳಲಾಗುತ್ತಿದೆ, ಯಾರಾದರೂ ನನ್ನೊಡನೆ ಬೇಡುವಾಗ, ನಾನು ಅವನನ್ನು ಕ್ಷಮಿಸುತ್ತೇನೆ, ರಾತ್ರಿಯ ಸಮಯದಲ್ಲಿ. ನಾನು ಅವನಿಗೆ ನೀಡುತ್ತೇನೆ, ಅವನ ಮಾತುಗಳಿಗೆ ಉತ್ತರವನ್ನೂ ನೀಡುತ್ತೇನೆ. ಆದ್ದರಿಂದ, ರಮಝಾನಿನಲ್ಲಿ ಅಲ್ಲಾಹನು ಅಂತಹ ಅವಕಾಶವನ್ನು ಉಂಟುಮಾಡಿದ್ದಾನೆ, ಏಕೆಂದರೆ ಈ ದಿನಗಳಲ್ಲಿ ಎಲ್ಲರ ಗಮನವೂ ಆರಾಧನೆಗಳ ಕಡೆಗೆ ಇರುತ್ತದೆ, ಆದ್ದರಿಂದ ಈ ದಿನಗಳಲ್ಲಿ ನೀವು ಸಹ ಗಮನ ಹರಿಸಿದರೆ, ನಿಮಗೆ ಈ ಸತ್ಕರ್ಮಗಳ ಅಭ್ಯಾಸವಾಗುವುದು ಮತ್ತು ಒಂದು ತಿಂಗಳಲ್ಲಿ ಅಭ್ಯಾಸವಾಗುವಾಗ, ನಂತರ ಅದನ್ನು ಜೀವನದ ಭಾಗವಾಗಿಸಲು ನಿರಂತರವಾಗಿ ಪ್ರಯತ್ನಿಸಬಹುದಾಗಿದೆ.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹೀಗೊಂದು ವರದಿಯಿದೆ: ತೊಂದರೆಗಳ ಸಮಯದಲ್ಲಿ ಅಲ್ಲಾಹನು ತನ್ನ ಪ್ರಾರ್ಥನೆಗಳನ್ನು ಸ್ವೀಕರಿಸಬೇಕೆಂದು ಯಾರು ಬಯಸುತ್ತಾರೋ, ಅವರು ಸಮೃದ್ಧಿ ಮತ್ತು ಸುಖದ ಸಮಯದಲ್ಲಿ ಹೆಚ್ಚಾಗಿ ಪ್ರಾರ್ಥಿಸಬೇಕು, ಮೊದಲೇ ಹದೀಸಿನ ಉಲ್ಲೇಖದೊಂದಿಗೆ ವಿವರಿಸಿದಂತೆ. ಆದ್ದರಿಂದ, ಇವು ನಾವು ನೆನಪಿಟ್ಟುಕೊಳ್ಳಬೇಕಾದ ಬಹಳ ಮುಖ್ಯವಾದ ವಿಷಯಗಳಾಗಿವೆ. ನಮ್ಮ ಸಂಬಂಧವು ಯಾವಾಗಲೂ ಅಲ್ಲಾಹನೊಂದಿಗೆ ಇರಬೇಕು, ನಾವು ಕಷ್ಟಗಳು, ತೊಂದರೆಗಳು ಮತ್ತು ದುಃಖಗಳ ಸಮಯಗಳಲ್ಲಿ ಮಾತ್ರ ಅಲ್ಲಾಹನ ಕಡೆಗೆ ಓಡಬಾರದು ಮತ್ತು ಗೋಳಾಡಬಾರದು, ಬದಲಿಗೆ ಅಲ್ಲಾಹನ ನಿಜವಾದ ಸ್ನೇಹಿತರಾಗಲು ಪ್ರಯತ್ನಿಸಬೇಕು ಮತ್ತು ಅಲ್ಲಾಹನನ್ನು ನಮ್ಮ ಮಿತ್ರನನ್ನಾಗಿ ಮಾಡಲು ನಾವು ನಿರಂತರವಾಗಿ ಅವನ ಸನ್ನಿಧಿಯಲ್ಲಿ ಬಾಗಬೇಕು. ಆದ್ದರಿಂದ, ನಾನು ಹೇಳಿದಂತೆ, ಸಾಮಾನ್ಯ ಪರಿಸ್ಥಿತಿಗಳಲ್ಲೂ ಯಾವಾಗಲೂ ಗಮನವಿರಬೇಕು, ತೊಂದರೆ ಮತ್ತು ಅಗತ್ಯದ ಸಮಯದಲ್ಲಿ ಮಾತ್ರ ಅಲ್ಲಾಹನನ್ನು ಕರೆಯಬಾರದು, ಬದಲಿಗೆ ಯಾವಾಗಲೂ ಕರೆಯಬೇಕು ಎಂದು ಈ ಹದೀಸ್ ಸಹ ಹೇಳುತ್ತಿದೆ. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹೀಗೊಂದು ವರದಿ ಕೂಡ ಇದೆ: ಅಲ್ಲಾಹನು ಹೇಳುತ್ತಾನೆ, ನಾನು ದಾಸನ ಊಹೆಯ ಪ್ರಕಾರ ವರ್ತಿಸುತ್ತೇನೆ. ದಾಸನು ನನ್ನನ್ನು ನೆನಪಿಸಿಕೊಳ್ಳುವ ಸಮಯದಲ್ಲಿ ನಾನು ಅವನೊಂದಿಗೆ ಇರುತ್ತೇನೆ. ಅವನು ನನ್ನನ್ನು ತನ್ನ ಹೃದಯದಲ್ಲಿ ನೆನಪಿಸಿಕೊಂಡರೆ, ನಾನು ಅವನನ್ನು ನನ್ನ ಹೃದಯದಲ್ಲಿ ನೆನಪಿಸಿಕೊಳ್ಳುತ್ತೇನೆ. ಅವನು ನನ್ನನ್ನು ಸಭೆಯಲ್ಲಿ ಸ್ಮರಿಸಿದರೆ, ನಾನು ಅವನನ್ನು ಅದಕ್ಕಿಂತ ಉತ್ತಮವಾದ ಸಭೆಯಲ್ಲಿ ಸ್ಮರಿಸುತ್ತೇನೆ. ಅವನು ನನ್ನ ಕಡೆಗೆ ಒಂದು ಮೊಳದಷ್ಟು ಬಂದರೆ, ನಾನು ಅವನ ಕಡೆಗೆ ಒಂದು ಅಡಿಯಷ್ಟು ಬರುತ್ತೇನೆ. ಅವನು ನನ್ನ ಕಡೆಗೆ ಒಂದು ಅಡಿಯಷ್ಟು ಬಂದರೆ, ನಾನು ಅವನ ಕಡೆಗೆ ಎರಡು ಅಡಿಗಳಷ್ಟು ಬರುತ್ತೇನೆ. ಅವನು ನನ್ನ ಕಡೆಗೆ ನಡೆದುಕೊಂಡು ಬಂದರೆ, ನಾನು ಅವನ ಕಡೆಗೆ ಓಡಿಕೊಂಡು ಬರುತ್ತೇನೆ.

(ಬುಖಾರಿ ಕಿತಾಬುತ್ತೌಹೀದ್, ಬಾಬ್ ಮಾ ಯಝ್ಕುರ್ ಫಿಝ್ಝಾತ್ ವನ್ನೂತು, ಹದೀಸ್-7405)

ಆದ್ದರಿಂದ, ಪ್ರತಿಯೊಬ್ಬ ಅಹ್ಮದಿಯೂ ಅಲ್ಲಾಹನ ಸ್ಮರಣೆಯಿಂದ ತಮ್ಮ ನಾಲಿಗೆಗಳನ್ನು ತೇವವಾಗಿರಿಸಲು ಪ್ರಯತ್ನಿಸಬೇಕು ಮತ್ತು ನಮ್ಮ ಪ್ರತಿಯೊಂದು ಕಾರ್ಯವೂ ನಮ್ಮನ್ನು ಅಲ್ಲಾಹನ ಕಡೆಗೆ ಸಾಗಿಸುವಂತಾಗಿರಬೇಕು. ನಮ್ಮ ಪ್ರತಿಯೊಂದು ಹೆಜ್ಜೆಯೂ ಅಲ್ಲಾಹನ ಕಡೆಗೆ ಕೊಂಡೊಯ್ಯುವಂತಿರಬೇಕು, ಆಗ ಅಲ್ಲಾಹನು ಓಡಿಕೊಂಡು ನಮ್ಮ ಬಳಿಗೆ ಬರುವನು ಮತ್ತು ತನ್ನ ಪ್ರೀತಿಯ ಹೊದಿಕೆಯಲ್ಲಿ ನಮ್ಮನ್ನು ಸುತ್ತಿಕೊಳ್ಳುವನು ಮತ್ತು ನಮ್ಮ ಅಗತ್ಯಗಳನ್ನು ಪೂರೈಸುವನು. ಕಷ್ಟ ಮತ್ತು ಸುಖ, ತೊಂದರೆ ಮತ್ತು ಸೌಕರ್ಯದ ಪ್ರತಿ ಸ್ಥಿತಿಯಲ್ಲಿಯೂ ನಾವು ಅಲ್ಲಾಹನ ದಾಸರಾಗಿಯೇ ಇರಬೇಕು. ಹಝುರತ್ ಪೈಗಂಬರ್(ಸ) ಹೇಳಿದ್ದಾಗಿ ಹೀಗೊಂದು ವರದಿಯಿದೆ: ದು?ನ್ನೂನ್ ಅಂದರೆ ಹಝುರತ್ ಯೂನುಸ್(ಅ) ಮೀನಿನ ಹೊಟ್ಟೆಯಲ್ಲಿ ಮಾಡಿದ ದುಆವೇನೆಂದರೆ, "**ಲಾ ಇಲಾಹ ಇಲ್ಲಾ ಅಂತ ಸುಬ್ಹಾನಕ ಇನ್ನೀ ಕುಂತು ಮಿನಝ್ ಝಾಲಿಮೀನ್**" (ಅಲ್‌ಅಂಬಿಯಾ: 88) ಮತ್ತು ಹಝ್‌ರತ್ ಪೈಗಂಬರ್(ಸ) ಹೇಳಿರುವರು, ಯಾವುದೇ ಮುಸ್ಲಿಮನು ಈ ದುಆವನ್ನು ಯಾವುದೇ ತೊಂದರೆಯ ಸಮಯದಲ್ಲಿ ಮಾಡಿದರೆ, ಅಲ್ಲಾಹನು ಖಂಡಿತವಾಗಿಯೂ ಆ ದುಆವನ್ನು ಸ್ವೀಕರಿಸುತ್ತಾನೆ.

ಇದು ಕೂಡ ನಮ್ಮ ಮೇಲೆ ಹಝುರತ್ ಪೈಗಂಬರ್(ಸ)ರ ದಯೆ ಆಗಿದೆ. ಅವರು ನಮಗೆ ಈ ದುಆಗಳ ಕಡೆಗೆ ಗಮನ ಹರಿಸಲು ಹೇಳುತ್ತಲೇ ಇದ್ದರು, ಏಕೆಂದರೆ, ಮನುಷ್ಯನಿಂದ ದೌರ್ಬಲ್ಯಗಳು ಸಂಭವಿಸುತ್ತವೆ. ಮನುಷ್ಯನು ಕೆಲವೊಮ್ಮೆ ಅಲ್ಲಾಹನ ಹಕ್ಕನ್ನು ಪೂರೈಸುವುದಿಲ್ಲ, ಆದರೂ ಅಲ್ಲಾಹನು ದಾಸರ ಮೇಲೆ ಕರುಣಾಮಯಿಯಾಗಿರುತ್ತಾನೆ ಮತ್ತು ಅಲ್ಲಾಹನು ಸ್ವತಃ ದುಆಗಳನ್ನು ಕಲಿಸಿದ್ದಾನೆ. ಪವಿತ್ರ ಖುರ್‌ಆನಿನಲ್ಲಿ ವಿವಿಧ ದುಆಗಳನ್ನು ಕಲಿಸಿರುವುದು ಏಕೆ? ಅಲ್ಲಾಹನು ಪ್ರವಾದಿಗಳ ದುಆಗಳನ್ನು ಏಕೆ ಪ್ರಸ್ತಾಪಿಸಿದ್ದಾನೆ?. ಅಲ್ಲಾಹನು ಕಲಿಸಿರುವ ದುಆಗಳನ್ನು ನಾವು ಬೇಡಿಕೊಳ್ಳುವಾಗ ಅಲ್ಲಾಹನು ಅವುಗಳನ್ನು ಸ್ವೀಕರಿಸುತ್ತಾನೆ, ಆದರೆ ಸಂಗತಿ ಏನೆಂದರೆ ನಾವು ಮೊದಲು ಅವನ ಹಕ್ಕನ್ನು ಪೂರೈಸುವವರಾಗಿರಬೇಕು. ಅಲ್ಲಾಹನು **ಫಲ್‌ಯಸ್ತಜೀಬೂ ಲೀ** ಎಂದು ಆಜ್ಞಾಪಿಸಿದ್ದಾನೆ, ಅಂದರೆ ನನ್ನ ಮಾತಿಗೆ ಓಗೊಡಿ. ನನ್ನ ಮಾತನ್ನು ಅನುಸರಿಸಿರಿ ಮತ್ತು ನಿಮ್ಮ ನಂಬಿಕೆಯನ್ನು ತಾಜಾಗೊಳಿಸಿ.

ಆದ್ದರಿಂದ, ನಾವು ಅಲ್ಲಾಹನ ಆಜ್ಞೆಗಳನ್ನು ಯಾವ ಮಟ್ಟಿಗೆ ಪಾಲಿಸುತ್ತೇವೆ ಎಂದು ನಾವು ನಮ್ಮ ಸ್ಥಿತಿಗಳನ್ನು ನಾವೇ ಪರಿಶೀಲಿಸಬೇಕು. ನಾನು ಈಗ ಓದಿದ ಹಝುರತ್ ಯೂನುಸ್(ಅ)ರ ದುಆವನ್ನು ವಿವರಿಸುತ್ತಾ ಹಝುರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಇದರಿಂದ ಒಂದು ಪಾಠ ಸಿಗುತ್ತದೆ, ಅಲ್ಲಾಹನು ವಿಧಿಯನ್ನು ಬದಲಾಯಿಸುತ್ತಾನೆ ಮತ್ತು ಹಝುರತ್ ಯೂನುಸ್(ಅ)ರ ಜನರ ಘಟನೆಯಲ್ಲಿ ಸಂಭವಿಸಿದ ಅಥವಾ ಈ ಘಟನೆಯಲ್ಲಿ ಉಲ್ಲೇಖಿಸಲಾದ ಅಳಲು, ಪ್ರಾರ್ಥನೆ ಮತ್ತು ದಾನಗಳಿಂದ ಅಪರಾಧಕ್ಕೆ ವಿಧಿಸಲಾದ ಶಿಕ್ಷೆಯಿಂದ ಪಾರಾಗಬಹುದಾಗಿದೆ. ಅಪರಾಧಕ್ಕೆ ಶಿಕ್ಷೆಯ ತೀರ್ಮಾನ ಆದರೂ ಕೂಡ ದುಆವು ಅದನ್ನು ರದ್ದುಗೊಳಿಸುತ್ತದೆ. (ಮಲ್‌ಫೂಝಾತ್, ಸಂಪುಟ-1, ಪುಟ-238, ಎಡೀಷನ್-1984)

ಕೆಲವರು ಹೇಳುತ್ತಾರೆ, ಅಲ್ಲಾಹನು ವಿಧಿಯಲ್ಲಿ ಇದನ್ನು ಬರೆದಿದ್ದಾನೆ ಮತ್ತು ಅಲ್ಲಾಹನಿಗೆ ಇದು ಸಂಭವಿಸುತ್ತದೆ ಎಂದು ತಿಳಿದಿದೆ, ಹಾಗಾದರೆ ನಾವು ದುಆಗಳನ್ನು ಮಾಡುವ ಅಗತ್ಯವೇನು? ನಾವು ಸತ್ಕರ್ಮಗಳನ್ನು ಮಾಡುವ ಅಗತ್ಯವೇನು? ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಈ ದುಆವನ್ನು ಕಲಿಸಿದ್ದಾನೆ ಮತ್ತು ಹಝುರತ್ ಯೂನುಸ್(ಅ)ರ ಘಟನೆಯನ್ನು ವಿವರಿಸುವ ಮೂಲಕ, ನನ್ನ ವಿಧಿಗಳ ತೀರ್ಮಾನಗಳನ್ನು ನಾನು ಬದಲಾಯಿಸುತ್ತೇನೆ ಎಂದು ಸಾಬೀತುಪಡಿಸಿದ್ದಾನೆ. ನಿಮ್ಮ ಅಳಲು, ಪ್ರಾರ್ಥನೆ ಮತ್ತು ನಿಮ್ಮ ಸರಿಯಾದ ಸಂಬಂಧವು ಅಲ್ಲಾಹನೊಂದಿಗೆ ಇದ್ದರೆ ಮತ್ತು ನೀವು ಒಳ್ಳೆಯ ಕೆಲಸಗಳನ್ನು ಮಾಡಲು ಪ್ರಾರಂಭಿಸಿದರೆ ಮತ್ತು ಕೆಡುಕುಗಳಿಂದ ದೂರವಿರಲು ಪ್ರಾರಂಭಿಸಿದರೆ ಮತ್ತು ಅಲ್ಲಾಹನ ಸನ್ನಿಧಿಯಲ್ಲಿ ಬಿದ್ದುಕೊಂಡು ಪ್ರಾರ್ಥಿಸಿದರೆ, ವಿಪತ್ತು ಬಂದ ನಂತರವೂ ದುಆ ಮಾಡಿದರೆ ಮತ್ತು ಕ್ಷಮೆಯಾಚಿಸಿದರೆ ಮತ್ತು ದಾನಗಳನ್ನು ನೀಡಿದರೆ ಅಂತಹ ಜನರ ಮೇಲೆ ಅಲ್ಲಾಹನು ಕರುಣೆ ತೋರುತ್ತಾನೆ ಮತ್ತು ದೈವಿಕ ಶಿಕ್ಷೆಯಿಂದ ಅವರನ್ನು ರಕ್ಷಿಸುತ್ತಾನೆ.

ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ವಿಪತ್ತುಗಳು ಬಂದಾಗಲೂ ನಿಮ್ಮ ದುಆಗಳು ನಿಜವಾಗಿಯೂ ಪ್ರಾಮಾಣಿಕ ಹೃದಯದಿಂದ ಮಾಡಿದ ದುಆಗಳಾಗಿದ್ದರೆ ಮತ್ತು ನಿಮ್ಮ ಕ್ಷಮೆಯಾಚನೆಯು ನಿಜವಾಗಿದ್ದರೆ, ಆಗಲೂ ಅವನು ನಿಮ್ಮನ್ನು ರಕ್ಷಿಸುತ್ತಾನೆ. ಏಕೆಂದರೆ ಅಲ್ಲಾಹನು ತುಂಬಾ ದಯಾಮಯಿಯಾಗಿದ್ದಾನೆ. ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನ ಈ ಮಾತುಗಳನ್ನು ಕಥೆಯಂತೆ ಕೇಳಬೇಡಿ. ನಾನು ಅಲ್ಲಾಹನಿಗಾಗಿ ಹೇಳುತ್ತೇನೆ, ನಿಮ್ಮ ಸ್ಥಿತಿಗಳ ಬಗ್ಗೆ ಆಲೋಚಿಸಿ ಮತ್ತು ನೀವೂ ನಿಮ್ಮ ಸ್ನೇಹಿತರೊಡನೆ ಸಹ ದುಆ ಮಾಡಲು ಹೇಳಿ. ದೈವಿಕ ಶಿಕ್ಷೆ ಮತ್ತು ತೀವ್ರ ಆಪತ್ತುಗಳಿಂದ ರಕ್ಷಣೆ ಪಡೆಯಲು ಅಲ್ಲಾಹನೊಡನೆ ಕ್ಷಮೆಯಾಚನೆ ಮಾಡಿದರೆ, ಇಸ್ತಿಗ್‌ಫಾರ್ ಮಾಡಿದರೆ ಅದು ಗುರಾಣಿಯಂತೆ ಕೆಲಸ ಮಾಡುತ್ತದೆ. ಹೆಚ್ಚಾಗಿ ಕ್ಷಮೆಯಾಚನೆ ಮಾಡಿ. ಇದು ಗುರಾಣಿಯಾಗಿದೆ. ಅಂದರೆ ಇದು ನಿಮ್ಮ ರಕ್ಷಾಕವಚವಾಗಿದೆ. ಕ್ಷಮೆಯಾಚನೆ ಮಾಡಿದರೆ, ಅಲ್ಲಾಹನು ನಿಮ್ಮನ್ನು ರಕ್ಷಿಸುತ್ತಾನೆ. ಕಳೆದ ದಿನಗಳಲ್ಲಿ ನಾನು ದುಆಗಳನ್ನು ಮಾಡಲು ಮನವಿ ಮಾಡಿದ್ದೆ, ಅದರಲ್ಲಿ ಇಸ್ತಿಗ್‌ಫಾರ್ ಕಡೆಗೂ ಗಮನ ಸೆಳೆದಿದ್ದೆ. ಕ್ಷಮೆಯಾಚನೆಯು ಒಂದು ರಕ್ಷಾಕವಚವಾಗಿದೆ ಎಂದು ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ, "**ಮಾ ಕಾನಲ್ಲಾಹು ಮುಅಜ್ಜಬಹುಮ್ ವಹುಮ್ ಯಸ್ತಗ್ಫಿರೂನ್**" ಅಲ್ಲಾಹನು ಸ್ವತಃ ಹೇಳಿದ್ದಾನೆ, ನೀವು ಕ್ಷಮೆಯಾಚಿಸುತ್ತಿದ್ದರೆ ಅಲ್ಲಾಹನು ನಿಮ್ಮನ್ನು ಏಕೆ ಶಿಕ್ಷಿಸಬೇಕು? ಕ್ಷಮೆಯಾಚಿಸುತ್ತಿರುವ ಜನರಿಗೆ ಅಲ್ಲಾಹನು ಶಿಕ್ಷೆ ನೀಡುವುದಿಲ್ಲ. ನಿಜವಾದ ಕ್ಷಮೆಯಾಚನೆ ಆಗಿರಬೇಕು. ಆದ್ದರಿಂದ, ನೀವು ದೈವಿಕ ಶಿಕ್ಷೆಯಿಂದ ರಕ್ಷಣೆ ಪಡೆಯಲು ಬಯಸುವುದಾದರೆ, ಹೆಚ್ಚಾಗಿ ಇಸ್ತಿಗ್‌ಫಾರ್ ಮಾಡಬೇಕು.

ಜನರು ಕ್ಷಮೆಯಾಚಿಸುತ್ತಿರುವಾಗ, ಇಸ್ತಿಗ್‌ಫಾರ್ ಮಾಡುವಾಗ ಅಲ್ಲಾಹನು ಅವರಿಗೆ ಶಿಕ್ಷೆ ನೀಡುವುದಿಲ್ಲ. ಹಝುರತ್ ಮಸೀಹ್ ಮೌಊದ್(ಅ) ಇದರ ವಿವರಣೆಯಲ್ಲಿ ಹೇಳುತ್ತಾರೆ: ನೀವು ಆ ದೈವಿಕ ಶಿಕ್ಷೆಯಿಂದ ರಕ್ಷಣೆ ಪಡೆಯಲು ಬಯಸುವುದಾದರೆ ಬಹಳ ಹೆಚ್ಚಾಗಿ ಕ್ಷಮೆಯಾಚನೆ ಮಾಡಿ. ಒಂದು ವರದಿಯಿದೆ. ಹಝುರತ್ ಪೈಗಂಬರ್ (ಸ) ಹೇಳುತ್ತಾರೆ:

ಅಲ್ಲಾಹನು ತುಂಬಾ ಲಜ್ಜಾ ಸ್ವಭಾವದವನು, ತುಂಬಾ ಉದಾರಿ ಮತ್ತು ದಾನಿ ಆಗಿದ್ದಾನೆ. ದಾಸನು ಅವನ ಮುಂದೆ ಎರಡು ಕೈಗಳನ್ನು ಎತ್ತುವಾಗ ಅವನು ಅವುಗಳನ್ನು ಖಾಲಿ ಮತ್ತು ಏನೂ ನೀಡದೇ ಹಿಂದಿರುಗಿಸಲು ನಾಚಿಕೆಪಡುತ್ತಾನೆ. (ತಿರ್ಮಿಧಿ, ಕಿತಾಬುದ್ದಾವಾತ್ ಬಾಬ್ ಇನ್ನಲ್ಲಾಹ ಹಯ್ಯು ಕರೀಮ್, ಹದೀಸ್-3556)

ಅಂದರೆ, ಪ್ರಾಮಾಣಿಕ ಹೃದಯದಿಂದ ಬೇಡಲಾದ ದುಆವನ್ನು ತಿರಸ್ಕರಿಸುವುದಿಲ್ಲ, ಅದನ್ನು ಸ್ವೀಕಾರ ಮಾಡುತ್ತಾನೆ. ಆದ್ದರಿಂದ, ನಾವು ಅಲ್ಲಾಹನಲ್ಲಿ ಬೇಡುವ ದುಆಗಳನ್ನು ನಾವು ಪ್ರಾಮಾಣಿಕ ಹೃದಯದಿಂದ ಬೇಡಬೇಕು. ನಾವು ಹಿಂದಿನ ಪಾಪಗಳು ಮತ್ತು ತಪ್ಪುಗಳಿಗೆ ಕ್ಷಮೆಯನ್ನು ಬೇಡಬೇಕು ಮತ್ತು ಭವಿಷ್ಯದಲ್ಲಿ ಒಳಿತುಗಳಲ್ಲಿ ಸ್ಥಿರವಾಗಿರಲು ಅಲ್ಲಾಹನಲ್ಲಿ ಶಕ್ತಿಯನ್ನು ಬೇಡಬೇಕು. ಅನಂತರ ಅದರಲ್ಲಿ ಸ್ಥಿರವಾಗಿರಲು ಪ್ರಯತ್ನಿಸಬೇಕು. ರಮಝಾನಿನಲ್ಲಿಯೂ ಅದಕ್ಕಾಗಿ ಪ್ರಯತ್ನಿಸಬೇಕು, ಅದಕ್ಕಾಗಿ ದುಆಗಳನ್ನು ಮಾಡುತ್ತಿರಬೇಕು, ರಮಝಾನ್ ನಂತರವೂ ಅದಕ್ಕಾಗಿ ಪ್ರಯತ್ನಿಸಬೇಕು, ಆಗ ಅಲ್ಲಾಹನು ಹೇಗೆ ಓಡಿಕೊಂಡು ನಮ್ಮ ಬಳಿಗೆ ಬರುತ್ತಾನೆ ಮತ್ತು ನಮ್ಮನ್ನು ಅಪ್ಪಿಕೊಳ್ಳುವನು ಎಂಬುದನ್ನು ನೀವು ನೋಡುವಿರಿ.

ಹಝುರತ್ ಮಸೀಹ್ ಮೌಊದ್(ಅ)ಹೇಳುತ್ತಾರೆ: ಅಲ್ಲಾಹನ ಗ್ರಂಥಗಳಲ್ಲಿ ಒಳ್ಳೆಯ ಮನುಷ್ಯ ಮತ್ತು ಕೆಟ್ಟ ಮನುಷ್ಯನ ನಡುವೆ ಹೇಗೆ ವ್ಯತ್ಯಾಸ ಮಾಡಲಾಗಿದೆಯೋ ಮತ್ತು ಅವರಿಗೆ ಬೇರೆ ಬೇರೆ ಸ್ಥಾನಗಳನ್ನು ನಿಗದಿಪಡಿಸಲಾಗಿದೆಯೋ ಅದೇ ರೀತಿ ಅಲ್ಲಾಹನ ನೈಸರ್ಗಿಕ ಕಾನೂನಿನಲ್ಲಿಯೂ ಈ ಎರಡು ಬಗೆಯ ಮನುಷ್ಯರ ನಡುವೆ ವ್ಯತ್ಯಾಸವಿದೆ, ಅವರಲ್ಲಿ ಒಬ್ಬರು ಅಲ್ಲಾಹನನ್ನು ಅನುಗ್ರಹದ ಮೂಲವೆಂದು ಪರಿಗಣಿಸಿ, ತನ್ನ ಸ್ಥಿತಿ ಮತ್ತು ಮಾತಿನ ಮೂಲಕ ದುಆಗಳಿಂದ ಅವನೊಡನೆ ಶಕ್ತಿ ಮತ್ತು ಸಹಾಯವನ್ನು ಬೇಡುತ್ತಾನೆ, ಇನ್ನೊಬ್ಬನು ತನ್ನ ಪ್ರಯತ್ನ ಮತ್ತು ಸಹಾಯವನ್ನು ಮಾತ್ರ ನಂಬಿ ದುಆವನ್ನು ಹಾಸ್ಯಾಸ್ಪದವೆಂದು ಪರಿಗಣಿಸುತ್ತಾನೆ, ಮಾತ್ರವಲ್ಲ ದೇವನ ಬಗ್ಗೆ ಅಸಡ್ಡೆ ಮತ್ತು ಅಹಂಕಾರದ ಸ್ಥಿತಿಯಲ್ಲಿರುತ್ತಾನೆ. ಕಷ್ಟ ಮತ್ತು ವಿಪತ್ತಿನ ಸಮಯದಲ್ಲಿ ಅಲ್ಲಾಹನೊಡನೆ ದುಆ ಮಾಡುವ ಮತ್ತು ಅವನೊಡನೆ ಕಷ್ಟಗಳಿಂದ ಪಾರಾಗಲು ಪ್ರಾರ್ಥಿಸುವ ವ್ಯಕ್ತಿಯು, ದುಆವನ್ನು ಪರಿಪೂರ್ಣತೆಗೆ ತಲುಪಿಸಿದರೆ, ಇದು ಶರತ್ತು, ಅಂದರೆ ದುಆವನ್ನು ಪರಿಪೂರ್ಣತೆಗೆ ತಲುಪಿಸಬೇಕು ಎಂಬ ಶರತ್ತನ್ನು ವಿಧಿಸಲಾಗಿದೆ, ಹಾಗಾದರೆ ಅವನು ಅಲ್ಲಾಹನಿಂದ ಸಮಾಧಾನ ಮತ್ತು ನಿಜವಾದ ಸಂತೋಷವನ್ನು ಪಡೆಯುತ್ತಾನೆ. ಪರಿಪೂರ್ಣತೆಗೆ ತಲುಪುವಾಗ. ಒಂದು ವೇಳೆ ಅವನ ಉದ್ದೇಶವು ಅವನಿಗೆ ಸಿಗದಿದ್ದರೂ, ಅಲ್ಲಾಹನಿಂದ ಅವನಿಗೆ ಬೇರೆ ರೀತಿಯ ಸಮಾಧಾನ ಮತ್ತು ಶಾಂತಿಯನ್ನು ನೀಡಲಾಗುತ್ತದೆ ಮತ್ತು ಅವನು ಎಂದಿಗೂ ನಿರಾಶೆಗೊಳ್ಳುವುದಿಲ್ಲ ಮತ್ತು ಯಶಸ್ಸಿನ ಜೊತೆಗೆ ಅವನ ಸತ್ಯವಿಶ್ವಾಸದ ಶಕ್ತಿಯು ವೃದ್ಧಿಸುತ್ತದೆ ಮತ್ತು ಈಮಾನ್ ಹೆಚ್ಚಾಗುತ್ತದೆ.

(ಅಯ್ಯಾಮುಸ್ಸುಲಹ್, ರೂಹಾನಿಖಝಾಈಮ್, ಸಂಪುಟ-14, ಪುಟ-236-237)

ನೋಡಿರಿ, ನಾವು ಅಲ್ಲಾಹನ ಅನುಗ್ರಹಗಳನ್ನು ಪಡೆಯಬೇಕಾಗಿದೆ, ಅಲ್ಲಾಹನು ಸ್ವತಃ ಒಳ್ಳೆಯದು ಮತ್ತು ಕೆಟ್ಟದ್ದರ ನಡುವೆ ಈ ವ್ಯತ್ಯಾಸವನ್ನು ಇರಿಸಿದ್ದಾನೆ. ಒಳ್ಳೆಯವನು ಅಲ್ಲಾಹನನ್ನು ಅನುಗ್ರಹದ ಮೂಲವೆಂದು ಪರಿಗಣಿಸುತ್ತಾನೆ. ಪ್ರತಿಯೊಂದು ಅನುಗ್ರಹವೂ ಅಲ್ಲಾಹನಿಂದ ಲಭಿಸುತ್ತದೆ

ಎಂದು ತಿಳಿದುಕೊಳ್ಳುತ್ತಾನೆ ಮತ್ತು ಅವನಿಂದ ಶಕ್ತಿಯನ್ನು ಬೇಡುತ್ತಾನೆ, ಅಂಥವನು ಸತ್ಯವಿಶ್ವಾಸಿಯಾಗಿದ್ದಾನೆ. ಅಹಂಕಾರಿಯು ಅಂತಹ ಸ್ಥಿತಿಯನ್ನು ತನ್ನೊಳಗೆ ಉಂಟುಮಾಡುವುದಿಲ್ಲ, ಅವನು ಲೌಕಿಕ ವಿಧಾನಗಳನ್ನು ಬಳಸಿಕೊಂಡು ಬಹಳಷ್ಟು ಸಾಧಿಸಬಹುದು ಎಂದು ಭಾವಿಸುತ್ತಾನೆ. ಇಂತಹ ಸ್ಥಿತಿಯಲ್ಲಿ ಅಲ್ಲಾಹನು ಅಂತಹ ದಾಸರನ್ನು ಯಾವುದಾದರೂ ಸಮಯದಲ್ಲಿ ಹಿಡಿಗೂಡುತ್ತಾನೆ. ಹಝರತ್ ಪೈಗಂಬರ್(ಸ)ರ ಕುರಿತು ಒಂದು ವರದಿಯಿದೆ. ಹಝರತ್ ಪೈಗಂಬರ್(ಸ) ಯಾವುದೇ ಸಭೆಯಿಂದ ಏಳುವಾಗ ಅವರು ಹೀಗೆ ದುಆ ಮಾಡುತ್ತಿದ್ದರು:

"ಹೇ ನನ್ನ ಅಲ್ಲಾಹ್, ನಮ್ಮ ಮತ್ತು ಪಾಪಗಳ ನಡುವೆ ತಡೆಯನ್ನುಂಟುಮಾಡುವ ನಿನ್ನ ಭಯವನ್ನು ನಮಗೆ ನೀಡು ಮತ್ತು ನಾವು ನಿನ್ನ ಆಜ್ಞೆಗೆ ವಿರುದ್ಧವಾಗಿ ವರ್ತಿಸದಿರುವಂತೆ ಮಾಡು ಮತ್ತು ನಮ್ಮನ್ನು ಸ್ವರ್ಗಕ್ಕೆ ತಲುಪಿಸುವಂತಹ ವಿಧೇಯತೆಯ ಪದವಿಯನ್ನು ನೀಡು. ಪ್ರಪಂಚದ ಕಷ್ಟಗಳು ಸುಲಭವಾಗುವಂತಹ ದೃಢವಿಶ್ವಾಸವನ್ನು ದಯಪಾಲಿಸು. ಹೇ ನನ್ನ ಅಲ್ಲಾಹ್, ನಮ್ಮ ಕಿವಿಗಳು, ಕಣ್ಣುಗಳು ಮತ್ತು ಶಕ್ತಿಗಳನ್ನು ಜೀವನಪೂರ್ತಿ ಸರಿಯಾಗಿ ಬಳಸಲು ನಮಗೆ ಸೌಭಾಗ್ಯ ನೀಡು ಮತ್ತು ನಮ್ಮನ್ನು ಒಳಿತಿನ ವಾರಸುದಾರರನ್ನಾಗಿ ಮಾಡು. ಮತ್ತು ನಮ್ಮ ಮೇಲೆ ದೌರ್ಜನ್ಯ ಮಾಡುವವನ ಮೇಲೆ ಪ್ರತೀಕಾರವನ್ನು ಮಾಡು ಮತ್ತು ನಮ್ಮೊಂದಿಗೆ ಶತ್ರುತ್ವ ಹೊಂದಿರುವವನ ವಿರುದ್ಧ ನಮಗೆ ಸಹಾಯ ಮಾಡು ಮತ್ತು ದೀನಿನಲ್ಲಿ ಯಾವುದೇ ತೊಂದರೆ ಬರದಂತೆ ರಕ್ಷಿಸು ಮತ್ತು ಈ ಪ್ರಪಂಚವು ನಮ್ಮ ಅತಿದೊಡ್ಡ ದುಃಖ ಮತ್ತು ಚಿಂತೆಯಾಗದಂತೆ ಮಾಡು ಮತ್ತು ಪ್ರಪಂಚವು ನಮ್ಮ ಜ್ಞಾನದ ಮಿತಿಯಾಗದಂತೆ ಮಾಡು, ಅಂದರೆ ನಮ್ಮ ಜ್ಞಾನದ ವ್ಯಾಪ್ತಿಯು ಪ್ರಪಂಚಕ್ಕೆ ಮಾತ್ರ ಸೀಮಿತವಾಗದಂತೆ ಮಾಡು, ನಮ್ಮ ಚಿಂತೆಗಳು ಮತ್ತು ದುಃಖವು ಪ್ರಪಂಚಕ್ಕೆ ಮಾತ್ರ ಸೀಮಿತವಾಗಬಾರದು ಎಂದರ್ಥ. ಮತ್ತು ನಮ್ಮ ಮೇಲೆ ಕರುಣೆ ತೋರದ ಮತ್ತು ದಯೆಯಿಂದ ವರ್ತಿಸದ ವ್ಯಕ್ತಿಯನ್ನು ನಮ್ಮ ಮೇಲಾಧಿಕಾರಿಯನ್ನಾಗಿ ಮಾಡಬೇಡ. (ತಿರ್ಮಿಧಿ, ಕಿತಾಬುದ್ದಾವಾತ್ ಬಾಬ್ ಅಲ್ಲಾಹುಮ್ಮ ಅಖ್ಸಿಮ್ ಲನಾ..... ಹದೀಸ್-3502)

ಈ ದುಆವನ್ನು ಯಾವಾಗಲೂ ನೆನಪಿಟ್ಟುಕೊಳ್ಳಬೇಕು. ಹಝರತ್ ಪೈಗಂಬರ್(ಸ) ಅಲ್ಲಾಹನೊಡನೆ ಎಷ್ಟು ನೋವಿನಿಂದ ತುಂಬಿದ ದುಆವನ್ನು ಮಾಡಿದ್ದಾರೆ. ಇದು ಬಹಳ ಸಮಗ್ರವಾದ ದುಆ ಆಗಿದೆ. ಹಝರತ್ ಪೈಗಂಬರ್(ಸ) ಅದನ್ನು ನಮಗೆ ಕಲಿಸಿದ್ದಾರೆ. ಆದ್ದರಿಂದ, ನಮ್ಮ ಎಲ್ಲ ಶಕ್ತಿಗಳು, ನಮ್ಮ ಕಣ್ಣುಗಳು, ಕಿವಿಗಳು, ಮೂಗು, ನಾಲಿಗೆ, ಮೆದುಳು, ಹೃದಯ, ಪ್ರತಿಯೊಂದೂ ಅಲ್ಲಾಹನು ಪ್ರಯೋಜನವನ್ನು ನೀಡುವಂತಾಗಲಿ ಮತ್ತು ನಮ್ಮ ಶರೀರದ ಪ್ರತಿಯೊಂದು ಅಂಗಗಳು ಅಲ್ಲಾಹನಿಗೆ ಕೃತಜ್ಞತೆಯನ್ನು ಅರ್ಪಿಸುವಂತಾಗಲಿ ಮತ್ತು ನಾವು ಅವನ ಅನುಗ್ರಹಗಳಿಗೆ ವಾರಸುದಾರರಾಗುವಂತಾಗಲಿ ಮತ್ತು ಅಲ್ಲಾಹನು ನಮ್ಮನ್ನು ದಬ್ಬಾಳಿಕೆ ಮಾಡುವವರಿಂದ ರಕ್ಷಿಸಲಿ. ಇತ್ತೀಚಿನ ದಿನಗಳಲ್ಲಿ ಲೋಕದ ಕೆಲವು ಸ್ಥಳಗಳಲ್ಲಿ ಮತ್ತು ಪಾಕಿಸ್ತಾನದಲ್ಲಿಯೂ, ಬಾಂಗ್ಲಾದೇಶ ಮತ್ತು ಇತರ ಪ್ರದೇಶಗಳಲ್ಲಿಯೂ, ಆಲ್ಜೀರಿಯಾ ಮತ್ತು ಆಫ್ರಿಕಾದ ಕೆಲವು ದೇಶಗಳನ್ನೂ ಕೆಲವು ಕಿಡಿಗೇಡಿಗಳು ವಶಪಡಿಸಿಕೊಂಡಿದ್ದಾರೆ ಅಥವಾ ಆಕ್ರಮಿಸಿಕೊಂಡಿದ್ದಾರೆ ಮತ್ತು ಈ ಗುಂಪುಗಳಿಂದ ಸರ್ಕಾರಗಳು ಹೆದರಿ ಅವರ ಮಾತುಗಳನ್ನು ಒಪ್ಪಿಕೊಳ್ಳುತ್ತಿವೆ. ಆದ್ದರಿಂದ, ದೌರ್ಜನ್ಯ ಮಾಡುವವರಿಂದ ನಮಗೆ ಮುಕ್ತಿ ನೀಡು ಮತ್ತು ನೀನೇ ಸ್ವತಃ ಪ್ರತೀಕಾರವನ್ನು ಮಾಡು ಮತ್ತು ನಮ್ಮೊಂದಿಗೆ ಶತ್ರುತ್ವ ಹೊಂದಿರುವವರ ವಿರುದ್ಧ ನೀನು ನಮಗೆ ಸಹಾಯ ಮಾಡು ಎಂದು ನಾವ ಅಲ್ಲಾಹನೊಡನೆ ದುಆ ಮಾಡಬೇಕು ಮತ್ತು ಈ ರೀತಿ ನಾವು ರಮಝಾನಿನಲ್ಲಿ ದುಆ ಮಾಡುವಾಗ ಅಲ್ಲಾಹನು ಒಂದು ದೊಡ್ಡ ಬದಲಾವಣೆಯನ್ನು ಉಂಟುಮಾಡುತ್ತಾನೆ. ಹಾಗಾದರೆ ಪಾಕಿಸ್ತಾನದ ಮೌಲ್ವಿಯಾಗಲಿ ಅಥವಾ ಬಲಶಾಲಿಯಾದ ಯಾರೇ ಆಗಲಿ ಅಥವಾ ಯಾವುದೇ ಸರ್ಕಾರದ ಶಕ್ತಿಶಾಲಿ ವ್ಯಕ್ತಿಗೆ ಆಗಿರಲಿ, ನಮಗೆ ಯಾವುದೇ ಹಾನಿಯನ್ನು ಉಂಟುಮಾಡಲು ಸಾಧ್ಯವಿಲ್ಲ ಮತ್ತು ನಾವು ಅಲ್ಲಾಹನ ಕಡೆಗೆ ನಿಷ್ಠಾವಂತರಾಗಿ ಬಾಗಿದರೆ, ಆಗ ಅಲ್ಲಾಹನು ನಮ್ಮ ಸಹಾಯಕ್ಕೆ ಬರುತ್ತಾನೆ. ಮಿತ್ರ ಮತ್ತು ಸ್ನೇಹಿತನಾಗಿರುವ ಹಕ್ಕನ್ನು ಪೂರೈಸುತ್ತಾನೆ. ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅನುಗ್ರಹವನ್ನು ಪಡೆಯಲು ಹತ್ತಿರದ ಮಾರ್ಗ ದುಆ ಆಗಿದೆ ಮತ್ತು ಪರಿಪೂರ್ಣ ದುಆದ ಲಕ್ಷಣಗಳೆಂದರೆ ಅದರಲ್ಲಿ ಕರಗುವಿಕೆ, ಕಳವಳ, ಅಳಲು ಇರಬೇಕು. ವಿನಯ ಮತ್ತು ಅಸ್ವಸ್ಥತೆ ಇರಬೇಕು. ಕಳವಳ ಇರಬೇಕು. ವಿನಯ, ಕಳವಳ ಮತ್ತು ದುಃಖದಿಂದ ತುಂಬಿದ ದುಆವು ಅಲ್ಲಾಹನ ಅನುಗ್ರಹವನ್ನು ಆಕರ್ಷಿಸುತ್ತದೆ ಮತ್ತು ಸ್ವೀಕರಿಸಲ್ಪಡುತ್ತದೆ. ಆದರೆ ಇದು ಅಲ್ಲಾಹನ ಅನುಗ್ರಹವಿಲ್ಲದೆ ಸಾಧ್ಯವಲ್ಲ. ಅದಕ್ಕೆ ಇರುವ ಪರಿಹಾರವೇನೆಂದರೆ, ಮನಸ್ಸಿಲ್ಲದಿದ್ದರೂ, ಆಸಕ್ತಿ ಇಲ್ಲದಿದ್ದರೂ ದುಆ ಮಾಡುತ್ತಿರಬೇಕು, ದುಆ ಮಾಡುವುದನ್ನು ನಿಲ್ಲಿಸಬಾರದು. ದುಆದಲ್ಲಿ ಆನಂದವಿದ್ದರೂ ಇಲ್ಲದಿದ್ದರೂ, ದುಆ ಮಾಡುತ್ತಲೇ ಇರಬೇಕು, ನಿನ್ನ ಹೊರತಾಗಿ ನನಗೆ ಬೇರೆ ಯಾರೂ ಇಲ್ಲ ಎಂದು ಅಲ್ಲಾಹನೊಡನೆ ಹೇಳಬೇಕು. ನಾವು ಬೇರೆಲ್ಲಿಗೂ ಹೋಗುವುದಿಲ್ಲ. ನಾನು ಬೇರೆಯವರ ಬಳಿಗೆ ಹೋಗುವುದಿಲ್ಲ ಅಥವಾ ಹೋಗಲು ಸಾಧ್ಯವಿಲ್ಲ. ಆದ್ದರಿಂದ, ನಾನು ನಿನ್ನ ಬಳಿಯೇ ಕುಳಿತಿದ್ದೇನೆ ಮತ್ತು ನೀನು ನನ್ನ ಮಾತುಗಳನ್ನು ಒಪ್ಪಿಕೊಳ್ಳುವವರೆಗೆ ನನ್ನ ಮನಸ್ಸು ಸಮಾಧಾನಗೊಳ್ಳದು ಎಂದು ಅಲ್ಲಾಹನೊಡನೆ ಹೇಳಬೇಕು.

ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಔಪಚಾರಿಕತೆ ಮತ್ತು ನಟನೆಯ ರೂಪದಲ್ಲಿ ಆದರೂ ಕೂಡ ದುಆ ಮಾಡುತ್ತಲೇ ಇರಬೇಕು. ಆಗ ಒಂದು ಸಮಯದಲ್ಲಿ ಆ ಔಪಚಾರಿಕತೆ ಮತ್ತು ನಟನೆಯು ನಿಜವಾದ ದುಆದ ರೂಪವನ್ನು ಪಡೆಯುತ್ತದೆ. ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ನಿಜವಾದ ದುಆ ಮಾಡುವ ಸೌಭಾಗ್ಯಕ್ಕಾಗಿಯೂ ದುಆ ಮಾಡಬೇಕಾದ ಅಗತ್ಯವಿದೆ. ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅನೇಕ ಜನರು ದುಆ ಮಾಡುತ್ತಾರೆ. ಸಾಕಷ್ಟು ದುಆ ಮಾಡಿದ್ದೇವೆ, ಆದರೆ ಏನೂ ಆಗಿಲ್ಲವೆಂದು ಹೇಳುತ್ತಾರೆ. ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನ ಉಪದೇಶವೇನೆಂದರೆ, ಮಣ್ಣನ್ನು ಶೋಧಿಸಿ ಮುತ್ತು ಹುಡುಕುವುದರಲ್ಲೇ ಅನುಗ್ರಹವಿದೆ. ಏಕೆಂದರೆ ಮಣ್ಣು ಶೋಧಿಸುವುದರಿಂದಲೇ ಮುತ್ತು ಹೊರಬರುತ್ತದೆ. ಯಾವ ಉದ್ದೇಶವನ್ನು ಪಡೆಯಬೇಕೋ, ಯಾವ ಮುತ್ತನ್ನು ಪಡೆಯಬೇಕೋ ಅದು ಇದರಿಂದ ಹೊರಬರುತ್ತದೆ. ಸಾಂಪ್ರದಾಯಿಕ ವಿಧಾನದಿಂದ ಚಿನ್ನವನ್ನು ಪಡೆಯುವ ಜನರಿಗೆ ಗೊತ್ತಿದೆ. ಅವರು ನದಿಗಳ ದಡದಲ್ಲಿ ಕುಳಿತು ಜರಡಿಗಳಿಂದ ಮಣ್ಣನ್ನು ಶೋಧಿಸುತ್ತಲೇ ಇರುತ್ತಾರೆ, ಹಲವಾರು ಕಿಲೋಗಳಷ್ಟು ಅಥವಾ ಟನ್‌ಗಳಷ್ಟು ಮಣ್ಣನ್ನು ಶೋಧಿಸುತ್ತಲೇ ಇರುತ್ತಾರೆ ಮತ್ತು ನಂತರ ಸ್ವಲ್ಪ ಚಿನ್ನ ಒಂದು ಹತ್ತು ಗ್ರಾಮಷ್ಟು ಅಥವಾ ಅದಕ್ಕಿಂತ ಕಡಿಮೆ ಅವರಿಗೆ ಸಿಗುತ್ತದೆ, ಇದರಿಂದ ಅವರು ಸಂತೋಷಪಡುತ್ತಾರೆ, ಈ ಕೆಲಸದಲ್ಲಿ ಹಲವಾರು ದಿನಗಳವರೆಗೆ ತೊಡಗಿಸಿಕೊಂಡಿರುತ್ತಾರೆ. ಆದ್ದರಿಂದ, ಈ ರೀತಿ ನೀವು ಅಲ್ಲಾಹನ ಮುಂದೆ ಬಾಗುತ್ತಿದ್ದರೆ, ಅನುಗ್ರಹ ಲಭಿಸುತ್ತದೆ. ಕೊನೆಗೆ ಒಂದು ದಿನ ಗುರಿಯನ್ನು ಮುಟ್ಟುತ್ತದೆ. ಅವರ ಹೃದಯ ಮತ್ತು ನಾಲಿಗೆಯ ಹೊಂದಾಣಿಕೆಯಾಗುತ್ತದೆ. ಅನಂತರ ವಿನಯ, ಕರಗುವಿಕೆ ಮತ್ತು ದುಆಗೆ ಬೇಕಾದ ಎಲ್ಲವೂ ತಾವಾಗಿಯೇ ಉಂಟಾಗುತ್ತವೆ. ಒಂದು ರೀತಿಯ ಕರಗುವಿಕೆಯನ್ನು ಉಂಟುಮಾಡುವುದು ಬಹಳ ಮುಖ್ಯ. ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ರಾತ್ರಿಯಲ್ಲಿ ಎದ್ದು, ಎಷ್ಟೇ ಶ್ರದ್ಧೆಯಿಲ್ಲದಿದ್ದರೂ ಮತ್ತು ತಾಳ್ಮೆಯಿಲ್ಲದಿದ್ದರೂ, ಬೇಗ ಬೇಗ ನಮಾಝ್ ಮಾಡಿದರೂ, ಆದರೆ ಅವನು ಆ ಸ್ಥಿತಿಯಲ್ಲಿಯೂ ದುಆ ಮಾಡುವುದಾದರೆ ಹೀಗೆ ದುಆ ಮಾಡಿದರೆ: "ಹೇ ಅಲ್ಲಾಹ್, ಹೃದಯವು ನಿನ್ನ ಹಿಡಿತ ಮತ್ತು ನಿಯಂತ್ರಣದಲ್ಲಿದೆ, ಅದನ್ನು ಶುದ್ಧೀಕರಿಸು" ಹಾಗಾದರೆ ಹೃದಯ ಸಂಕುಚಿತಗೊಂಡಿರುವ ಸ್ಥಿತಿಯಲ್ಲಿಯೂ ಹೃದಯ ವಿಶಾಲಗೊಳ್ಳಲು ಅಲ್ಲಾಹನೊಡನೆ ಬೇಡಿದರೆ ಸಂಕುಚಿತ ಸ್ಥಿತಿಯಿಂದ ವಿಶಾಲತೆ ಹೊರಬರುವುದು. ಮನಸ್ಸಿಲ್ಲದ ಸ್ಥಿತಿಯಿಂದಲೂ ಅಲ್ಲಾಹನು ಅಂತಹ ಸ್ಥಿತಿಯನ್ನು ಉಂಟುಮಾಡುತ್ತಾನೆ, ಶ್ರದ್ಧೆ ಉಂಟಾಗಲು ಆರಂಭವಾಗುತ್ತದೆ ಮತ್ತು ಹೃದಯದ ತಡೆ ದೂರವಾಗುತ್ತದೆ ಮತ್ತು ಕರಗುವಿಕೆ ಉಂಟಾಗುತ್ತದೆ. ಮನಸ್ಸಿಗೆ ಉಂಟಾಗಿರುವ ಉಸಿರುಗಟ್ಟುವ ಸ್ಥಿತಿಯು ಕರಗುತ್ತದೆ ಮತ್ತು ದುಆ ಮಾಡುವುದರ ಕಡೆಗೆ ಗಮನ ಉಂಟಾಗುತ್ತದೆ. ಮಾತ್ರವಲ್ಲ ಹೃದಯದಿಂದ ದುಆಗಳು ಹೊರಬರಲು ಆರಂಭವಾಗುತ್ತದೆ. ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದೇ ಆ ಸಮಯ, ಅದನ್ನು ಸ್ವೀಕಾರದ ಸಮಯ ಎಂದು ಕರೆಯಲಾಗುತ್ತದೆ. ಅಂತಹ ಸ್ಥಿತಿ ಬರುವಾಗ, ದುಆದ ಸ್ವೀಕಾರದ ಸಮಯವಾಗಿದೆ ಎಂದು ತಿಳಿದುಕೊಳ್ಳಬೇಕು. ಆಗ ಆತ್ಮವು ಅಲ್ಲಾಹನ ಸನ್ನಿಧಿಯಲ್ಲಿ ನೀರಿನಂತೆ ಹರಿಯುತ್ತದೆ ಮತ್ತು ಮೇಲಿನಿಂದ ಕೆಳಕ್ಕೆ ಬೀಳುವ ಒಂದು ಹನಿಯಂತೆ ಕಾಣುತ್ತದೆ. ಆದ್ದರಿಂದ, ಕರಗುವಿಕೆ ಬರುವಂತಹ ಸ್ಥಿತಿಯ ನಂತರ ಮನುಷ್ಯನು ನಿರಂತರವಾಗಿ ದುಆ ಮಾಡಿದರೆ ಅಲ್ಲಾಹನು ಕರಗುವಿಕೆಯನ್ನು ಉಂಟುಮಾಡುತ್ತಾನೆ ಮತ್ತು ನಂತರ ದುಆಗಳ ಸ್ವೀಕಾರವು ಗೋಚರಿಸಲು ಆರಂಭವಾಗುತ್ತದೆ.(ಮಲ್‌ಫೂಝಾತ್, ಸಂಪುಟ-6, ಪುಟ-93-96, ಎಡಿಷನ್ 1984)

ಅದೇ ರೀತಿ ಹಝರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾವು ಯಾವ ದೇವನ ಕಡೆಗೆ ಕರೆಯುತ್ತಿದ್ದೇವೆಯೋ ಆ ದೇವನು ಅತ್ಯಂತ ದಯಾಮಯಿ ಮತ್ತು ಕರುಣಾಮಯಿ, ಲಜ್ಜೆಯ ಸ್ವಭಾವದವನು, ಸತ್ಯವಂತ, ನಿಷ್ಠಾವಂತ, ವಿನಯವಂತರಿಗೆ ಕರುಣೆ ತೋರುವವನು ಆಗಿದ್ದಾನೆ. ಆದ್ದರಿಂದ, ನೀವೂ ನಿಷ್ಠಾವಂತರಾಗಿ ಹಾಗೂ ಪರಿಶುದ್ಧ ಹೃದಯ ಮತ್ತು ನಿಷ್ಠೆಯಿಂದ ದುಆ ಮಾಡಿ, ಅವನು ನಿಮ್ಮ ಮೇಲೆ ಕರುಣೆ ತೋರುವನು. ಲೋಕದ ಗದ್ದಲದಿಂದ ದೂರವಿರಿ ಮತ್ತು ಸ್ವಾರ್ಥದ ಜಗಳಗಳಿಗೆ ಧರ್ಮದ ಬಣ್ಣವನ್ನು ನೀಡಬೇಡಿ. ಅಲ್ಲಾಹನಿಗಾಗಿ ಸೋಲನ್ನು ಆಯ್ಕೆಮಾಡಿರಿ ಮತ್ತು ಸೋಲನ್ನು ಒಪ್ಪಿಕೊಳ್ಳಿ, ಆಗ ನೀವು ದೊಡ್ಡ ದೊಡ್ಡ ವಿಜಯಗಳಿಗೆ ಉತ್ತರಾಧಿಕಾರಿಗಳಾಗುವಿರಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಚಿಕ್ಕ ಚಿಕ್ಕ ಲೌಕಿಕ ವಿಷಯಗಳಿಂದ ದೂರವಿರಬೇಕು. ಅಲ್ಲಾಹನ ಸಾಮೀಪ್ಯವನ್ನು ಪಡೆಯಲಿಕ್ಕಾಗಿ ಈ ವಿಷಯಗಳಿಂದ ದೂರವಿರಬೇಕು. ಮನುಷ್ಯರ ಹಕ್ಕುಗಳಿಗೆ ಗಮನ ಕೊಡಬೇಕು. ಸಂಬಂಧಿಕರ ಸಂಬಂಧಗಳಿಗೆ ಗಮನ ಕೊಡಬೇಕು. ಸ್ನೇಹಿತರ ಹಕ್ಕುಗಳನ್ನು ಪೂರೈಸುವುದಕ್ಕೆ ಗಮನ ಕೊಡಬೇಕಾಗುತ್ತದೆ, ಆಗ ಮಾತ್ರ ಅಲ್ಲಾಹನ ಹಕ್ಕುಗಳನ್ನು ಪೂರೈಸುವುದಕ್ಕೆ ಗಮನ ಉಂಟಾಗುತ್ತದೆ ಮತ್ತು ನಂತರ ದುಆಗಳ ಸ್ವೀಕಾರದ ಚಿಹ್ನೆಯನ್ನು ಮನುಷ್ಯನು ನೋಡುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ದುಆದ ಮೊದಲ ಅನುಗ್ರಹವೆಂದರೆ ಮನುಷ್ಯನಲ್ಲಿ ಪರಿಶುದ್ಧ ಬದಲಾವಣೆ ಉಂಟಾಗುತ್ತದೆ, ದುಆದ ಸ್ವೀಕಾರಕ್ಕೆ ಇದು ಬಹಳ ಅವಶ್ಯಕ, ಅನಂತರ ಪರಿಶುದ್ಧ ಬದಲಾವಣೆ ಉಂಟಾಗಬೇಕು. ಕೇವಲ ರಮಝಾನಿನಲ್ಲಿ ಮಾತ್ರ ಪರಿಶುದ್ಧ ಬದಲಾವಣೆಗಳು ಉಂಟಾಗಬಾರದು, ಬದಲಿಗೆ ನಿರಂತರ ಪರಿಶುದ್ಧ ಬದಲಾವಣೆ ಉಂಟಾಗುವಾಗ ದುಆದ ಸ್ವೀಕಾರದ ಪರಿಣಾಮವು ಮನುಷ್ಯನ ಮೇಲೆ ಗೋಚರಿಸುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಬದಲಾವಣೆಯಿಂದ ಅಲ್ಲಾಹನು ತನ್ನ ಗುಣಗಳಲ್ಲಿಯೂ ಬದಲಾವಣೆ ಮಾಡುತ್ತಾನೆ. ಸತ್ಯದಲ್ಲಿ ಅವನ ಗುಣಗಳು ಬದಲಾಗುವುದಿಲ್ಲ. ಆದರೆ ಬದಲಾದವನಿಗೆ ಅವನು ವಿಶೇಷವಾದ ರೀತಿಯಲ್ಲಿ ಪ್ರಕಟಗೊಳ್ಳುತ್ತಾನೆ. ಅಲ್ಲಾಹನ ಗುಣಗಳು ಬದಲಾಗುತ್ತವೆ ಎಂದಲ್ಲ, ಬದಲಾಗಿ ಅಲ್ಲಾಹನು ಕರುಣೆ ಮತ್ತು ಅನುಗ್ರಹಗಳ ಗುಣಗಳನ್ನು ಪ್ರಕಟಿಸಲು ತೊಡಗುತ್ತಾನೆ ಮತ್ತು ಮನುಷ್ಯನಿಗೆ ಅದರ ಅನುಭವವಾಗುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ವಿಷಯಗಳು ಲೌಕಿಕ ಜನರಿಗೆ ಗೊತ್ತಿಲ್ಲ, ಮನುಷ್ಯನಲ್ಲಿ ಅಂತಹ ಸ್ಥಿತಿ ಉಂಟಾಗುವಾಗ, ವ್ಯಕ್ತಿಯು ಅಲ್ಲಾಹನ ಆಪ್ತ ಮಿತ್ರನಾಗುವಾಗ, ಆಗ ಅಲ್ಲಾಹನು ಬೇರೆಯೇ ರೀತಿಯಲ್ಲಿ ಅವನಿಗೆ ಭಾಸವಾಗುತ್ತದೆ, ಆದರೆ ಅಲ್ಲಾಹನು ಬೇರೆಯಾಗಿರುವುದಿಲ್ಲ. ಆದರೆ ಹೊಸ ಪ್ರಕಾಶವು ಅವನನ್ನು ಹೊಸ ಬಣ್ಣದಲ್ಲಿ ತೋರಿಸುತ್ತದೆ. ಆಗ ಆ ವಿಶೇಷ ಪ್ರಕಾಶದ ಮೂಲಕ ಆ ಬದಲಾದವನಿಗಾಗಿ ಅವನು ಇತರರಿಗಾಗಿ ಮಾಡದ ಕೆಲಸಗಳನ್ನು ಮಾಡುತ್ತಾನೆ. (ಲೆಕ್ಚರ್ ಸಿಯಾಲ್ಕೋಟ್, ರೂಹಾನಿ ಖಝಾಈನ್, ಸಂಪುಟ-20, ಪುಟ-223)

ಕೆಲವರು ಹೇಳುತ್ತಾರೆ: ಇದು ವಿಧಿಯಾಗಿದೆ, ಇದು ಆಗಲೇಬೇಕು. ಹಾಗಾದರೆ ದುಆ ಹೇಗೆ ಸ್ವೀಕಾರವಾಗುವುದು? ಅಲ್ಲಾಹನು ಹೇಳುತ್ತಾನೆ, ಸದುದ್ದೇಶದಿಂದ ದುಆ ಮಾಡಿದರೆ ಅಲ್ಲಾಹನು ವಿಧಿಯನ್ನು ಬದಲಾಯಿಸುತ್ತಾನೆ, ಅಲ್ಲಾಹನು ತನ್ನ ತೀರ್ಮಾನಗಳನ್ನು ಬದಲಾಯಿಸುತ್ತಾನೆ. ಕೆಟ್ಟ ಅಂತ್ಯವು ಉತ್ತಮ ಅಂತ್ಯಗಳಾಗಿ ಬದಲಾಗುತ್ತದೆ.

ಆದ್ದರಿಂದ, ನಾವು ದುಆಗಳ ಕಡೆಗೆ ಬಹಳ ಗಮನ ಹರಿಸಬೇಕಾದ ಅಗತ್ಯವಿದೆ. ಈ ರಮಝಾನನ್ನು ದುಆಗಳ ಸ್ವೀಕಾರದ ರಮಝಾನನ್ನಾಗಿ ಮಾಡೋಣ. ಇದು ನಮ್ಮಲ್ಲಿ ಪರಿಶುದ್ಧ ಬದಲಾವಣೆಯನ್ನು ಉಂಟುಮಾಡುವ ರಮಝಾನ್ ಆಗಲಿ. ಅನಂತರ ಈ ನಿರಂತರ ಪರಿಶುದ್ಧ ಬದಲಾವಣೆಯು ನಮ್ಮ ಜೀವನದ ಭಾಗವಾಗಲಿ. ಅಲ್ಲಾಹನು ನಮ್ಮನ್ನು ಶತ್ರುಗಳಿಂದ, ಎಲ್ಲ ವಿರೋಧಿಗಳಿಂದ ರಕ್ಷಿಸಲಿ, ಎಲ್ಲ ದೌರ್ಜನ್ಯಗಾರರಿಂದ ನಮಗೆ ಮುಕ್ತಿ ನೀಡಲಿ. ಈ ರಮಝಾನನ್ನು ನಮ್ಮ ಜೀವನದಲ್ಲಿ ನಿರಂತರ ಪರಿಶುದ್ಧ ಬದಲಾವಣೆಯನ್ನು ಉಂಟುಮಾಡುವ ಮಾರ್ಗನ್ನಾಗಿ ಮಾಡಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ ಮತ್ತು ನಂತರ ಈ ಪರಿಶುದ್ಧ ಬದಲಾವಣೆಯು ನಮ್ಮ ಜೀವನದ ಶಾಶ್ವತ ಭಾಗವಾಗಲಿ. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ. ಆಮೀನ್

-------------*****-------------

*(ಪುಟ ಸಂಖ್ಯೆ 24ರ ಉಳಿದ ಭಾಗ)*

ಇಸ್ಲಾಂನ ಬೋಧನೆಯಾಗಿದೆ... ಪ್ರತಿಯೊಬ್ಬ ಮಹಿಳೆಗೂ ಸಾಮಾನ್ಯವಾಗಿ ಇರಬೇಕಾದ ಒಂದು ವಿಷಯವೆಂದರೆ, ಅವಳು ಧರ್ಮನಿಷ್ಠೆಯನ್ನು ಅನುಸರಿಸಿ ತನ್ನ ಜೀವನವನ್ನು ನಡೆಸಬೇಕು ಮತ್ತು ತನ್ನ ಲಜ್ಜೆ ಮತ್ತು ಪರಿಶುದ್ಧತೆಯನ್ನು ರಕ್ಷಿಸಿಕೊಳ್ಳಬೇಕು, ಆಗ ಮಾತ್ರ ಅವಳನ್ನು ನಿಜವಾದ ಅಹ್ಮದಿ ಮುಸ್ಲಿಂ ಎಂದು ಕರೆಯಬಹುದು. ಅವರು ಮತ್ತಷ್ಟು ಹೇಳಿದರು: "ನಂತರ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ತನ್ನ ವಿಶ್ವಾಸನ್ನು ಪರಿಪೂರ್ಣಗೊಳಿಸಿಕೊಂಡ ಸರ್ವಶಕ್ತನಾದ ಅಲ್ಲಾಹನಿಗೆ ಹತ್ತಿರವಾಗಲು ಬಯಸುವ ಮಹಿಳೆ, ಮತ್ತು ಪ್ರಸ್ತುತ ಕಾಲದ ಇಮಾಮ್ ಅನ್ನು ಅನುಸರಿಸಿ, ಎಲ್ಲಾ ದುಷ್ಟತನಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಪ್ರತಿಜ್ಞೆ ಮಾಡಿದ ಅಹ್ಮದಿ ಮಹಿಳೆ ತನ್ನ ಗೌರವ, ಪರಿಶುದ್ಧತೆ ಮತ್ತು ಪಾವಿತ್ರ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು."

ಹುಝೂರ್ ಅನ್ವರ್(ಅತಬಿಅ) ಹೇಳುತ್ತಾರೆ: ಮಾರುಕಟ್ಟೆಗಳಲ್ಲಿ ಮತ್ತು ಮನರಂಜನಾ ಸ್ಥಳಗಳಲ್ಲಿ ಮುಸುಕು ಧರಿಸದಿರುವುದು, ಮುಸುಕು ಇಲ್ಲದೆ ಮಿಶ್ರ ಪಾರ್ಟಿಗಳಿಗೆ ಹಾಜರಾಗುವುದು, ಸೋದರಸಂಬಂಧಿಗಳು, ಸಹಪಾಠಿಗಳು ಮತ್ತು ಪುರುಷರಲ್ಲದವರೊಂದಿಗೆ ಅನಗತ್ಯ ಸ್ನೇಹ ಬೆಳೆಸುವುದು ಮತ್ತು ಅಸಭ್ಯ ಕಾರ್ಯಕ್ರಮಗಳನ್ನು ನೋಡುವುದು, ಜೀನ್ಸ್‌ನೊಂದಿಗೆ ಸಣ್ಣ ಕುಪ್ಪಸ ಧರಿಸುವುದು, ಲಜ್ಜೆಯ ಅವಶ್ಯಕತೆಗಳಿಗೆ ವಿರುದ್ಧವಾದ ಬಟ್ಟೆಗಳನ್ನು ಧರಿಸಬೇಕಾದ ಸ್ಥಳದಲ್ಲಿ ಕೆಲಸ ಮಾಡುವುದು, ಚಲನಚಿತ್ರಗಳನ್ನು ನೋಡುವುದು ಮತ್ತು ಮದುವೆಗಳಲ್ಲಿ ನೃತ್ಯ ಮಾಡುವುದು ಇವೆಲ್ಲವೂ ಮಹಿಳೆಯ ಲಜ್ಜೆಯನ್ನು ಕಸಿದುಕೊಳ್ಳುವ ಮತ್ತು ಅವಳನ್ನು ಕೊಳಕು ಮಾಡುವ ಪೈಶಾಚಿಕ ತಂತ್ರಗಳಾಗಿವೆ." (ಖುತ್‌ಬ ಜುಮುಅ, ಅಕ್ಟೋಬರ್ 9, 2011)

ಪ್ರಿಯ ಸಹೋದರಿಯರೇ! ಹುಝೂರ್ ಅನ್ವರ್(ಅತಬಿಅ) ಅಹ್ಮದಿ ಮಹಿಳಾ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಬುರ್ಖಾ ಧರಿಸುವ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಸಲಹೆ ನೀಡಿದರು ಮತ್ತು ಹೇಳಿದರು: "... ಹುಡುಗಿ ಯೌನವ ಪ್ರಾಯಕ್ಕೆ ಕಾಲಿಟ್ಟಾಗ, ಆಕೆಯನ್ನು ನೋಡಿಕೊಳ್ಳುವುದು ಪರಿಸರದ ಜವಾಬ್ದಾರಿಯಾಗಿದೆ. ಹಜ್ ಬಗ್ಗೆ ಇಸ್ಲಾಂ ಕೂಡ ಒಂದು ಆಜ್ಞೆಯನ್ನು ಹೊಂದಿದೆ, ಮಹಿಳೆ ಒಬ್ಬಂಟಿಯಾಗಿ ಹೋಗಬಾರದು ಆದರೆ ತನ್ನ ಮಹ್ರಮ್ ಅನ್ನು ತನ್ನೊಂದಿಗೆ ಕರೆದುಕೊಂಡು ಹೋಗಬೇಕು... ಇಂತಹ ವಿಷಯಗಳು ಕೆಟ್ಟವು ಮತ್ತು ಅವುಗಳನ್ನು ತಪ್ಪಿಸಬೇಕು ಎಂದು ಹುಡುಗಿಯರಿಗೆ ಅರಿವು ಮೂಡಿಸಿ."

(ಕ್ಲಾಸ್ ತಾಲಿಬಾತ್, ಜರ್ಮನಿ, ಜೂನ್ 10, 2006)

ಅದೇ ರೀತಿ, ಹುಡುಗಿಯರು ಬೇರೆ ನಗರಗಳಿಗೆ ಅಧ್ಯಯನ ಮಾಡಲು ಹೋಗುವ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಹೇಳಿದರು: ಪೋಷಕರು ಅನುಮತಿ ನೀಡಿದರೆ, ಅವರು ಎಲ್ಲಿಗೆ ಹೋದರೂ ಅವರೊಂದಿಗೆ ಯಾರು ಇರಬೇಕೆಂದು ಯೋಚಿಸಬಹುದು. ಹುಡುಗಿಯರಿಗೆ ಪ್ರತ್ಯೇಕ ಹಾಸ್ಟೆಲ್ ಇರಬೇಕು, ಅದು ಪ್ರತ್ಯೇಕವಾಗಿದ್ದರೆ ಪರವಾಗಿಲ್ಲ. ನಂತರ, ಅಲ್ಲಿ ಅಧ್ಯಯನ ಮಾಡುವಾಗ, ಒಬ್ಬರ ಪಾವಿತ್ರ್ಯ ಮತ್ತು ಪರಿಶುದ್ಧತೆಯ ಬಗ್ಗೆ ಕಾಳಜಿ ವಹಿಸುವುದು ಮುಖ್ಯ.

"ನಿಮ್ಮ ಪೋಷಕರಿಗೆ ಅದರ ಬಗ್ಗೆ ನೆಮ್ಮದಿ ಇಲ್ಲದಿದ್ದರೆ, ನೀವು ನಿಮ್ಮ ಊರಿನಲ್ಲೇ ಇದ್ದು ಇಲ್ಲಿಯೇ ಓದುವುದು ಉತ್ತಮ."

(ಕ್ಲಾಸ್ ವಾಖಿಫಾತೆ ನೌ, ಜರ್ಮನಿ ಅಕ್ಟೋಬರ್ 18, 2011)

ನಮ್ಮ ಧಾರ್ಮಿಕೇತರ ಸ್ನೇಹಿತರಿಗೆ ಮುಸುಕು ಏಕೆ ಅಗತ್ಯ ಎಂದು ನಾವು ಹೇಗೆ ವಿವರಿಸಬಹುದು? ಈ ಪ್ರಶ್ನೆಗೆ ಅವರು ಹೀಗೆ ಹೇಳಿದರು: "ಮೊದಲು, ಸರ್ವಶಕ್ತನಾದ ಅಲ್ಲಾಹನು ನಮಗೆ ಹೇಳಿದ ಧರ್ಮವನ್ನು ನಾವು ಅನುಸರಿಸುತ್ತೇವೆ ಎಂದು ನಾವು ಪ್ರತಿಜ್ಞೆ ಮಾಡಿದ್ದೇವೆ ಎಂದು ಅವರಿಗೆ ತಿಳಿಸಬೇಕು. ನಿಮ್ಮ ಪವಿತ್ರತೆ ಹಾಗೇ ಉಳಿಯಲು ಮತ್ತು ಸಮಾಜದಲ್ಲಿ ಹುಡುಗರೊಂದಿಗೆ ನಾನು ಹೆಚ್ಚು ಬೆರೆಯಲು ಬಯಸುವುದಿಲ್ಲ ಮತ್ತು ನನ್ನ ಮತ್ತು ಹುಡುಗರ ನಡುವೆ ತಡೆಗೋಡೆ ಇಡಲು ಬಯಸುವುದಿಲ್ಲ ಎಂದು ನೀವು ಅರಿತುಕೊಳ್ಳಲು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನೀವು ಮುಸುಕು ಧರಿಸಬೇಕೆಂದು ಆದೇಶಿಸಿದ್ದಾನೆ."

ಅದೇ ರೀತಿ, ಧರ್ಮೋಪದೇಶದ (ತಬ್ಲೀಗಿನ) ಕ್ಷೇತ್ರದಲ್ಲಿ, ಒಬ್ಬರು ಇಸ್ಲಾಮಿಕ್ ನಮ್ರತೆಯ ನಿಯಮವನ್ನು ಪಾಲಿಸುತ್ತಾ ಕೆಲಸ ಮಾಡಬೇಕು ಎಂದು ಅವರು ಹೇಳಿದರು:

"ಇಂಟರ್ನೆಟ್‌ನಲ್ಲಿ ಸುವಾರ್ತಾಬೋಧನಾ ಸಂವಹನ ಇರಬೇಕಾದರೆ, ಮಹಿಳೆಯರು ಮಹಿಳೆಯರೊಂದಿಗೆ ಮಾತ್ರ ಸುವಾರ್ತಾಬೋಧನಾ ಸಂವಹನವನ್ನು ಹೊಂದಿರಬೇಕು."

ಹುಝೂರ್ ಅನ್ವರ್(ಅತಬಿಅ) ಕೂಡ ಮುಸುಕಿನ ಮಹತ್ವವನ್ನು ಸ್ಪಷ್ಟಪಡಿಸಿದರು. ಅವರು ಹೇಳಿದರು: ನೀವು ಎಲ್ಲೋ ಪುರುಷರ ಸಂಪರ್ಕಕ್ಕೆ ಬಂದರೆ, ಅವರಿಗೆ ಪುರುಷರ ವಿಳಾಸಗಳನ್ನು ನೀಡಿ ಮತ್ತು ನಿಮ್ಮ ಕ್ಷೇತ್ರಕ್ಕೆ ಮಹಿಳೆಯರನ್ನು ಮಾತ್ರ ಕರೆತನ್ನಿ. ಮಹಿಳೆಯರು ಸಂಪೂರ್ಣವಾಗಿ ಪ್ರತಿಕ್ರಿಯಿಸಲು ಸಾಧ್ಯವಾಗದಿದ್ದರೆ ಮತ್ತು ಮಿಶ್ರ ಕೂಟವಿದ್ದರೆ, ನೀವು ಕರೆತಂದಿರುವ ಮಹಿಳಾ ಅತಿಥಿಯೊಂದಿಗೆ ಒಂದು ಬದಿಯಲ್ಲಿ ಕುಳಿತು ಮುಸುಕನ್ನು ನೋಡಿಕೊಳ್ಳಿ. ಆದರೆ ತಿನ್ನಲು ಮತ್ತು ಕುಡಿಯಲು ಸಮಯ ಬಂದಾಗ, ಆ ಸಮಯದಲ್ಲಿ ಮಿಶ್ರ ಕೂಟದಲ್ಲಿ ಕುಳಿತುಕೊಳ್ಳಬೇಡಿ, ಆದರೆ ಪ್ರತ್ಯೇಕ ಆವರಣಕ್ಕೆ ಹೋಗಿ ಕೂಟಗಳಲ್ಲಿ ಒಟ್ಟಿಗೆ ಸೇರುವ ಮಹಿಳೆಯರ ವಿಳಾಸಗಳನ್ನು ಪಡೆದು ಅವರನ್ನು ಮಹಿಳಾ ಕೂಟಗಳಿಗೆ ಮಾತ್ರ ಆಹ್ವಾನಿಸಿ. ಹಾಗಾದರೆ, ನೀವು ಮಿಶ್ರ ಕೂಟಗಳಿಗೆ ಏಕೆ ಬರುವುದಿಲ್ಲ ಎಂಬ ಪ್ರಶ್ನೆಯೂ ಅವರ ಮನಸ್ಸಿನಲ್ಲಿ ಉದ್ಭವಿಸುತ್ತದೆ. ಅಲ್ಲಿ ಇಸ್ಲಾಮಿಕ್ ಮುಸುಕಿನ ಬಗ್ಗೆ ಅವರ ತಪ್ಪು ಕಲ್ಪನೆಗಳನ್ನು ನೀವು ನಿವಾರಿಸಬಹುದು."

(ಲಜ್ನಾ ಇಮಾವುಲ್ಲಾ ಜರ್ಮನಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆ, ಜೂನ್ 9, 2006)

ಖುತ್‌ಬ ಜುಮುಅದಲ್ಲಿ ಹುಝೂರ್ ಅನ್ವರ್(ಅತಬಿಅ) ರವರು ಹುಡುಗಿಯರು ಕೆಲಸ ಮಾಡುವ ಮತ್ತು ಮುಸುಕು ಧರಿಸುವ ಬಗ್ಗೆ ವಿವರವಾದ ಮಾರ್ಗದರ್ಶನ ನೀಡಿದರು: "ಒಬ್ಬ ಹುಡುಗಿ ಬ್ಯಾಂಕಿನಲ್ಲಿ ಉತ್ತಮ ಕೆಲಸ ಸಿಗುತ್ತದೆ ಎಂದು ಬರೆದಿದ್ದಾಳೆ... ಮುಸುಕು ಧರಿಸುವುದು ಮತ್ತು ಮುಸುಕು ಧರಿಸುವುದನ್ನು ನಿಷೇಧಿಸಿದ್ದರೆ, ಮತ್ತು ನಾನು ಕೋಟ್ ಧರಿಸಲು ಸಾಧ್ಯವಾಗದಿದ್ದರೆ, ನಾನು ಈ ಕೆಲಸವನ್ನು ಮಾಡಬಹುದೇ?... ಕೆಲಸ ಮಾಡುವ ಹುಡುಗಿಯರು ತಮ್ಮ ಕೆಲಸದ ಸ್ಥಳದಲ್ಲಿ ಬುರ್ಖಾ ಮತ್ತು ಹಿಜಾಬ್ ಅನ್ನು ತೆಗೆದು ಕೆಲಸ ಮಾಡಬಹುದು ಎಂದು ನೀವು ಹೇಳಿದ್ದೀರಿ ಎಂದು ನಾನು

*(ಪುಟ 16 ರಲ್ಲಿ ಮುಂದುವರಿಸಲಾಗಿದೆ)*

ಜಲ್ಸ ಸಾಲಾನ ಖಾದಿಯಾನ್ 2024ರ ಭಾಷಣ

# ಖಲೀಫರ ಸ್ಥಾನಮಾನ, ಖಿಲಾಫತ್‌ನ ಅನುಸರಣೆ ಮತ್ತು ನಿಷ್ಠೆಯ ಪ್ರಾಮುಖ್ಯತೆ ಹಾಗೂ ಅನುಗ್ರಹಗಳು

(ಮುಝಫ್ಫರ್ ಅಹ್ಮದ್ ನಾಸಿರ್ ಸಾಹಿಬ್ ನಾಝಿರ್ ಇಸ್ಲಾಹ್ ವ ಇರ್ಷಾದ್ ಮರ್ಕಝಿಯ್ಯ, ಖಾದಿಯಾನ್)

وَعَدَ اللّٰهُ الَّذِيۡنَ اٰمَنُوۡا مِنۡكُمۡ وَعَمِلُوا
الصّٰلِحٰتِ لَيَسۡتَخۡلِفَنَّهُمۡ فِى الۡاَرۡضِ كَمَا
اسۡتَخۡلَفَ الَّذِيۡنَ مِنۡ قَبۡلِهِمۡ وَلَيُمَكِّنَنَّ
لَهُمۡ دِيۡنَهُمُ الَّذِى ارۡتَضٰى لَهُمۡ
وَلَيُبَدِّلَنَّهُمۡ مِّنۡۢ بَعۡدِ خَوۡفِهِمۡ اَمۡنًا
يَعۡبُدُوۡنَنِىۡ لَا يُشۡرِكُوۡنَ بِىۡ شَيۡـًٔا وَمَنۡ كَفَرَ
بَعۡدَ ذٰ لِكَ فَاُولٰۤـئِكَ هُمُ الۡفٰسِقُوۡنَ۔

ಖಿಲಾಫತ್ ಗೌರವಿಸದವನು ಜೀವನದಲ್ಲಿ ಸಂತೋಷವಾಗಿರುವುದಿಲ್ಲ.
ಖಿಲಾಫತ್ ಮೇಲೆ ನಮ್ಮ ಜೀವ ಏಕೆ ಅರ್ಪಿತನಾಗಬರದು,
ಅದುವೇ ನಮ್ಮ ಜೀವನಕ್ಕೆ ಆಶ್ರಯವಾಗಿದೆ.

ಸನ್ಮಾನ್ಯ ಸಭಾಧ್ಯಕ್ಷರೇ ಹಾಗೂ ಆದರಣೀಯ ಸಭಿಕರೇ!
ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹಿ ವಬರಕಾತುಹು

ಇದೀಗ ನೀವು ಕೇಳಿದಂತೆ ನನ್ನ ಭಾಷಣದ ಶೀರ್ಷಿಕೆಯು **"ಖಲೀಫರ ಸ್ಥಾನಮಾನ ಖಿಲಾಫತ್‌ನ ಅನುಸರಣೆ ಮತ್ತು ನಿಷ್ಠೆಯ ಪ್ರಾಮುಖ್ಯತೆ ಹಾಗೂ ಅನುಗ್ರಹಗಳು."** ಈಗಷ್ಟೇ ನಿಮ್ಮ ಮುಂದೆ ಸೂರಃ ಅನ್ನೂರ್‌ನ ಇಸ್ತಿಖ್‌ಲಾಫ್ ವಚನವನ್ನು ಪಠಿಸಿದ್ದೇನೆ. ಅದರ ಅನುವಾದ ಹೀಗಿದೆ. ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫ‌ರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು. (ಸೂರಃ ಅನ್ನೂರ್-56)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿದರು:

ಖಲೀಫ ಎಂದರೆ ಉತ್ತರಾಧಿಕಾರಿ ಎಂದರ್ಥ. ಸಂದೇಶವಾಹಕನ ನಿಜವಾದ ಉತ್ತರಾಧಿಕಾರಿ ಎಂದು ಅರ್ಥೈಸಿಕೊಳ್ಳಬಹುದು. ಸಂದೇಶವಾಹಕನ ಎಲ್ಲಾ ಪರಿಪೂರ್ಣತೆಯನ್ನು ಪ್ರತಿಬಿಂಬಿತ ರೂಪದಲ್ಲಿ ಖಲೀಫರು ಹೊಂದಿರುತ್ತಾರೆ. ಖಲೀಫ ವಾಸ್ತವವಾಗಿ ಸಂದೇಶವಾಹಕರ ಪ್ರತಿನಿಧಿಯಾಗಿರುತ್ತಾರೆ. ಏಕೆಂದರೆ ಯಾವುದೇ ಮುನಷ್ಯನಿಗೆ ಶಾಶ್ವತ ಜೀವನವಿಲ್ಲ. ಆದ್ದರಿಂದ ಅಲ್ಲಾಹನು ಅತ್ಯಂತ ಶ್ರೇಷ್ಠರಾದ ಸಂದೇಶವಾಹಕರ ಅಸ್ತಿತ್ವವನ್ನು ತೀರ್ಪಿನ ದಿನದವರೆಗೆ ಶಾಶ್ವತವಾಗಿ ಪ್ರತಿನಿಧಿಗಳ ಮೂಲಕ ಕಾಪಾಡಿಕೊಳ್ಳಲು ಉದ್ದೇಶಿಸಿದ್ದಾನೆ. ಆದ್ದರಿಂದ ಈ ಉದ್ದೇಶಕ್ಕಾಗಿ ಅಲ್ಲಾಹನು ಪ್ರವಾದಿತ್ವದ ಅನುಗ್ರಹಗಳಿಂದ ಜಗತ್ತು ಎಂದೂ ವಂಚಿತನಾಗದಂತೆ ಖಿಲಾಫತ್ ಸೂಚಿಸಿದನು." (ಶ಼ಹಾದ಼ತ಼ುಲ್ ಖುರ್‌ಆನ್, ರೂಹಾನಿ ಖಝಾಇನ್, ಸಂ-6, ಪುಟ-353).

ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರು(ರ) ಹೇಳುತ್ತಾರೆ:

ಯಾವುದೇ ರೀತಿಯ ಖಲೀಫನನ್ನು ನಿರ್ಧರಿಸುವುದು ದೈವಿಕ ಕಾರ್ಯವಾಗಿದೆ. ಆದವ್(ಅ)ನನ್ನು ಸೃಷ್ಟಿಸಿದ್ದು ಅಲ್ಲಾಹನು, ದಾಊದ್(ಅ)ರನ್ನು ಸೃಷ್ಟಿಸಿದ್ದು ಅಲ್ಲಾಹನು, ನಮಗೆಲ್ಲರಿಗೂ ಸೃಷ್ಟಿಸಿದ್ದು ಅಲ್ಲಾಹನೇ. ಅಂತೆಯೇ ಹಝ್ರತ್ ಪೈಗಂಬರ್(ಸ) ರವರ ಉತ್ತರಾಧಿಕಾರಿಗಳಿಗೆ ಹೇಳಲಾಗುತ್ತದೆ- **ವಅದಲ್ಲಾಹುಲ್ಲಝೀನ ಆಮನೂ ಮಿನ್ಕುಮ್ ಆಮಿಲುಸ್ಸಾಲಿಹಾತಿ ಲಯಸ್ತಖ್ಲಿಫನ್ನಹುಮ್ ಫಿಲ್ ಅರ್ಝಿ ಕಮಸ್ತಖ್ಲಫಲ್ಲಝೀನ ಮಿನ್ ಖಬ್ಲಿಹಿಮ್, ವಲಯುಮಕ್ಕಿನನ್ನಲಹುಮ್ ದೀನಹುಮುಲ್ಲಝಿರ್ತಝಾಲಹುಮ್ ವಲಯುಬದ್ದಿಲನ್ನಲಹುಮ್ ಮಿಮ್ ಬಅದಿ ಖೌಫಿಹಿಮ್ ಅಮ್‌ನಾ-** (ಅನ್ನೂರ್: 56) ಸತ್ಯವಿಶ್ವಾಸಿಗಳಲ್ಲಿ ಖಲೀಫರನ್ನಾಗಿ ನಿಯೋಜಿಸುವುದು ಅಲ್ಲಾಹನ ಕಾರ್ಯವೇ ಆಗಿದೆ. ಅವರಿಗಾಗಿ ಅಲ್ಲಾಹನು ಶಾಂತಿಯನ್ನು ದಯಪಾಲಿಸುತ್ತಾನೆ. ಯಾವುದೇ ರೀತಿಯ ಭಯಭೀತಿ ಉಂಟಾದರೂ ಅಲ್ಲಾಹನು ಅವರಿಗಾಗಿ ಶಾಂತಿಯ ಮಾರ್ಗವನ್ನು ತೆರೆಯುತ್ತಾನೆ. ಅವರಲ್ಲಿ ನಂಬಿಕೆಯಿಲ್ಲದವರ ಸಂಕೇತವೆಂದರೆ ಅವರ ಸತ್ಕಾರ್ಯಗಳು ಕುಂಠಿತಗೊಳ್ಳುತ್ತವೆ. ಧಾರ್ಮಿಕ ಕಾರ್ಯಗಳಿಂದ ದೂರವಾಗುತ್ತಾರೆ. (ಹ಼ಖಾಇಕುಲ್ ಫುರ್ಖಾನ್, ಸಂಪುಟ-1, ಪುಟ-125, 126).

### ಖಲೀಫರ ಸ್ಥಾನಮಾನ

ಹಝ್ರತ್ ಸಯ್ಯದ್ ಮುಹಮ್ಮದ್ ಇಸ್ಮಾಯಿಲ್ ಶಹೀದ್(ರಹ್) ಖಲೀಫರ ಸ್ಥಾನಮಾನ ಕುರಿತು ಹೀಗೆ ಬರೆಯುತ್ತಾರೆ. "ಈ ಸ್ಥಾನವನ್ನು ಹೊಂದಿರುವ ಶುಭದಾಯಕ ಅಸ್ತಿತ್ವ ಸರ್ವಲೋಕಗಳ ಭಗವಂತನ ನೆರಳು, ಪ್ರವಾದಿಗಳು ಮತ್ತು ಸಂದೇಶವಾಹಕರ ನೆರೆಹೊರೆಯನು, ಧರ್ಮದ ಪ್ರಗತಿಯ ಬಂಡವಾಳ, ಪವಿತ್ರ ದೇವದೂತರ ಸ್ನೇಹಿತ, ದೇವವಿಧಿಯ ಕೇಂದ್ರ, ಎಲ್ಲಾ ಕಾರಣಗಳಿಗೆ ಹೆಮ್ಮೆಯ ಮತ್ತು ಪರಿಜ್ಞಾನದ ಅಧಿಕಾರಿ, ಅವನ ಹೃದಯವು ರಹ್ಮಾನ್ ದೇವನ ಆಸ್ಥಾನ ಮತ್ತು ಅವನ ಎದೆಯು ಕಾರುಣ್ಯಗಳ, ಘನತೆ ಗೌರವಗಳಿಗೆ ತಕ್ಕುದಾದ ಸ್ಥಳ, ಅವನ ಪ್ರೀತಿಯ ಅಸ್ತಿತ್ವವು ಕರುಣಾಮಯಿ ಅಲ್ಲಾಹನ ಪ್ರತಿಬಿಂಬ, ಅವನ ಪ್ರಕೋಪವು ಹರಿತ ಖಡ್ಗ ಮತ್ತು ಅವನು ಎಲ್ಲಾ ಕೊಡುಗೆಗಳಿಗೆ ಮೂಲ. ಅವನಿಂದ ದೂರವಿರುವುದೆಂದರೆ, ಅದೃಷ್ಟದಿಂದ ದೂರ ಸರಿದಂತೆ, ಅವನ ವಿರೋಧ ಅಲ್ಲಾಹನಿಗೆ ವಿರೋಧ ಮಾಡಿದಂತೆ, ತನ್ನ ಪರಿಪೂರ್ಣತೆಯನ್ನು ಆ ಪರಿಪೂರ್ಣತಾದಿಯೊಂದಿಗೆ ಹೋಲಿಸುವುದು ದೇವನಿಗೆ ಸಹಭಾಗಿತ್ವ ತೋರಿದಂತೆ, ಆತನ ಸೇವೆಯಲ್ಲಿ ತೊಡಗಿ ಆತನನ್ನು ಪಾಲಿಸುವುದೇ ಸಂದೇಶವಾಹಕನ ಉತ್ತರಾಧಿಕಾರಿ ಎಂದು ಪರಿಗಣಿಸಬೇಕು." (ಮನ್ಸಬ್ ಇಮಾಮತ್, ಪುಟ 121-122).

ಆದರಣೀಯ ಸಭಿಕರೇ ! ಖಲೀಫರು ಸಂದೇಶವಾಹಕರ ನಂತರದ ಒಂದು ಅತ್ಯುನ್ನತ ಮತ್ತು ವಿಶಿಷ್ಠ ಸ್ಥಾನವನ್ನು ಹೊಂದಿರುತ್ತಾರೆ. ಅದನ್ನು ಅಲ್ಲಾಹನು ಸ್ಥಾಪಿಸುತ್ತಾನೆ. ಮತ್ತು ಅವನೇ ಕಾಪಾಡುತ್ತಾನೆ. ಎಲ್ಲಾ ರೀತಿಯಿಂದಲೂ ಅವನಿಗೆ ನೆರವು ಹಾಗೂ ಪುಷ್ಠಿ ನೀಡುತ್ತಾನೆ. ಅವನಿಗೆ ದೈವಿಕ ಜ್ಞಾನ ನೀಡುತ್ತಾನೆ, ಜಾಣ್ಮೆಯನ್ನು ಕಲಿಸುತ್ತಾನೆ. ಪವಿತ್ರ ಖುರ್‌ಆನ್‌ನ ಅರ್ಥ, ಒಳಾರ್ಥ, ರಹಸ್ಯಜ್ಞಾನ, ಸಾಕ್ಷ್ಯಗಳಿಂದ ಪರಿಪೂರ್ಣತೆಯನ್ನು ದಯಪಾಲಿಸುತ್ತಾನೆ, ಅದರ ಪರಿಣಾಮವಾಗಿ ಅವನು ಪವಿತ್ರ ಖುರ್‌ಆನನ ವ್ಯಾಖ್ಯಾನ ಎಲ್ಲರಿಗಿಂತ ಉತ್ತಮವಾಗಿ ಬಲ್ಲವನಾಗುತ್ತಾನೆ ಮತ್ತು ವಿವರಿಸಿಕೊಡುತ್ತಾನೆ. ಅಲ್ಲಾಹನು ಸ್ವಯಂ ಅವನಿಗೆ ಎಲ್ಲಾ ಕಷ್ಟಕಾರ್ಯಗಳಲ್ಲಿ ಮಾರ್ಗದರ್ಶಕನಾಗುತ್ತಾನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು:

ಯಾವ ರೀತಿ ಪ್ರವಾದಿಯವರ ಅನುಸರಣೆ ಅನಿವಾರ್ಯವೋ ಅದೇ ರೀತಿ ಖಲೀಫರ ಅನುಸರಣೆಯು ಅನಿವಾರ್ಯವಿದೆ. ಹೌದು! ಈ ಎರಡು ವಿಧೆಯತೆಯಲ್ಲಿ ವ್ಯತ್ಯಾಸವಿದೆ. ಅವರು ದೈವಿಕ ಬಹಿರಂಗಪಡಿಸುವಿಕೆ ಮತ್ತು ಪರಿಶುದ್ಧತೆಯ ಕೇಂದ್ರವಾಗಿರುತ್ತಾರೆ. ಆದರೆ ಖಲೀಫರು ಬಹಿರಂಗಪಡಿಸುವಿಕೆ ಮತ್ತು ಪರಿಶುದ್ಧತೆಯ ಕೇಂದ್ರವಾಗಿರುವುದಿಲ್ಲವಾದರೂ ಅವರ ಅನುಸರಣೆ ಅಗತ್ಯವಾಗಿರುವುದು, ಅವರು ಪ್ರವರಾದಿಯರ ಕಾರ್ಯಗಳನ್ನು ಜಾರಿಗೆ ತರುವವರಾಗಿರುತ್ತಾರೆ. ಮತ್ತು ಅವರ ವ್ಯವಸ್ಥೆಗಳ ಕೇಂದ್ರವಾಗಿರುತ್ತಾರೆ. ಆದ್ದರಿಂದ ಜ್ಞಾನವುಳ್ಳ ಜನರು ಹೇಳುತ್ತಾರೆ. ಪ್ರವಾದಿಗಳಿಗೆ ಹಿರಿದಾದ ಗೌರವ ಲಭಿಸಿದರೆ ಖಲೀಫರಿಗೆ ಕಿರಿದಾದ ಗೌರವ ಲಭಿಸುತ್ತದೆ. (ಅಲ್‌ಫಝಲ್-17, ಫೆಬ್ರವರಿ 1935)

ಮತ್ತು ನುಡಿದರು. ದೇವನು ಯಾರನ್ನಾದರೂ ಖಲೀಫನನ್ನಾಗಿ ಮಾಡಿದಾಗ ಅವರಿಗೆ ತನ್ನ ಗುಣಲಕ್ಷಣಗಳನ್ನು ನೀಡುತ್ತಾನೆ. ಹಾಗಾದರೆ ಖಲೀಫನನ್ನು ದೇವನೇ ನಿಯುಕ್ತಗೊಳಿಸುತ್ತಾನೆ ಎಂಬುದಕ್ಕೆ ಏನರ್ಥ? ದೇವನು ಒಬ್ಬನನ್ನು ಖಲೀಫನನ್ನಾಗಿ ಮಾಡಿದರೆ, ಅವನೇ ಅವನಿಗೆ ಬೇಕಾದ ತನ್ನ ಗುಣಲಕ್ಷಣಗಳನ್ನು ನೀಡುತ್ತಾನೆ ಎಂದರ್ಥ. ಅವನು ತನ್ನ ಗುಣಲಕ್ಷಣಗಳನ್ನು ನೀಡದಿದ್ದರೆ, ಅವನನ್ನು ಖಲೀಫನನ್ನಾಗಿ ಮಾಡುವುದರ ಅರ್ಥವೇನಾದೀತು. (ಅಲ್‌ಫಝಲ್ 22, ನವೆಂಬರ್ 1950).

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರು ಹೇಳುತ್ತಾರೆ : "ಪ್ರತಿಯೊಂದು ಖಲೀಫರ ಕಾಲದಲ್ಲಿ, ಆ ಕಾಲದ ಅನುಗುಣವಾಗಿ ಅವರ ಉಪದೇಶಗಳಿರುತ್ತವೆ ಮತ್ತು ಆ ಉಪದೇಶವು ಇತರ ಉಪದೇಶಗಳಿಂದ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ

ಸಂಬಂಧದ ಕಾರಣದಿಂದ ಮತ್ತು ಅಲ್ಲಾಹನು ಅವರಿಗೆ ಒಪ್ಪಿಸಿದ ಕಾರಣದಿಂದಾಗಿ ಸ್ವಯಂ ಅವನೇ ಪ್ರಕಾಶವನ್ನು ನೀಡುತ್ತಾನೆ.
(ಖುತ್‌ಬಾತೆ ತಾಹಿರ್, ಸಂಪುಟ-11, ಪುಟ-894)

ಹಝ್ರತ್ ಖಲೀಫತುಲ್, ಮಸೀಹ್ ಖಾಮಿಸ್(ಅಬಿಅ) ಹೇಳುತ್ತಾರೆ: ನಮ್ಮ ವಿಶ್ವಾಸವೇನೆಂದರೆ, ಅಲ್ಲಾಹನು ಸ್ವಯಂ ಖಲೀಫನನ್ನು ಆಯ್ಕೆ ಮಾಡುತ್ತಾನೆ ಮತ್ತು ಅವನ ಆಯ್ಕೆಯಲ್ಲಿ ಯಾವುದೆ ದೋಷವಿರುವುದಿಲ್ಲ. ಅಲ್ಲಾಹನು ಯಾರಿಗೆ ಈ ಅಂಗಿಯನ್ನು ಧರಿಸುತ್ತಾನೆ, ಆ ಅಂಗಿಯನ್ನು ಅವನಿಂದ ಇಳಿಸಿಕೊಳ್ಳುವುದಾಗಲಿ ಅಥವ ಕಸಿದುಕೊಳ್ಳುವುದಾಗಲಿ ಯಾರಿಂದಲೂ ಸಾಧ್ಯವಿಲ್ಲ. ಅವನು ತನ್ನ ದುರ್ಬಲ ದಾಸರಲ್ಲಿ ಒಬ್ಬನನ್ನು ಆರಿಸಿಕೊಳ್ಳುತ್ತಾನೆ ಮತ್ತು ಎತ್ತಿ ಆತನನ್ನು ತನ್ನ ಮಡಿಲಿನಲ್ಲಿ ಕೂರಿಸಿಕೊಳ್ಳುತ್ತಾನೆ ಮತ್ತು ಪ್ರತಿ ಪ್ರಸ್ಥಿತಿಯಲ್ಲಿ ಅವನಿಗೆ ಬೆಂಬಲ ಹಾಗೂ ಸಹಾಯವನ್ನು ನೀಡುತ್ತಾನೆ. ಅಲ್ಲಾಹನು ಅವನ ಹೃದಯದಲ್ಲಿ ಅವನ ಸಮುದಾಯದ ನೋವನ್ನು ಎಷ್ಟರಮಟ್ಟಿಗೆ ಸೃಷ್ಟಿಸುತ್ತಾನೆಂದರೆ, ಅವನು ತನ್ನ ನೋವಿಗಿಂತ ಹೆಚ್ಚು ತನ್ನ ಸಮುದಾಯದ ನೋವನ್ನು ಹೊಂದಿರುತ್ತಾನೆ. ಆದ್ದರಿಂದ ಜಮಾಅತ್‌ನ ಪ್ರತಿಯೊಬ್ಬ ಸದಸ್ಯನು ತನ್ನ ನೋವನ್ನು ಅನುಭವಿಸುವ ಮತ್ತು ಅದಕ್ಕಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುವ ಸಹಾನುಭೂತಿ ಜೀವಿ ಒಂದಿದೆ ಎಂದು ಭಾವಿಸುತ್ತಾರೆ."
(ದಿನಪತ್ರಿಕೆ ಅಲ್‌ಫಝ್ಲ್ 30 ಮೇ 2003)

**ಖಿಲಫತ್ ವಿಧೇಯತೆ**

ಹಝ್ರತ್ ಪೈಗಂಬರ್(ಸ) ನುಡಿದರು: ನನ್ನಿಂದ ಸ್ಥಾಪಿಸಲ್ಪಟ್ಟ ಅಮೀರರನ್ನು ಯಾರು ಪಾಲಿಸುತ್ತಾನೋ ಅವನು ನನಗೆ ವಿಧೇಯನಾಗಿದ್ದಾನೆ, ಮತ್ತು ಯಾರು ನನಗೆ ವಿಧೇಯನಾಗಿದ್ದಾನೋ ಅವನು ಅಲ್ಲಾಹನಿಗೆ ವಿಧೇಯನಾಗಿದ್ದಾನೆ, ಅದೇ ರೀತಿ ಯಾರು ಅಮೀರನಿಗೆ ಅವಿಧೇಯತೆ ತೋರಿಸುತ್ತಾನೆ, ಅವನು ನನಗೆ ಅವಿಧೇಯತೆ ತೋರಿದ ಹಾಗೆ ಮತ್ತು ಯಾರು ನನಗೆ ಅವಿಧೇಯತೆ ತೋರಿಸುತ್ತಾನೆ. ಅವನು ಅಲ್ಲಾಹನಿಗೆ ಅವಿಧೇಯತೆ ತೋರಿದನು. (ಸಹೀ ಬುಖಾರಿ-7137).

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ, ಹಝ್ರತ್ ಪೈಗಂಬರ್(ಸ)ರವರು ನುಡಿದರು: ಯಾರು ತನ್ನ ಆಡಳಿತಗಾರನಿಂದ ಅಹಿತಕರವಾದದ್ದನ್ನು ನೋಡುತ್ತಾನೋ, ಅವನು ತಾಳ್ಮೆ ವಹಿಸಬೇಕು, ಏಕೆಂದರೆ ವ್ಯವಸ್ಥೆಯಿಂದ ಸಂಪೂರ್ಣವಾಗಿ ಬೇರ್ಪಟ್ಟವನ ಮರಣವು ಅಜ್ಞಾನದ ಮರಣವಾಗಿರುತ್ತದೆ. (ಸಹೀಹ್ ಮುಸ್ಲಿಂ ಕಿತಾಬುಲ್ ಅಮಾರತ್)

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ವಿಧೇಯತೆ ಎಂಬುದು ಸರಳ ಕಾರ್ಯವೇ! ವ್ಯಕ್ತಿಯೊಬ್ಬನು ಪೂರ್ಣ ರೀತಿಯ ವಿಧೇಯತೆ ತೋರದಿದ್ದರೆ ಅವನು ಸಂಘಟನೆಗೆ ಕೆಟ್ಟ ಹೆಸರು ತರುವನು. ಆಜ್ಞೆ ಒಂದೇ ಆಗಿರುವುದಿಲ್ಲ. ಬದಲು ಹಲವು ಆಜ್ಞೆಗಳಿರುತ್ತವೆ. ಯಾವ ರೀತಿ ಸ್ವರ್ಗದ ಹಲವು ಬಾಗಿಲುಗಳಿರುತ್ತವೆ, ನರಕದ ಒಂದು ಬಾಗಿಲನ್ನು ಮುಚ್ಚಿ ಇನ್ನೊಂದು ತೆರೆದುಕೊಂಡಂತೆ ಆಗಬಾರದು.

(ಮಲ್ಫೂಝಾತ್, ಸಂಪುಟ-2, ಪುಟ-411) (ಖುತ್‌ಬ ಜುಮುಅ 27-08-2004, ಅಲ್‌ಫಝ್ಲ್ ಇಂಟರ್‌ನ್ಯಾಷನಲ್ 10-09-2004, ಪುಟ-6)

ಆರಂಭಿಕ ಶತಮಾನಗಳ ಮುಸ್ಲಿಮರಲ್ಲಿ ವಿಧೇಯತೆಯ ಉದಾರಹಣೆ ನಾವು ಹೀಗೆ ಕಾಣುತ್ತೇವೆ. ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಮಸೀದಿಯಲ್ಲಿ ನಿಂತಿದ್ದ ಸಹಾಬಿಯರಿಗೆ ಕುಳಿತುಕೊಳ್ಳಲು ಹೇಳಿದರು, ಹಝ್ರತ್ ಅಬ್ದುಲ್ಲ ಬಿನ್ ರವಾಹ ಬೀದಿಯಿಂದ ಬರುತ್ತಿದ್ದು ಅಲ್ಲೆ ಕುಳಿತರು. ಪ್ರವಾದಿಯವರ ಆದೇಶವನ್ನು ಪಾಲಿಸಲು ಒಂದು ಕ್ಷಣವಾದರೂ ಸಹ ವಿಳಂಬವಾಗಬಾರದು ಎಂದು ಯೋಚಿಸಿದರು.

ಅದೇ ರೀತಿ ಒಂದು ಯುದ್ಧದ ಸಮಯದಲ್ಲಿ ಹಝ್ರತ್ ಉಮರ್(ರ) ಯುದ್ಧದ ನೇತೃತ್ವ ಹಝ್ರತ್ ಖಾಲಿದ್ ಬಿನ್ ವಲೀದ್(ರ)ಯಿಂದ ಹಝ್ರತ್ ಅಬು ಉಬೈದಾ(ರ)ರವರಿಗೆ ಹಸ್ತಾಂತರಿಸಿದರು. ಹಝ್ರತ್ ಅಬು ಉಬೈದಾ(ರ), ಖಾಲಿದ್ ಬಿನ್ ವಲೀದ್(ರ) ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಯೋಚಿಸಿ, ತನ್ನ ಕಾರ್ಯಭಾರ ವಹಿಸಿಕೊಳ್ಳಲಿಲ್ಲ. ಆಗ ಈ ಸಂಗತಿ ಹಝ್ರತ್ ಖಾಲಿದ್ ಬಿನ್ ವಲೀದ್(ರ) ತಿಳಿಸಿದಾಗ ತಕ್ಷಣ ಹಝ್ರತ್ ಅಬು ಉಬೈದಾ ಅವರಿಗೆ ಹೇಳಿದರು. ಇದು ಖಲೀಫರ ಆಜ್ಞೆ ಆಗಿದೆ, ತಕ್ಷಣ ಪಾಲಿಸಿರಿ, ನಾನು ನಿಮ್ಮ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುವೆನು.

ಆದರಣೀಯ ಸಭಿಕರೇ! ಈ ಅಂತಿಮ ಯುಗದಲ್ಲೂ ಹಝ್ರತ್ ಪೈಗಂಬರ್(ಸ) ರವರ ಸತ್ಯಪ್ರೇಮಿಯಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್(ಅ) ಮತ್ತು ಅವರ ಖಲೀಫರಿಗೆ ವಿಧೇಯತೆಯ ಉದಾಹರಣೆಗಳಿವೆ. ಅದರಿಂದ ಪ್ರಾರಂಭಿಕ ಕಾಲದ ನೆನಪುಗಳು ಮರುಕಳಿಸಿದಂತಾಗುತ್ತದೆ. ಸದ್ದು ಕೇಳಿ ಕುಳಿತ ಪ್ರಸಂಗ ಇಲ್ಲೂ ನಡೆದಿದೆ. ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಮಸೀದಿಯಲ್ಲಿ ನಿಂತಿದ್ದ ತಮ್ಮ ಸ್ನೇಹಿತರಿಗೆ "ಕುಳಿತುಕೊಳ್ಳಲು" ಹೇಳಿದರು. ಆ ಸಮಯದಲ್ಲಿ ಮಸೀದಿಯ ಪಕ್ಕದ ಬೀದಿಯಿಂದ ಬರುತ್ತಿದ್ದ ಹಝ್ರತ್ ಮಿಯಾ ಕರೀಮ್ ಬಕ್ಷ್ ಸಾಹಿಬ್ ಸದ್ದು ಕೇಳಿದ ತಕ್ಷಣ ಅಲ್ಲಿಯೇ ಕುಳಿತರು. ಯಾರೋ ಕಾರಣ ಕೇಳಿದಾಗ ಅವರು ಹೇಳಿದರು. ಮಸೀಹರ ಆದೇಶ ನನ್ನ ಕಿವಿಗೆ ಬಿದ್ದ ನಂತರ ಅದನ್ನು ಅದೇ ಸಮಯಕ್ಕೆ ಪಾಲಿಸುವುದು ನನ್ನ ಕರ್ತವ್ಯವಾಗಿದೆ.

ಮತ್ತು ಇಂದು ಎರಡನೆಯ ದಿವ್ಯಶಕ್ತಿಯ ಪ್ರತಿನಿಧಿ ಸಯ್ಯದನಾ ಹಝ್ರತ್ ಅಮೀರುಲ್ ಮುಮಿನೀನ್(ಅಬಿಅ) ಖಿಲಾಫತ್ ಪೀಠವನ್ನು ಸ್ವೀಕರಿಸುತ್ತಿರುವಾಗ ವಿಶ್ವವು ಮತ್ತೊಮ್ಮೆ ಒಂದೇ ಧ್ವನಿಯಲ್ಲಿ ಕುಳಿತಿರುವ ದೃಶ್ಯಕ್ಕೆ ಸಾಕ್ಷಿಯಾಯಿತು. ಸಾವಿರಾರು ಖಿಲಾಫತ್ ಭಕ್ತರು ಮಸ್ಜಿದ್ ಫಝ್ಲ್ ಲಂಡನ್ ಹೊರಗೆ ತಮ್ಮ ಖಲೀಫರ ಒಂದು ನೋಟ ಕಾಣಲು ಮತ್ತು ಅವರ ಕೈಯಲ್ಲಿ ಬೈಅತ್ ಮಾಡಲು ನೆರೆದಿದ್ದರು. "ಕುಳಿತುಕೊಳ್ಳಿ" ಎಂಬ ಅವರ ಒಂದೇ ಧ್ವನಿಗೆ ಓಗೊಟ್ಟು ಕ್ಷಣಾರ್ಧದಲ್ಲಿ ಎಲ್ಲರೂ ಅದೇ ಸಮಯಕ್ಕೆ ನಿಂತ ಜಾಗದಲ್ಲೇ ಕುಳಿತುಕೊಂಡರು. MTA ಮೂಲಕ ಈ ಚೈತನ್ಯ ತುಂಬಿದ ದೃಶ್ಯಕ್ಕೆ ಇಡೀ ವಿಶ್ವವೇ ಸಾಕ್ಷಿಯಾಯಿತು.

ಹಝ್ರತ್ ಅಬು ಅಬ್ದುಲ್ಲಾ ಸಾಹಿಬ್ ಖವಾಜಾಜ್ವದವರಾಗಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಸಹಾಬಿಯಾಗಿದ್ದರು. ಅವರು ಒಂದು ದಿನ ಹಝ್ರತ್ ಖಲೀಫತುಲ್ ಮಸೀಹ್ ಅವರ ಸಹವಾಸದಲ್ಲಿ ಕುಳಿತಿದ್ದರು, ತಮಗೆ ಏನಾದರೂ ಉಪದೇಶ ಮಾಡಿ ಎಂದು ಕೇಳಿದರು. ಆಗ ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರು(ರ) ಹೇಳಿದರು. ಮೌಲ್ವಿ ಸಾಹಿಬ್: ನಿಮಗೆ ವಹಿಸಿಕೊಟ್ಟ ಕೆಲಸಗಳಲ್ಲಿ ಮಾಡದಿರುವುದು ಯಾವುದೇ ಒಂದು ಕೆಲಸವು ಉಳಿಯಲಿಲ್ಲ ಎಂದು ಭಾವಿಸುತ್ತೇನೆ. ಈಗ ಉಳಿದಿರುವುದು ಖುರ್‌ಆನ್ ಕಂಠಪಾಠ. ಅಂದಹಾಗೆ ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರ(ರ) ಈ ಮಾತನ್ನು ಕೇಳಿ ಸುಮಾರು ತನ್ನ 65 ವರ್ಷಗಳ ವಯಸ್ಸಿನಲ್ಲಿ ಅವರು ಖುರ್‌ಆನ್ ಕಂಠಪಾಠ ಮಾಡಲು ಪ್ರಾರಂಭಿಸಿದರು ಮತ್ತು ಅಷ್ಟು ವಯಸ್ಸಾದರೂ ಖುರಆನ್ "ಹಾಫಿಝ್" ಆದರು.
(ಆಧಾರ ದಿನಪತ್ರಿಕೆ ಅಲ್ ಫಝ್ಲ್ 27 ಆಗಸ್ಟ್ 2004)

ಸಭಿಕರೇ! ಖಿಲಾಫತ್ ವಿಧೇಯತೆ ಮತ್ತು ಸಂಘಟನೆಯ ವಿಧೇಯತೆ ಒಂದೇ ನಾಣ್ಯದ ಎರಡು ಬದಿಗಳಿದ್ದಂತೆ. ಅದು ಪ್ರತ್ಯೇಕ ಮಾಡಲು ಸಾದ್ಯವಿಲ್ಲ. ಈ ಸಂಬಂಧ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಸಂಘಟನೆಯ ವಿಧೇಯತೆಯ ಬಗ್ಗೆ ಹೇಳುತ್ತಾರೆ: ನಿಮ್ಮ ಧ್ಯೇಯೋದ್ದೇಶ, ನಿಮ್ಮ ಜೀವನದ ಗುರಿ ಕೇವಲ ಅಲ್ಲಾಹನ ಸಂತೋಷವಾಗಿರಬೇಕು ಎಂಬುದನ್ನು ಯಾವಾಗಲೂ ನೆನಪಿಡಿ. ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಮತ್ತು ಈ ಸಂಘಟನೆಯ ನೀತಿ ನಿಯಮಗಳೇನಿವೆ ಅದನ್ನು ತಪ್ಪದೆ ಪಾಲಿಸಬೇಕಾಗಿದೆ. ಇದರಲ್ಲಿ ಕಿಂಚಿತ್ತೂ ಲೋಪ ಬರಬಾರದು. (ಖುತ್‌ಬ ಜುಮುಅ 27 ಆಗಸ್ಟ್ 2004)

ಸಭಿಕರೇ! ಖಿಲಾಫತ್ ಅಡಿಯಲ್ಲಿ ನಡೆಯುವ ವ್ಯವಸ್ಥೆಯ ವಿಧೇಯತೆಯೇ ಖಲೀಫನ ವಿಧೇಯತೆ ಆಗಿರುತ್ತದೆ, ಇದನ್ನು ಸ್ಪಷ್ಟಪಡಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ನಾಲ್ಕನೆಯರು(ರಹ) ಹೇಳುತ್ತಾರೆ:

ದೈವಿಕ ನಿಯಮಗಳು ಹೇಗೆ ನಿಮ್ಮ ಸ್ಥಿರತೆಗೆ ಅನಿವಾರ್ಯ ಮತ್ತು ಅದಕ್ಕೆ ಹಲವು ವ್ಯಾಯಾಮಗಳಿವೆ. ಅದೇ ರೀತಿ ಜಮಾಅತ್‌ನ ವ್ಯವಸ್ಥೆಯು ನಿಮ್ಮ ವೈಯಕ್ತಿಕ ಸ್ಥಿರತೆಗೆ ಅನಿವಾರ್ಯವಾಗಿದೆ. ಜಮಾಅತ್ ವ್ಯವಸ್ಥೆ ಇಲ್ಲದಿದ್ದರೆ ನಿಮ್ಮ ಆಧ್ಯಾತ್ಮಿಕ ಜೀವನಕ್ಕೆ ಯಾವ ಆಧಾರವೂ ಇಲ್ಲ. ಉಳಿದ ಜನರ ಸ್ಥಿತಿ ನೋಡಿ, ಹೇಗೆ ಭಿನ್ನಭಿನ್ನವಾಗಿವೆ. ಸಂಘಟನೆಯಿಂದ ಬೇರ್ಪಟ್ಟು ಪ್ರತಿಯೊಬ್ಬವ್ಯಕ್ತಿ ಸ್ವತಂತ್ರನಾಗಿದ್ದಾನೆ ಮತ್ತು ಅವನು ತನ್ನನ್ನು ಸ್ವತಂತ್ರನು ಮತ್ತು ಅಹ್ಮದಿಗೆ ಗುಲಾಮನು ಎಂದು ಭಾವಿಸುತ್ತಾನೆ. ಎಲ್ಲವು ಕಷ್ಟ ಕಷ್ಟ. ಮಾತಿಗೂ ನಿಯಮ, ಎದ್ದರೆ ಕೇಳಿ ಏಳಬೇಕು, ಕೂತರೆ ಕೇಳಿ ಕೂರಬೇಕು, ಎಂತಹ ಕಷ್ಟದ ಕೆಲಸ.

ಅಹ್ಮದಿಯಾ ಜಮಾಅತ್ ದೈವಿಕ ಕಾನೂನಿನಂತೆ ಎಲ್ಲಾ ಕಡೆಯಿಂದಲೂ ನಿರ್ಬಂಧಿಸಲ್ಪಟ್ಟಿದೆ. ಈಗ ಯಾವನಾದರೆ ಲೋಕದಲ್ಲಿ ಇದೊಂದು ವಿಚಿತ್ರ ಆಪತ್ತು ಎಂದು ಹೇಳುತ್ತದೆಯೇ, ಬೆಂಕಿಯಲ್ಲಿ ಕೈ ಹಾಕಬೇಡಿ, ಹೆಚ್ಚು ತಂಪು ಗಾಳಿಯಲ್ಲಿ ಇರಬೇಡಿ, ಶೀತಕಾಲದಲ್ಲಿ ಬೆಚ್ಚಗಿನ ಉಡುಗೆಯನ್ನು ಧರಿಸಿರಿ, ಸೆಕೆಗಾಲದಲ್ಲಿ ತಣ್ಣನೆಯ ಉಡುಗೆಯನ್ನು ಧರಿಸಿರಿ, ಹಸಿವು ಆದರೆ ಊಟ ಮಾಡಿ, ಹಸಿವು ಆಗದಿದ್ದರೆ ಯಾವುದಾದರೂ ಕೆಲಸ ಮಾಡಿ, ನಿಲ್ಲುವುದರಲ್ಲಿ, ಕುಳಿತುಕೊಳ್ಳುವುದರಲ್ಲ, ನಿದ್ರಿಸುವುದರಲ್ಲಿ ಸಮತೋಲನವಿರಲಿ, ಊಟ ಮಾಡಿ. ಆದರೆ ಹಸಿವು ಮುಗಿಯುವ ಮೊದಲೇ

ಸಾಕು ಮಾಡಿ, ಅಂದರೆ ದೈವಿಕ ನಿಯಮಗಳೇನಿವೆ. ಅದನ್ನು ಪಾಲಿಸಬೇಕು.

ಅಂದರೆ ಇಡೀ ವಿಶ್ವವು ಪ್ರತಿಯೊಬ್ಬ ಮನುಷ್ಯನಿಗೆ ಯಾವುದಾದರೊಂದು ನಿರ್ಬಂಧ ವಿಧಿಸಿದೆ ಎಲ್ಲಿಯೂ ಆಗಲಿ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷೆ ಅವಶ್ಯವಾಗಿ ಸಿಗುತ್ತದೆ ಆದ್ದರಿಂದ ಹಝ್ರತ್ ಪೈಗಂಬರ್(ಸ) ಹೇಳುತ್ತಾರೆ: ಸತ್ಯವಿಶ್ವಾಸಿಗೆ ಈ ಲೋಕವು ಒಂದು ಸೆರೆವಾಸವಾಗಿದೆ ಮತ್ತು ಅವಿಶ್ವಾಸಿಗೆ ಸ್ವರ್ಗವಾಗಿದೆ, ಈಗ ನೋಡಿ ಅಲ್ಲಾಹನ ಪ್ರವಾದಿಗಳು ಸೆರೆವಾಸದಲ್ಲಿ ಕಳೆಯಬೇಕಾಗಿದೆ ಮತ್ತು ಅವಿಶ್ವಾಸಿಗೆ ಸ್ವರ್ಗ ಎಂದಿದ್ದಾರೆ. ಅಂದಹಾಗೆ ಸತ್ಯವಿಶ್ವಾಸಿಯು ಹೌದು ಮತ್ತು ಸ್ವತಂತ್ರರು ಹೌದು ಎಂದರೆ ಯಾವ ವರ್ಗಕ್ಕೆ ಸೇರುವರು. ಅಂದರೆ ಸತ್ಯವಿಶ್ವಾಸಿಗೆ ಸಂಘಟನೆಯ ವ್ಯವಸ್ಥೆ, ಸೆರೆವಾಸವು ಅನಿವಾರ್ಯವಾಗಿದೆ.

ಆದ್ದರಿಂದ ನೀವು ನ್ಯಾಯಯುತವಾಗಿ ಜಮಾಅತ್‌ನ ಆಗುಹೋಗುಗಳನ್ನು ನಿಯಮಿತವಾಗಿ ಪಾಲಿಸಿದರೆ, ನೀವು ನೆಮ್ಮದಿಯ ಉಸಿರು ಬಿಡುವಿರಿ. ನಿಮಗೆ ಸುಖಶಾಂತಿ ದೊರೆಯುವುದು, ಆದ್ದರಿಂದ ಅದಕ್ಕನುಗುಣವಾಗಿ ನೀವು ಜಮಾಅತ್‌ನ ವ್ಯವಸ್ಥೆಗೆ ಬದ್ಧರಾಗಿರಿ, ಅದರ ಮುಂದೆ ತಲೆಬಾಗಿರಿ, ಏಕೆಂದರೆ ಅದರ ಅರ್ಥ ಅಲ್ಲಾಹನ ಮುಂದೆ ತಲೆಬಾಗುವುದಾಗಿದೆ. ಕೆಲವರು ಹೇಳುತ್ತರೆ. ವ್ಯವಸ್ಥೆ ಏಕೆ ಬೇಕು ಮಾತೆತ್ತಿದರೆ ವ್ಯವಸ್ಥೆ, ವ್ಯವಸ್ಥೆ.

ವ್ಯವಸ್ಥೆ ಎಂಬುದು ಅಲ್ಲಾಹನು ಸ್ಥಾಪಿಸಿದ್ದಾಗಿದೆ, ಪವಿತ್ರ ಪ್ರವಾದಿ ಹಝ್ರತ್ ಮುಹಮ್ಮದ್(ಸ) ರವರು ಸ್ಥಾಪಿಸಿದ್ದಾಗಿದೆ. ಇಲ್ಲವಾದರೆ ಪ್ರವಾದಿ(ಸ) ರ ಮೇಲೆ ಬೈಅತ್ ಮಾಡಿದ ಮೇಲೆ ವಿಶ್ವಾಸಿಗಳು ಒಬ್ಬರ ನಂತರ ಒಬ್ಬರು ಖಲೀಫರ ಕೈಗಳಿಗೆ ಬೈಅತ್ ಮಾಡುವ ಅವಶ್ಯಕತೆ ಏನಿತ್ತು? ವಿಧೇಯತೆಯ ಅಂಗೀಕಾರ ಮತ್ತು ನಂತರ ಅದನ್ನು ಒತ್ತಾಯಿಸುವುದು ಮತ್ತು ನಾವು ಖಂಡಿತವಾಗಿಯೂ ಪಾಲಿಸುತ್ತೇವೆ ಎಂದು ಪದೇ ಪದೇ ಹೇಳುವ ಈ ನಿಷ್ಠೆಯ ಪ್ರತಿಜ್ಞೆಯಲ್ಲಿ ಧರ್ಮವು ಕೇವಲ ನಂಬಿಕೆಗಳ ಹೆಣ್ಣು ಅಥವಾ ಫರಿಯಾದ ಸಾಮಾನ್ಯ ಕರ್ತವ್ಯಗಳನ್ನು ಪೂರೈಸುವ ಹೆಸರಲ್ಲ ಎಂದು ಸ್ಪಷ್ಟವಿದೆ. ಆದ್ದರಿಂದ ಯಾವ ವ್ಯಕ್ತಿ ನಿಯಮಿತ ವ್ಯವಸ್ತೆಯ ಭಾಗವಾಗಿರುವುದಿಲ್ಲ, ಅದರ ಮುಂದೆ ತನ್ನ ತಲೆಯನ್ನು ಬಾಗಿಸುವುದಿಲ್ಲ, ಅವನು ಪ್ರಾಯೋಗಿಕವಾಗಿ ಧರ್ಮದಿಂದ ಬೇರ್ಪಟ್ಟ ಹಾಗೆ. (ಖುತ್‌ಬ ಜುಮುಅ, 31 ಮೇ 1996).

**ಖಿಲಾಫತ್ ಜೊತೆಗಿನ ಸಂಬಂಧದ ಪ್ರಾಮುಖ್ಯತೆ ಮತ್ತು ಅದರ ಅನುಗ್ರಹಗಳು:**

ನಾವು ಯಾವಾಗಲೂ ಪವಿತ್ರ ಖುರ್‌ಆನ್‌ನ ಆದೇಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಆ ಆದೇಶವು ಹೀಗಿದೆ. **ವಅತಸಿಮೂ ಬಿಹಬ್ಲಿಲ್ಲಾಹಿ ಜಮೀಅ ವಲಾ ತಫರ್ರಖೂ ವಝ್‌ಕುರೂ ನಿಮತಲ್ಲಾಹಿ ಅಲೈಕುಮ್**– ಅಲ್ಲಾಹನ ಹಗ್ಗವನ್ನು ನೀವು ಬಿಗಿಯಾಗಿ ಹಿಡಿದುಕೊಳ್ಳಿರಿ, ಜಮಾಅತ್‌ನ ವ್ಯವಸ್ಥೆಯೊಂದಿಗೆ ಯಾವಾಗಲೂ ಸಂಬಂಧಿಸಿದವರಾಗಿರಿ, ಅಂದರೆ ನಂಬಿಕೆಯ ಆಧಾರದಲ್ಲಾಗಲಿ, ಪ್ರಾಯೋಗಿಕವಾಗಿರಲಿ ನಾವು ಖಲೀಫರ, ಜಮಾಅತ್ ವ್ಯವಸ್ಥೆಯ ಮತ್ತು ಇಮಾಮರ ವಿಧೇಯತೆಯ ಮಟ್ಟವನ್ನು ಕಾಪಾಡಿಕೊಳ್ಳಬೇಕಾಗಿದೆ. ಎಲ್ಲಾ ರೀತಿಯ ಒಡಕುಗಳಿಂದ ಸುರಕ್ಷಿತವಾಗಿದ್ದು, ಏಕತೆಯನ್ನು ಉಳಿಸಿಕೊಳ್ಳಬೇಕಾಗಿದೆ. ಅದು "ಇತಿಸಾಮಿ ಬಿಹಬ್ಲಿಲ್ಲಾಹ್" ಪರಿಣಾಮವಾಗಿ ನಮಗೆ ಲಭ್ಯವಾಗುತ್ತದೆ.

ಖಿಲಾಫತ್ ಅಲ್ಲಾಹನ ಒಂದು ಬಹು ದೊಡ್ಡ ವರದಾನವಾಗಿದೆ, ಅದು ರಾಷ್ಟ್ರವನ್ನು ಒಂದುಗೂಡಿಸುತ್ತದೆ. ಮತ್ತು ವಿಭಜನೆಯಿಂದ ರಕ್ಷಿಸುತ್ತದೆ. ಮುತ್ತುಗಳು ಅಲ್ಲಲ್ಲಿ ಬಿದ್ದರೆ, ಅವು ಸುರಕ್ಷಿತವೂ ಅಲ್ಲ, ಸುಂದರವೂ ಅಲ್ಲ, ಒಂದು ದಾರದಲ್ಲಿ ಪೋಣಿಸಲ್ಪಟ್ಟ ಮುತ್ತುಗಳೇ ಸುಂದರವೂ ಮತ್ತು ಸುರಕ್ಷಿತವೂ ಆಗಿರುತ್ತವೆ. ಖಿಲಾಫತ್‌ಗೆ ಸಂಪೂರ್ಣ ಪ್ರಾಮಾಣಿಕತೆ ಮತ್ತು ಪ್ರೀತಿ ಹಾಗೂ ನಿಷ್ಠೆ ಭಕ್ತಿಯನ್ನು ಹೊಂದಿರುವುದರಲ್ಲೇ ಎಲ್ಲಾ ರೀತಿಯ ಅನುಗ್ರಹಗಳು ಒಳಗೊಂಡಿರುತ್ತವೆ.

ನಾವು ಖಲೀಫರ ಧ್ವನಿಗೆ ಸ್ಪಂಧಿಸುವವರಾಗಬೇಕು. ಮತ್ತು ಅವರಿಗೆ ವಿಧೇಯತೆಯ ಮನೋಭಾವಗಳಿಂದ ಸಮರ್ಪಕವಾಗಿ ಪವಿತ್ರ ಪ್ರವಾದಿ (ಸ) ಮತ್ತು ಅವರ ಸಹಚರರು ಸ್ಥಾಪಿಸಿದಂತಹ ಉದಾಹರಣೆಗಳನ್ನು ಸ್ಥಾಪಿಸುವ ಪ್ರಯತ್ನದಲ್ಲಿರಬೇಕು, ಆಗ ಮಾತ್ರ ನಾವು ನಿಜವಾದ ಅರ್ಥದಲ್ಲಿ ಪ್ರಾರಂಭಿಕ ಕಾಲದವರಲ್ಲಿ ಸೇರಿಸಲ್ಪಡುವರು.

ಇಂದು ಜಗತ್ತಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಎಲ್ಲೆಲ್ಲೂ ಆತಂಕ, ಅಶಾಂತಿ, ಚಡಪಡಿಕೆಗಳೇ ಕಾಣುತ್ತವೆ, ಇದಕ್ಕೆ ಕಾರಣ ಜನರು ವಾಗ್ದತ್ತ ಮಸೀಹರಿಗೆ ಧಿಕ್ಕರಿಸಿ ಖಿಲಾಫತ್‌ನಂತಹ ಮಹಾನ್ ಅನುಗ್ರಹದಿಂದ ವಂಚಿತರಾಗಿದ್ದಾರೆ. ಖಿಲಾಫತ್ ಎಂಬ ಅಲ್ಲಾಹನ ಪಾಶವನ್ನು ಬಿಗಿಹಿಡಿಯುವ ಮೂಲಕ ಅಹ್ಮದಿಯಾ ಜಮಾಅತ್ ಅಲ್ಲಾಹನ ಅಸಂಖ್ಯಾತ ಅನುಗ್ರಹಗಳನ್ನು ಕಾಣುವಂತಾಗಿದೆ. ನಾವು ಇಂದು ಓರ್ವ ಅನುಗ್ರಹಿತ, ಪ್ರೀತಿಸುವ, ನಮ್ಮ ನೋಟಿನ ಬಗ್ಗೆ ಕಾಳಜಿ ವಹಿಸುವ, ನಮ್ಮ ಬಗ್ಗೆ ಚಿಂತಿಸುವ, ನಾವು ದು:ಖಿತರಾದರೆ ಅವರೂ ದು:ಖಿತರಾಗುತ್ತಾರೆ. ನಾವು ಸಂತೋಷವಾಗಿದ್ದರೆ ಅವರು ಸಂತೋಷವನ್ನು ಅನುಭವಿಸುತ್ತಾರೆ. ಅದಕ್ಕಿಂತ ಮಿಗಿಲಾದ ವಿಷಯವೇನೆಂದರೆ ಖಲೀಫರು ಅಲ್ಲಾಹನ ಸಾನಿಧ್ಯದಲ್ಲಿರುವ ಕಾರಣ ನಮ್ಮ ಮತ್ತು ಅಲ್ಲಾಹನ ನಡುವೆ ಕೊಂಡಿಯಾಗಿರುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ) ರವರ ಹೃದಯದ ಸ್ಥಿತಿಯನ್ನು ಅತ್ಯಂತ ಮಧುರವಾಗಿ ವ್ಯಕ್ತಪಡಿಸುವ ಒಂದು ಮಾತಿದೆ. ನಾನು ನಿಮ್ಮ ಪೈಕಿ, ನಿಮ್ಮಂತೆಯೆ ಒಬ್ಬ ಮನುಷ್ಯನಾಗಿದ್ದೇನೆ ಮತ್ತು ನಿಮ್ಮ ಪೈಕಿ ಎಲ್ಲರೊಡನೆ ಅಲ್ಲಾಹನು ನನ್ನ ಹೃದಯದಲ್ಲಿ ಎಂತಹ ಪ್ರೀತಿಯನ್ನು ಸೃಷ್ಟಿಸಿದ್ದಾನೆ ಎಂದರೆ, ನೀವು ಊಹಿಸಲು ಸಾಧ್ಯವಿಲ್ಲ, ಓ ಅಲ್ಲಾಹನೇ! ನನಗೆ ಪತ್ರ ಬರೆಯುಬೇಕೆಂದುಕೊಂಡವರು ಸೋಮಾರಿತನದಿಂದಾಗಿ ಬರೆಯಲಾಗಿಲ್ಲವಾದರೂ ಅವರ ಇಷ್ಟಾರ್ಥಗಳನ್ನು ಪೂರೈಸು, ಅವರ ಕಷ್ಟ ಆಪತ್ತುಗಳನ್ನು ದೂರ ಮಾಡು."
(ದಿನಪತ್ರಿಕೆ ಅಲ್‌ಫಝುಲ್ 21 ಡಿಸೆಂಬರ್ 1966).,

ಇಂದಿಗೂ ಅಲ್ಲಾಹನ ಅನುಗ್ರಹದಿಂದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರ ರೂಪದಲ್ಲಿ ಖಿಲಾಫತ್ ನಮ್ಮಲ್ಲಿ ಉಪಸ್ಥಿತವಿದೆ. ಅವರ ಪ್ರೀತಿ ಸಹಾನುಭೂತಿ, ಪ್ರಾರ್ಥನೆಗಳು ನಮಗೆ ಒಂದು ನಿಧಿಯಾಗಿದ್ದು ಅದರ ಮೌಲ್ಯ ಮತ್ತು ಪ್ರಾಮುಖ್ಯತೆಯನ್ನು ನಿರ್ಬಂಧಿಸಲು ಸಾಧ್ಯವಿಲ್ಲ. ನಮ್ಮ ಶಿರವು ಜೀವನಪರ್ಯಂತ ಅಲ್ಲಾಹನ ಆಸ್ಥಾನದಲ್ಲಿ ಕೃತಜ್ಞತೆ ಸಲ್ಲಿಸಿದರೂ ಸಾಕಾಗಲಿಕ್ಕಿಲ್ಲ, ಆದರೆ ಈ ಅನುಗ್ರಹಕ್ಕಾಗಿ ನಾವು ಅವಶ್ಯವಾಗಿ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಅದಕ್ಕೆ ಮಾಧ್ಯಮವೆಂದರೆ ನಾವು ತಮ್ಮ ಖಲೀಫರಿಗೆ ನಿಯಮಿತವಾಗಿ ತಮ್ಮ ಪ್ರಾರ್ಥನೆಗಳಲ್ಲಿ ಅವರಿಗಾಗಿ ಪ್ರಾರ್ಥಿಸುತ್ತಿರಬೇಕು. ನಾವು ಪ್ರಾರ್ಥನೆಯ ಮೂಲಕ ಅವರ ಸಹಾಯಕರಾಗೋಣ, ಖಿಲಾಫತ್‌ನೊಂದಿಗೆ ಎಂದೆಂದಿಗೂ ಸಂಬಂಧ ಹೊಂದುವವರಾಗೋಣ, ಅಲ್ಲಾಹನು ಈ ಭಾಗ್ಯ ನಮಗೆ ದಯಪಾಲಿಸಲಿ. ಆಮೀನ್.

**ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರು(ರ) ಹೇಳಿದರು:**

ನೀವು, ವಾಹನಗಳಿಗೆ ಇಂಜಿನ್ ಹೊಂದಿರುವಂತೆ ತಮ್ಮ ಇಮಾಮರೊಂದಿಗೆ ಸಂಬಂಧ ಹೊಂದಿರಬೇಕಾಗಿದೆ. ಮತ್ತೆ ನೋಡಿರಿ ನೀವು ಕತ್ತಲೆಯಿಂದ ಹೊರಬರುತ್ತೀರಿ, ಅಥವಾ ಇಲ್ಲ, ಕ್ಷಮೆಯನ್ನು ಯಾಚಿಸುತ್ತೀರಿ, ಯಾವಾಗಲೂ ಪ್ರಾರ್ಥಿಸುತ್ತಿರಿ. ಹದಿಮೂರು ವರ್ಷಗಳ ನಂತರ ನಮಗೆ ಈ ಯುಗವು ದೊರೆತಿದೆ, ಮತ್ತು ಈ ಯುಗವು ಅಂತ್ಯ ತೀರ್ಮಾನದ ದಿನದವರೆಗೆ ಬರಲಿಕ್ಕಿಲ್ಲ. ಆದ್ದರಿಂದ ಕೃತಜ್ಞರಾಗಿರಿ, ಕೃತಜ್ಞತೆಯು ಹೆಚ್ಚಿನ ಅನುಗ್ರಹಗಳಿಗೆ ಕಾರಣವಾಗುತ್ತದೆ.
(ಖುತ್‌ಬಾತೆ ನೂರು, ಪುಟ-131).

ಅಲ್ಲಾಹನು ಜಮಾಅತ್‌ಗೆ ಪ್ರಗತಿ ನೀಡುತ್ತಾನೆ, ನೀಡುತ್ತಿದ್ದಾನೆ, ಖುದ್ದು ಜನರಿಗೆ ಮಾರ್ಗದರ್ಶನ ನೀಡುತ್ತಾನೆ, ಜನರಿಗೆ ಖಿಲಾಫತ್‌ನೊಂದಿಗೆ ಜೋಡಿಸಬೇಕಾಗಿದೆ. ಜೋಡಿಸುತ್ತಿದ್ದಾನೆ, ಅದರ ಕೆಲವು ಉದಾಹರಣೆಗಳು ಪ್ರಸ್ತುತಪಡಿಸುತ್ತಿದ್ದೇನೆ. (ಖುತ್‌ಬ ಜುಮುಅ 24 ಮೇ 2024)

ಹುಝೂರ್ ನುಡಿದರು:

ಕ್ಯಾಮರೂನ್‌ನ ಗ್ವಾಂಡೇರೆ ನೆರೆಹೊರೆಯ ಎಂಟು ಕುಟುಂಬಗಳು ಬೈಅತ್ ಮಾಡಿ ಜೀವನವನ್ನು ಬದಲಾಯಿಸಿದೆ ಮತ್ತು ಅವರಲ್ಲಿ ಧರ್ಮದ ಜ್ಞಾನವನ್ನು ಹೆಚ್ಚಿಸಿದೆ. ಅವರಲ್ಲಿ ಓರ್ವ ಯುವಕ ಅಬ್ದುಲ್ ರಹ್ಮಾನ್ ಓ. ಲೆವೆಲ್ ಮಾಡುತ್ತಿದ್ದಾನೆ, ಅವನು ನನ್ನ ಖುತ್‌ಬಗಳನ್ನು ಬಹಳ ಆಸಕ್ತಿಯಿಂದ ಕೇಳುತ್ತಾನೆ, ತುಂಬಾ ಆಸಕ್ತಿ ಹೊಂದಿದವನಾಗಿದ್ದಾನೆ. ಜುಮುಅ ದಿವಸ ತನ್ನ ಶಾಲಾ ಶಿಕ್ಷಕನಿಗೆ ಹೇಳುತ್ತಾನೆ. ನನಗೆ ಖುತುಬ ಕೇಳಲು ಮನೆಗೆ ಹೋಗಬೇಕಾಗಿದೆ. ಶಾಲೆಯಾದರೂ ಬಿಡುವೆನು. ಆದರೆ ಜುಮುಅ ಖುತುಬ ಬಿಡುವುದಿಲ್ಲ. ಇದಾಗಿದೆ ಅವರ ವಿಶ್ವಾಸ. ಅವರ ತಂದೆ ಹೇಳುತ್ತಾರೆ- ಪ್ರತಿ ಜುಮುಅ ಅವನು ಶಾಲೆ ಬಿಟ್ಟು MTA ಮೇಲೆ ಖುತುಬ ಕೇಳಲು ಮನೆಗೆ ಬರುತ್ತಾನೆ, ಅಬ್ದುಲ್ ರಹ್ಮಾನ್ ಹೇಳುತ್ತಾರೆ. ಖುತುಬ ಕೇಳುವುದರಿಂದ ನನ್ನ ನಂಬಿಕೆ ಮತ್ತು ಜ್ಞಾನ ಹೆಚ್ಚಾಗುತ್ತದೆ. ಹಿಂದೆ ನಾನೇನು ತಪ್ಪು ಮಾಡುತ್ತಿದ್ದೇನೋ ಈಗ ಅದನ್ನು ಬಿಟ್ಟಿದ್ದೇನೆ.

ಹಾಗಾಗಿ ಖಿಲಾಫತ್ ಸೇರುವ ಪ್ರತಿಜ್ಞೆಯನ್ನು ನೆರವೇರಿಸುವವರು ಇವರೇ ಆಗಿದ್ದಾರೆ. ಖಂಡಿತವಾಗಿಯೂ ಒಂದು ಸಲ ಬರುವುದು ಇವರೇ ಎಲ್ಲರಿಗಿಂತ ಮುಂದಾಗುವರು. ಏಕೆಂದರೆ ಅಲ್ಲಾಹನ ವಾಗ್ದಾನಗಳ ಮೇಲೆ ಪೂರ್ಣ ಭರವಸೆ ಹೊಂದಿ ಅದರಂತೆ ನಡೆಯಬಯಸುತ್ತಾರೆ.

ಅಮೀರ್ ಸಾಹಿಬ್ ಬೆಲ್ಜಿಯಂ ಬರೆಯುತ್ತಾರೆ, ಮುಸ್ತಫಾ ಸಾಹಿಬ್ ಎಂಬುವವರು ಮರಾಕಶ್‌ನ ಮಿತ್ರರೊಬ್ಬರು ಒಂದು ದೀರ್ಘ ಅವಧಿ ಅಹ್ಮದಿಯರ ಮೇಲೆ ಸಂಶೋಧನೆ ನಡೆಯಿಸಿ ಬೈಅತ್ ಮಾಡಸಿರುವರು, ಹೇಳುತ್ತಾರೆ, ಬಾಲ್ಯದಿಂದಲೂ ನಾನು ವಿದ್ವಾಂಸರ (ಉಲಮಾಅ)

ಸಹವಾಸದಲ್ಲಿ ಸಮಯ ಕಳೆದಿದ್ದೇನೆ, ಆದರೆ ಖಲೀಫರ ಖುತುಬಗಳೆಲ್ಲ ಕೇವಲ ಪವಿತ್ರ ಖುರ್‌ಆನ್‌ನನ್ನು ನಿಜವಾದ ಅರ್ಥದಲ್ಲಿ ಉಲ್ಲೇಖಿಸುವುದಿಲ್ಲ. ಬದಲು ಅಲ್ಲಾಹನ ಸಾನಿಧ್ಯಕ್ಕೆ ಸಮೀಪಿಸುವಂತಿದೆ. ಹೇಳುತ್ತಾರೆ. ಖುತುಬಗಳು ಕೇಳಿದ ನಂತರ ನಾನು ಪ್ರಾರ್ಥನೆಗಳನ್ನು ಆನಂದಿಸಲು ಪ್ರಾರಂಭಿಸಿದೆ. ಅಲ್ಲಾಹನು ನನಗೆ ಸತ್ಯವಾದ ಸ್ವಪ್ನಗಳನ್ನು ದರ್ಶಿಸಿದನು. ಅಹ್ಮದಿಅತ್ ನನ್ನ ಜೀವನವನ್ನೇ ಬದಲಾಯಿಸಿದೆ. ಹೀಗೆ ಅಲ್ಲಾಹನು ಅನುಗ್ರಹಗಳನ್ನು ವಿವರಿಸುತ್ತಿರುವಾಗ ಅವರ ಕಣ್ಣು ತುಂಬಿದ್ದವು.

ಅಲ್ಲಾಹನು ಯಾವ ರೀತಿ ತನ್ನ ವಾಗ್ದಾನವನ್ನು ಈಡೇರಿಸಿಕೊಡುತ್ತಿದ್ದಾನೆ ಮತ್ತು ಖಿಲಾಫತ್ ಅನ್ನು ಬೆಂಬಲಿಸುತ್ತಿದ್ದಾನೆ, ಯಾವ ರೀತಿ ಜನರ ಹೃದಯಗಳನ್ನು ತೆರೆಯುತ್ತಿದ್ದಾನೆ.

ಗಿನಿಯಾ ಬಿಸೌನ ಬೋಧಕರು ಹೇಳುತ್ತಾರೆ..... ಒಂದು ಹಳ್ಳಿಯಲ್ಲಿ ಕಳೆದ ವರ್ಷ ಸ್ನೇಹಿತರು ತಬ್ಲೀಗ್ ಮೂಲಕ ಅಹ್ಮದಿಅತ್ ಸ್ವೀಕರಿಸಿದ್ದರು. ಆದರೆ ಆ ಗ್ರಾಮದ ನಾಲ್ಕು ಕುಟುಂಬಗಳು ಅಹ್ಮದಿಅತ್ ಸ್ವೀಕರಿಸಲು ನಿರಾಕರಿಸಿದ್ದವು. ನಮ್ಮ ತಂಡವು ಈ ಗ್ರಾಮದಲ್ಲಿ MTA ಸ್ಥಾಪಿಸಲು ಹೋದಾಗ, ನಮ್ಮ ಗುರುಗಳು ಮುಹಮ್ಮದ್ ಮುಸಾರಿಯೋ ಜಲೋವ್ ಈ ಎಲ್ಲಾ ಕುಟುಂಬಗಳನ್ನು ಮಸೀದಿಗೆ ಬಂದು ನಮ್ಮ ಮುಸ್ಲಿಂ ಚಾನಲ್ ಮತ್ತು ನಮ್ಮ ಖಲೀಫ್ ಹಾಗೂ ಇಮಾಮ್ ಮಹದಿಯ ಚಿತ್ರವನ್ನು ನೋಡಲು ಆಹ್ವಾನಿಸಿದರು. ಪ್ರಾರ್ಥನೆಯ ನಂತರ MTA ಗೆ ಚಾಲನೆ ನೀಡಿದಾಗ ಖುತುಬ ಪ್ರಾರಂಭವಾಗಿತ್ತು. ಅಹ್ಮದಿಯೇತರ ಮಿತ್ರರು ಇದನ್ನೆಲ್ಲ ತುಂಬ ಗಮನವಹಿಸಿ ಆಲಿಸುತ್ತಿದ್ದರು, ನೋಡುತ್ತಿದ್ದರು, ಗುರುಗಳು ಹೇಳಿದರು. ಖುತುಬ ಇಂಗ್ಲೀಷ್‌ನಲ್ಲಿ ನಡೆಯುತ್ತದೆ. ನಾನು ನಿಮಗಾಗಿ ಅದರ ಅನುವದ ಹೇಳುತ್ತೇನೆ." ಖಲೀಫರುಜ ಏನು ಹೇಳುತ್ತಿದ್ದಾರೆ ಎಂಬುವ ಕೇಳುವ ನಿಮ್ಮ ಹಕ್ಕಾಗಿದೆ. ಆಗ ಅವರಲ್ಲಿ ಒಬ್ಬರು ಹೇಳಿದರು, ನನಗೆ ಏನು ತಿಳಿಯುತ್ತಿಲ್ಲವಾದರೂ, ನಾನು ದೇವನ ಮೇಲೆ ಆಣೆ ಮಾಡಿ ಹೇಳುವೆನು. ಇವರು ಸುಳ್ಳು ಹೇಳಲು ಸಾಧ್ಯವಿಲ್ಲ. ಇವರು ಅಹ್ಮದಿಯಾ ಜಮಾಅತ್‌ನ ಖಲೀಫರಾಗಿದ್ದರೆ ಅಹ್ಮದಿಯಾ ಜಮಾಅತ್ ಎಂದೂ ಸುಳ್ಳಾಗಿರಲಿಕ್ಕಿಲ್ಲ, ನಾನು ಈಗಲೇ ಮತ್ತು ಇದೇ ಸಮಯಕ್ಕೆ ಅಹ್ಮದಿಅತ್ ಸ್ವೀಕರಿಸುವ ಘೋಷಣೆ ಮಾಡುತ್ತೇನೆ.

ಮತ್ತು ನೈಜೀರಿಯಾದ ಬೋಧಕರು ಹೇಳುತ್ತಾರೆ- MTA ನೋಡಲು ಬಹಳಷ್ಟು ಸ್ಥಳಗಳಲ್ಲಿ Dish ಗಳನ್ನು ಅಡವಳಿಸಲಾಗಿದೆ. ಅಲ್ಲಿ ಜನರು ಖುತುಬಗಳು ಮತ್ತು ಇತರ ಕಾರ್ಯಕ್ರಮಗಳು ನೋಡುತ್ತಾರೆ, ವ್ಯಕ್ತಿಯೊಬ್ಬನು ಹೇಳುತ್ತಾನೆ. ನನಗೆ ಜಮಾಅತ್ ಕುರಿತು ಹಲವು ಆಕ್ಷೇಪಗಳಿದ್ದವು, ಮನಸ್ಸಿಗೆ ತೃಪ್ತಿ ಆಗುತ್ತಿರಲಿಲ್ಲ. ಆದರೆ ಇಮಾಮ್ ಜಮಾಅತ್‌ರ ಖುತುಬಗಳು ಆಲಿಸಿದ ನಂತರ ದೈವಿಕ ರೀತಿಯಲ್ಲಿ ನನ್ನ ಮನಸ್ಸು ತೃಪ್ತಿ ಹೊಂದಿದೆ. ನನಗೆ ನಿಜವಾದ ಇಸ್ಲಾಂ ದೊರೆತಂತಾಗಿದೆ. ಮತ್ತು ನನ್ನಲ್ಲಿದ್ದ ಎಲ್ಲಾ ಆಕ್ಷೇಪಗಳು ಕೊನೆಗೊಂಡಿವೆ. ಆದ್ದರಿಂದ ನಾನು ಜಮಾಅತ್‌ನಲ್ಲಿ ಸೇರಿಕೊಂಡಿದ್ದೇನೆ. (ಖುತ್‌ಬ ಜುಮುಅ, 24 ಮೇ 2024)

ಅದೇ ರೀತಿಯ ಒಬ್ಬ ಬಾಲಕನ ಉದಾಹರಣೆ ಇದೆ. ಮೇಸಡೋನಿಯಾದ ಬೋಧಕರು ಬರೆಯುತ್ತಾರೆ. ಹಿಂದಿನ ದಿನಗಳಲ್ಲಿ ಬೋಸ್ನಿಯಾ ಪ್ರವಾಸದ ನಡುವೆ ಸ್ನೇಹಿತನೊಬ್ಬನ ಪರಿಚಯವಾಯಿತು. ಪಾಕಿಸ್ತಾನದ ಮಿತ್ರರಾಗಿದ್ದು. ಅವರೊಂದಿಗೆ ಮಾತುಕತೆ ನಡೆಯಿತು. ಹೀಗೆ ಮಾತುಕತೆ, ಭೇಟಿಗಳು ಮುಂದುವರೆದವು, ಅವನು ತಿಳಿಸಿದನು, ಕೆಲವು ದಿನಗಳ ಹಿಂದೆ ದುಬೈ ವಿಮಾನ ನಿಲ್ದಾಣದಲ್ಲಿ ಒಂದು ಕುಟುಂಬದವರೊಡನೆ ಭೇಟಿಯಾಯಿತು. ಅವರಿಗೆ ಮೂರು ವರ್ಷದ ಹುಡುಗಿಯೊಬ್ಬಳಿದ್ದಳು, ಹೇಳುತ್ತಿದ್ದಳು, ನಾವೆಲ್ಲರೂ ನಮಾಝ್ ಪ್ರಾಮಾಣಿಕವಾಗಿ ನಿರ್ವಹಿಸುತ್ತಿರಬೇಕು ಮತ್ತು ಯಾವಾಗಲೂ ಸತ್ಯವನ್ನು ಹೇಳಬೇಕು. ನನಗೆ ಆ ಕುಟುಂಬ ಅಹ್ಮದಿಯರದ್ದು ಎಂದು ತಿಳಿದಾಗ, ಆ ಹುಡಿಗೆ ಕೇಳಿದೆ. ನಿಮ್ಮ ಜೀವನದ ಬಹು ದೊಡ್ಡ ಬಯಕೆಯೇನು? ಹೇಳಿದಳು, ಲಂಡನ್‌ನಲ್ಲಿ ಪ್ರೀತಿಯ ಹುಝೂರರಿಗೆ ಭೇಟಿಯಾಗಬಯಸುತ್ತೇನೆ. ಹೇಳುತ್ತಾ, ಇಷ್ಟು ಸಣ್ಣ ವಯಸ್ಸಿನಲ್ಲಿ ಅವಳ ಬಯಕೆ ಖಲೀಫರೊಡನೆ ಭೇಟಿ ಮಾಡುವುದಾಗಿದೆ ಎಂಬ ಮಾತು ನನ್ನ ಮೇಲೆ ಆಳವಾದ ಪ್ರಭಾವ ಬೀರಿತು. (ಖುತ್‌ಬ ಜುಮುಅ, 29 ಮೇ 2020)

ಆತ್ಮೀಯ ಕೇಳುಗರೇ!! ಖಿಲಾಫತ್‌ನೊಂದಿಗೆ ತನ್ನನ್ನು ಸಂಪೂರ್ಣವಾಗಿ ಸಂಯೋಜಿಸುವವನಿಗೆ ಯಶಸ್ಸು ಬರುತ್ತದೆ. ಎಲ್ಲವನ್ನೂ ಖಿಲಾಫತ್‌ಗೆ ಅರ್ಪಿಸುವವನಿಗೆ ಯಶಸ್ಸು ಸಿಗುತ್ತದೆ. ಖಲೀಫರ ಪ್ರಾರ್ಥನೆಯನ್ನು ಸ್ವೀಕರಿಸುವವನಿಗೆ ಈ ಯಶಸ್ಸು ಬರುತ್ತದೆ. ಖಿಲಾಫತ್ ಶತಮಾನೋತ್ಸವ ಸಂದರ್ಭದಲ್ಲಿ, ಖಿಲಾಫತ್ ಪ್ರತಿಜ್ಞೆಯನ್ನು ತೆಗೆದುಕೊಳ್ಳುವಾಗ ನಾವು ಹುಝೂರ್ ಅನ್ವರ್(ಅಬಅ) ಅವರೊಂದಿಗೆ ಈ ಮಾತುಗಳನ್ನು ಪುನಾರಾವರ್ತಿಸಿದ್ದೇವೆ. ಖಿಲಾಫತ್ ವ್ಯವಸ್ಥೆಯ ಭದ್ರತೆ ಮತ್ತು ಸ್ಥಿರತೆಗಾಗಿ ಕೊನೆಯವರೆಗೂ ಹೋರಾಟವನ್ನು ಮುಂದುವರೆಸುತ್ತೇವೆ, ಎಂದು ನಾವು ದೃಢೀಕರಿಸುತ್ತೇವೆ, ಮತ್ತು ತಮ್ಮ ಸಂತತಿಯನ್ನು ಯಾವಾಗಲೂ ಖಿಲಾಫತ್‌ನೊಂದಿಗೆ ಸಂಯೋಜಿಸಲು ಮತ್ತು ಅದರ ಅನುಗ್ರಹಗಳಿಂದ ತೃಪ್ತರಾಗಿರಲು ಪ್ರೋತ್ಸಾಹಿಸುವುದನ್ನು ಮುಂದುವರೆಸುತ್ತೇವೆ. ಇದರಿಂದಾಗಿ ಖಿಲಾಫತ್ ಅಹ್ಮದಿಯಾ ಅಂತಿಮ ತೀರ್ಪಿನ ದಿನದವರೆಗೆ ಸುರಕ್ಷಿತವಾಗಿರುತ್ತದೆ.

ಅಲ್ಲಾಹನು ಪ್ರತಿಯೊಬ್ಬ ಅಹ್ಮದಿ ಪುರುಷ, ಮಹಿಳೆಯರಿಗೂ ಈ ಪ್ರತಿಜ್ಞೆಯನ್ನು ಪೂರೈಸುವಂತೆ ಮಾಡಲಿ. ಖಿಲಾಫತ್‌ಗೆ ನಿಷ್ಠೆ ಪ್ರೀತಿಯಲ್ಲಿ ಉನ್ನತ ಗುಣಮಟ್ಟವನ್ನು ಸಾಧಿಸುವಂತೆ ಮಾಡಲಿ. ಅಲ್ಲಾಹನು ನಮ್ಮನ್ನು ಯಾವಾಗಲೂ ಖಿಲಾಫತ್‌ನೊಂದಿಗೆ ಸಂಪರ್ಕಿಸಲಿ, ಮತ್ತು ತಮ್ಮ ಪ್ರೀತಿ ಪಾತ್ರರ ಪ್ರೀತಿಯನ್ನು ನಮಗೆ ದಯಪಾಲಿಸಲಿ. ಆಮೀನ್ ಸುಮ್ಮ ಆಮೀನ್.

**-ವ ಆಖೀರು ದಾವನಾ ಅನಿಲ್ ಹಮ್ದುಲಿಲ್ಲಾಹಿ ರಬ್ಬಲ್ ಆಲಮೀನ್-**

-------------*****-------------

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. "ಬರಾಹೀನೆ ಅಹ್ಮದಿಯಾ" ಎಂಬ ಗ್ರಂಥದಲ್ಲಿ ಅಲ್ಲಾಹನ ವಾಗ್ದಾನವನ್ನು ಉಲ್ಲೇಖಿಸಲಾಗಿದೆ. ಆ ವಾಗ್ದಾನ ಪ್ರಕಾರ ದ್ವಿತೀಯ ದಿವ್ಯ ಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದಾನ ನನ್ನ ಬಗ್ಗೆ ಯಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ."ನಿನ್ನ ಅನುಯಾಯಿಗಳ ಈ ಜಮಾತಿಗೆ ಪುನರುತ್ಥಾನದ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು."

ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನವು ಆಗಮಿಸುವುದು ಅವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಈಡೇರಿಸುವವನೂ ಸತ್ಯವಂತನೂ ಆಗಿರುವನು.ಅವನು ಮಾಡಿದುದನೆಲ್ಲವನ್ನೂ ನಿಮಗೆ ತೋರಿಸುವೇನು. ಈ ಕಾಲಘಟ್ಟವು ಲೋಕದ ಅಂತಿಮ ಕಾಲಘಟ್ಟವಾಗಿದ್ದು ಅನೇಕ ವಿಪತ್ತುಗಳು ಬಂದೆರಗಲಿರುವ ಕಾಲಘಟ್ಟವಾಗಿದ್ದರೂ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲಾ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು.

ನಾನು ಅಲ್ಲಾಹನ ಒಂದು ದಿವ್ಯ ಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಮೂರ್ತ ರೂಪವಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು. ಆದುದರಿಂದ ನೀವು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರತೀಕ್ಷಿಸುತ್ತಾ ಒಗ್ಗೂಡಿ ಪ್ರಾರ್ಥನೆ ಮಾಡುತ್ತಾ ಇರಿ. ಪ್ರತಿಯೊಂದು ದೇಶದಲ್ಲಿರುವ ಸಾತ್ವಿಕಾರದ ಜನರ ಪ್ರತಿಯೊಂದು ಜಮಾಅತ್ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಾ ಇರಬೇಕು. ಅದರ ಫಲ ಸ್ವರೂಪವಾಗಿ ದ್ವಿತೀಯ ದಿವ್ಯಶಕ್ತಿ ಆಕಾಶದಿಂದ ಅವತೀರ್ಣವಾಗಿ ನಿಮ್ಮ ದೇವನು ಇಷ್ಟು ಶಕ್ತಿಶಾಲಿಯಾದ ದೇವನೆಂದು ತೋರಿಸಿ ಕೊಡುವಂತಾಗಲಿ. ನಿಮ್ಮ ಮರಣವು ಸಮೀಪವಾಗಿದೆ ಎಂದು ನೀವು ಗ್ರಹಿಸಿರಿ. ಆ ಘಳಿಗೆ ಯಾವಾಗ ಎಂದು ನಿಮಗೆ ತಿಳಿಯದು.

ಶುದ್ಧ ಹೃದಯವನ್ನು ಹೊಂದಿದ ಮಹಾನುಭಾವರು ನನ್ನ ಮರಣದ ನಂತರ ನನ್ನ ಹೆಸರಿನಲ್ಲಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲಿ.

ಲೋಕದ ವಿವಿಧ ಭಾಗದಲ್ಲಿ ವಾಸಿಸುವ ಜನರಲ್ಲಿ ಒಳ್ಳೆಯ ಪ್ರಕೃತಿಯನ್ನು ಹೊಂದಿರುವವರನ್ನು- ಅವರು ಯುರೋಪಿನಲ್ಲಿರಲಿ ಅಥವಾ ಏಶಿಯಾದಲ್ಲಿರಲಿ- ಏಕದೇವ ವಿಶ್ವಾಸದ(ಎಂದರೆ ತೌಹೀದ್)ಕಡೆಗೆ ಎಳೆದು ತನ್ನ ದಾಸರನ್ನು ಏಕಧರ್ಮದಲ್ಲಿ ಜಮಾಯಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನು ಇದೇ ಉದ್ದೇಶ ಲಕ್ಷ್ಯವನ್ನು ಈಡೇರಿಸಲು ನಾನು ಕಳುಹಿಸಲ್ಪಟ್ಟಿದ್ದೇನೆ. ನೀವು ಈ ಉದ್ದೇಶ ಲಕ್ಷ್ಯವನ್ನು ಮೃದುತ್ವ, ಸುಸ್ವಭಾವ ಮತ್ತು ಪ್ರಾರ್ಥನೆಗಳ ಮೂಲಕ ಈಡೇರುವಂತೆ ಮಾಡಿರಿ. ಅಲ್ಲಾಹನಿಂದ ಪರಿಶುದ್ಧ ಆತ್ಮವನ್ನು ಪಡೆದುಕೊಂಡು ಒಬ್ಬ ವ್ಯಕ್ತಿ ಎದ್ದು ನಿಲ್ಲುವ ತನಕ ನೀವೆಲ್ಲರೂ ನನ್ನ ಅನಂತರ ಒಟ್ಟಿಗೆ ಸೇರಿಕೊಂಡು ಕೆಲಸ ಮಾಡಿರಿ.

**(ಅಲ್-ವಸಿಯ್ಯತ್)**

-------------*****-------------

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

ಜಲ್ಸ ಸಾಲಾನ ಖಾದಿಯಾನ್ 2024ರ ಭಾಷಣ

# ಜಾಗತಿಕ ಮಹಾಯುದ್ಧದ ದುಷ್ಪರಿಣಾಮಗಳಿಂದ ಸುರಕ್ಷಿತವಾಗಿರಲು ಹುಝೂರ್ (ಅಬಿಅ) ರವರ ಹಿತನುಡಿಗಳು

(ಕೆ.ತಾರಿಖ್ ಅಹ್ಮದ್ ಸಾಹಿಬ್, ಎಡೀಷ್ನಲ್ ನಝಿರ್ ಇಸ್ಲಾಹ್ ವ ಇರ್ಷಾದ್ ನೂರುಲ್ ಇಸ್ಲಾಮ್)

**ಮನಿಹ್‌ತದಾ ಫಇನ್ನಮಾ ಯಹ್‌ತದೀ ಲಿನಫ್‌ಸಿಹೀ ವಮನ್ ಝುಲ್ಲ ಫಇನ್ನಮಾ ಯಝಿಲ್ಲು ಅಲೈಹಾ ವಲಾ ತಝಿರೂ ವಾಝಿರತುಂವ್ವಿಝ್‌ರ ಉಖ್ರಾ ವಮಾ ಕುನ್ನಾ ಮುಅಝ್ಝಿಬೀನ ಹತ್ತಾ ನಬ್‌ಅಸ ರಸೂಲಾ** (ಸೂರ ಬನೀ ಇಸ್ರಾಈಲ್: 16)

**ಅನುವಾದ:–** ಯಾರಾದರೂ ಸತ್ಪಥದಲ್ಲಿ ನಡೆಯುವವನಾದರೆ ತನ್ ಆತ್ಮದ ಒಳಿತಿಗಾಗಿಯೇ ಅವನು ಸತ್ಪಥದಲ್ಲಿ ನಡೆಯುತ್ತಾನೆ. ಯಾರಾದರೂ ಪಥಭ್ರಷ್ಟನಾದನವಾದರೆ ಅದರ ದೋಷ ಸಹ ಅವನಿಗೆಯೇ, ಭಾರ ಹೊರುವ ಯಾವನು ಇನ್ನೊಬ್ಬನ ಭಾರವನ್ನು ಹೊರಲಾರನು. ಒಬ್ಬ ಸಂದೇಶವಾಹಕನನ್ನು ಕಳುಹಿಸುವ ತನಕ ನಾವು (ಜನರನ್ನು) ಶಿಕ್ಷಿಸುವುದಿಲ್ಲ.

ಸಯ್ಯದನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಆ ದಿನ ಆಕಾಶದಿಂದ ಸ್ಪಷ್ಟವಾದ ಹೊಗೆ ಇಳಿಯುತ್ತದೆ. ಮತ್ತು ಆ ದಿನ ಭೂಮಿಯು ಹಳದಿ ಬಣ್ಣಕ್ಕೆ ತಿರುಗುತ್ತದೆ. ಅಂದರೆ ತೀವ್ರ ಬರಗಾಲದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ನಾನು, ಅದರ ನಂತರ, ನಿನ್ನನ್ನು ಯಾರು ವಿರೋದಿಸುವರು. ನಿನಗೆ ಗೌರವ ನೀಡುವೆನು ಮತ್ತು ಆದರಿಸುವೆನು, ಅವರು ನಿನ್ನ ಕಾರ್ಯಗಳೆಲ್ಲ, ಯಶಸ್ವಿ ಆಗಬಾರದು ಎಂಬು ವಯಸುವರು. ಆದರೆ ಅಲ್ಲಾಹನು ನಿನಗೆ ಅಸಹಾಯಕನಾಗಿ ಬಿಡಲು ಬಯಸುವುದಿಲ್ಲ. ನಿನ್ನ ಎಲ್ಲಾ ಕಾರ್ಯಗಳು ಪೂರ್ಣಗೊಳ್ಳುವುವು. ನಾನು ರಹ್ಮಾನ್ ಆಗಿದ್ದೇನೆ. ಪ್ರತಿಯೊಂದು ಕಾರ್ಯದಲ್ಲಿ ನಿನಗೆ ಸವಲತ್ತುಗಳನ್ನು ಸೃಷ್ಟಿಸುವೆನು. ಎಲ್ಲಾ ಕಡೆಯಿಂದ ನಿನಗೆ ಅನುಗ್ರಹಿಸುವೆನು. (ಹಖೀಖತುಲ್ ವಹಿ, ರೂ. ಖ. ಸಂ 22, ಪುಟ 98).

ನಂತರ ಇನ್ನೊಂದೆಡೆ ಹಝ್‌ರತ್ ಅಖದಸ್ ಮಸೀಹ್ ಮೌಊದ್ (ಅ) ನುಡಿಯುತ್ತಾರೆ. ಓ ಕೇಳುಗರೇ ! ಈ ಭವಿಷ್ಯವಾಣಿಗಳು ಸ್ವಲ್ಪಮಟ್ಟಿಗೆ ಮಾತ್ರ ಬೆಳಕಿಗೆ ನೆರವೇರಿಕೆಯ ಸಮಯದಲ್ಲಿ ಪ್ರಪಂಚದಲ್ಲಿ ಭಯವನ್ನು ಉಂಟು ಮಾಡಿದರೆ ಮತ್ತು ಜಗತ್ತನ್ನು ಭಯದಿಂದ ಹುಚ್ಚರನ್ನಾಗಿ ಮಾಡಿದರೆ ಮತ್ತು ಅನೇಕ ಸ್ಥಳಗಳಲ್ಲಿ ಕಟ್ಟಡಗಳನ್ನು ಮತ್ತು ಜೀವನವನ್ನು ನಾಶಮಾಡಿದರೆ, ಆಗ ಅಲ್ಲಾಹನಿಂದ ನೀವು ಭಯಪಡಿರಿ. ನನ್ನ ಪರವಾಗಿ ಇದನ್ನೆಲ್ಲ ಮಾಡಿ ತೋರಿಸಿದನು. (ತಜಲ್ಲಿಯಾತ್-ಇಲಾಹಿಯಾ, ರೂ. ಖ ಸಂ 20, ಪುಟ 396).

ಸ್ನೇಹಿತರೇ ಎಚ್ಚರಗೊಳ್ಳಿರಿ, ಮತ್ತೆ ಭೂಕಂಪಗಳು ಸಂಭವಿಸಲಿವೆ.
ಮತ್ತೆ ಅಲ್ಲಾಹನು ತನ್ನ ಶಕ್ತಿ ತೋರಿಸಲಿದ್ದಾನೆ.
ಮಿತ್ರರೇ ! ಇದಕ್ಕೇನಾದರೂ ಚಿಕಿತ್ಸೆ ಹುಡುಕಿರಿ.
ಓ ಅಜಾಗರೂಕರೇ ! ಆಕಾಶವು ಈಗ ಬೆಂಕಿ ಸುರಿಯಲಿಕ್ಕಿದೆ.

ಮಹನಿಯರೇ! ಇಂದಿನ ಯುಗದಲ್ಲಿ ಪ್ರತಿಯೊಬ್ಬ ಮನುಷ್ಯನು ಅಶಾಂತಿಗೆ ಬಲಿಯಾಗಿದ್ದಾನೆ ಮತ್ತು ಶಾಂತಿ ಹಾಗೂ ಸೌಹಾರ್ಧತೆ ಹದಗೆಡುತ್ತಿರುವುದನ್ನು ತನ್ನ ಕಣ್ಣುಗಳಿಂದ ನೋಡುತ್ತಿದ್ದಾನೆ. ಮತ್ತು ಕಿವಿಯಿಂದ ಕೇಳುತ್ತಿದ್ದಾನೆ. ಇಂದು ಜಗತ್ತು ಆತಂಕ ಹಾಗೂ ಬಡಪಡಿಕೆಯಿಂದ ನರಳುತ್ತಿದೆ. ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಯುದ್ಧದ ಬೆಂಕಿ ಹೊತ್ತಿಕೊಂಡಿದೆ. ಇಂದಿನ ಯುಗದಲ್ಲಿ ದೇವ ಪ್ರಕೋಪ ಮತ್ತೊಂದು ವಿಶ್ವಯುದ್ಧದ ರೂಪದಲ್ಲಿ ಪ್ರಕಟವಾಗಬಹುದು. ಅಂತಹ ಯುದ್ಧದಲ್ಲಿ ಯಾವುದೇ ಸಂದೇಹವಿಲ್ಲ. ಅದರ ದುಷ್ಪರಿಣಾಮಗಳು ಮತ್ತು ವಿನಾಶ ಕೇವಲ ಯುದ್ಧ ಮಾತ್ರಕ್ಕೆ ಅಥವ ಪ್ರಸಕ್ತ ಪೀಳಿಗೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ವಾಸ್ತವವೇನೆಂದರೆ ಅದರ ಭಯಾನಕವದ ಪರಿಣಾಮಗಳು ಮುಂದಿನ ಹಲವು ಪೀಳಿಗೆಗಳಿಗೆ ಅನುಭವಿಸಬೇಕಾಗಬಹುದು.

ಅಂತಿಮ ಕಾಲಘಟ್ಟದ ಇಮಾಮರಾದ ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ) ಜೀವನಪರ್ಯಂತ ಮುಸಲ್ಮಾನರಿಗೂ ಮತ್ತು ಇಡೀ ಲೋಕಕ್ಕೆ ಪದೇ ಪದೇ ಮುನ್ನೆಚ್ಚರಿಕೆಯನ್ನು ನೀಡಿದ್ದಾರೆ. ನೀವು ಪಶ್ಚಾತ್ತಾಪಪಡದಿದ್ದರೆ ಮತ್ತು ನೈಜ ದೇವನ ಮೇಲೆ ಹಾಗೂ ಅವರ ಪ್ರವಾದಿ (ಸ) ಮತ್ತು ಕಾಲಘಟಟದ ಇಮಾಮರ ಮೇಲೆ ನಂಬಿಕೆ ತರದಿದ್ದರೆ ಅಲ್ಲಾಹನ ಘೋರವಾದ ಶಿಕ್ಷೆಗೆ ಗುರಿಪಡಿಸುವನು.

ಮಹನಿಯರೇ! ಪವಿತ್ರ ಖುರ್‌ಆನ್‌ನಲ್ಲಿ ನಮೂದಿತವಾಗಿದೆ, ನೂಹ್ ಸಮುದಾಯವು, ಬಹುದೇವಾರಾಧನೆ ಮತ್ತು ವಿಗ್ರಹಾರಾಧನೆಯ ಕಾರಣದಿಂದಾಗಿ ಅವರನ್ನು ಚಂಡಮಾರುತದ ಮೂಲಕ ನಾಶಪಡಿಸಿದನು. ಅಹಂಕಾರ ಮತ್ತು ಕೃತಘನತೆ ಹೊಂದಿದ ಕಾರಣ ಆದ್ ಸಮುದಾಯವನ್ನು ತೀವ್ರ ರೀತಿಯ ಬಿರುಗಾಳಿಯಿಂದ ಶಿಕ್ಷಿಸಿದನು. ಸಮೂದ್ ಸಮುದಾಯವನ್ನು ಅಲ್ಲಾಹನ ಕುರುಹು ಒಂಟೆಯನ್ನು ಪೀಡಿಸಿದ್ದರಿಂದ ಭಯಾನಕವಾದ ಭೂಕಂಪಗಳಿಂದ ನಾಶಪಡಿಸಿದನು. ವ್ಯಭಿಚಾರ ಮತ್ತು ಸಲ್ಲಿಂಗ ವ್ಯಭಿಚಾರ ಕಾರಣಗಳಿಂದಾಗಿ ಲೂತ್ ಸಮುದಾಯದ ಮೇಲೆ ಭೂಮಿ ಪಲ್ಲಟಗೊಂಡಿತು. ತೂಕ ಅಳತೆಯ ವಂಚನೆ ಮೋಸಗಾರಿಕೆಯಿಂದಾಗಿ ಅಸ್‌ಹಾಬುಲ್ ಅಯ್ಕೊ ಅವರ ಮೇಲೆ ವಿಪರೀತ ಬಿಸಿಲು ಭೂಕಂಪದ ಶಿಕ್ಷೆಗೆ ಗುರಿಯಾದರು.

ಆದರೆ ಪ್ರಸಕ್ತ ಕಾಲಘಟ್ಟದಲ್ಲಿ ಆ ಸರ್ವಶಕ್ತಮಾನ ಅಲ್ಲಾಹನು ದೀರ್ಘ ಸಮಯದಿಂದ ಮೌನವಾಗಿದ್ದನು ಮತ್ತು ಅವನ ಕಣ್ಣು ಎದುರಿನಲ್ಲಿ ಗತಸಮುದಾಯಗಳ ನಿಕೃಷ್ಟ ಚಟುವಟಿಕೆಗಳಲ್ಲಿ ತೊಡಗಿದರು, ಇಂದಿನ ಯುಗದ ಮೇಲೆ ದೃಷ್ಟಿ ಹಾಯಿಸಿದರೆ ಕಾಣಬಹುದು, ಗತ ಸಮುದಾಯಗಳು ಯಾವ ಪಾಪಕೃತ್ಯಗಳಿಂದಾಗಿ ದೇವನ ಶಿಕ್ಷೆಗೆ ಗುರಿಯಾಗಿದ್ದವು. ಅವೆಲ್ಲಾ ಪಾಪಕೃತ್ಯಗಳು ಇಂದಿನ ಯುಗದಲ್ಲಿ ಕಾಣಬಹುದಾಗಿದೆ. ಬಹುದೇವಾರಾಧನೆ ಮತ್ತು ಧಿಕ್ಕಾರಿಕೆ ಪರಾಕಾಷ್ಠೆಗೆ ತಲುಪಿದೆ, ಅಲ್ಲಾಹನ ಪ್ರವಾದಿಗಳನ್ನು ಕೇವಲ ಧಿಕ್ಕರಿಸುತ್ತಿದ್ದ. ಮಾತ್ರವಲ್ಲ, ಬದಲು ಅವರನ್ನು ನಾನಾ ರೀತಿಯಲ್ಲಿ ಅವಹೇಳನಕ್ಕೆ ಗುರಿಮಾಡುತ್ತಿದ್ದಾರೆ. ಹಿಂಸೆ ದಬ್ಬಾಳಿಕೆ ಮಿತಿಮೀರಿದೆ, ವ್ಯಭಿಚಾರ ಎಷ್ಟರಮಟ್ಟಿಗೆ ಚಾಲನೆಯಲ್ಲಿದೆ ಎಂದೆ ಮಾನ ಮರ್ಯಾದೆ ಲಜ್ಜೆ ಏನೇನೂ ಉಳಿಯಲಿಲ್ಲ.

ಮಹನೀಯರೇ! ಇತಿಹಾಸವು ಆ ಕಪ್ಪು ಅಧ್ಯಾಯಗಳನ್ನು ಮತ್ತೊಂದು ಸಲ ಮರುಕಳಿಸುತ್ತಿದೆ, ಮತ್ತು ಅಲ್ಲಾಹನ ಪ್ರಕೋಪ ಅವತರಿಸುತ್ತಿದೆ, ಅದರ ಸಮೀಕ್ಷೆ ಮಾಡುತ್ತಾ ಹಝ್‌ರತ್ ಅಖದಸ್ ಮಸೀಹ್ ಮೌಊದ್ (ಅ) ಹೇಳುತ್ತಾರೆ.

"ಈ ದೇಶದ ಪಾಳಿಯು ಹತ್ತಿರವಾಗುತ್ತಿದೆ ಎಂದು ನಾನು ನಿಜವಾಗಿ ಹೇಳುತ್ತೇನೆ. ನೋಹನ ಸಮಯವು ನಿಮ್ಮ ಕಣ್ಣುಗಳ ಮುಂದೆ ಬರುವುದು. ಲೂತ್‌ನ ಘಟನೆಗಳನ್ನು ನಿಮ್ಮ ಸ್ವಂತ ಕಣ್ಣುಗಳಿಂದ ನೋಡುವಿರಿ, ಅದರೆ ದೇವನು ಕೋಪಗೊಳ್ಳಲು ನಿಧಾನ ಪ್ರವೃತ್ತಿ ಹೊಂದಿದವನಾಗಿದ್ದಾನೆ, ಪಶ್ಚಾತ್ತಾಪಪಡಿರಿ, ಕರುಣೆಗೆ ಪಾತ್ರರಾಗುವಿರಿ, ದೇವರನ್ನು ತ್ಯಜಿಸುವವನು ಒಂದು ಹುಳು ಹೊರತು ಮನುಷ್ಯನಲ್ಲ, ಅವನಿಗೆ ಭಯಪಡದವನು ಮೃತ ಹೊರತು ಜೀವಂತನಲ್ಲ." (ಹಖೀಖತುಲ್ ವಹಿ, ರೂ. ಖ. ಸಂ 22, ಪುಟ 289).

ಮರಣದ ಮಾರ್ಗದಿಂದ ಈಗ ಧರ್ಮಕ್ಕೆ ಸಹಾಯ ದೊರಕಬಹುದು.
ಇಲ್ಲದಿದ್ದರೇ ಸ್ನೇಹಿತರೇ! ಧರ್ಮವು ಒಂದು ದಿನ ಸತ್ತು ಹೋಗಲಿದೆ.
ಮಹನೀಯರೇ!

ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ) ಮತ್ತು ಖಲೀಫರ ಭವಿಷ್ಯವಾಣಿಗಳಿಂದ ನಮಗೆ ತಿಳಿದುಬರುವುದೇನೆಂದರೆ "ಮೂರನೇ ವಿಶ್ವಯುದ್ಧ ಅಂತ್ಯವು ಇಸ್ಲಾಮಿನ ಜಾಗತಿಕ ಪ್ರಾಬಲ್ಯ ಮತ್ತು ವಿಜಯದ ಪ್ರಾರಂಭವಾಗಿದೆ. ಅದರ ನಂತರ ಇಸ್ಲಾಂ ಧರ್ಮವು ಪ್ರಪಂಚದಾದ್ಯಂತ ಬಹಳ ವೇಗದಲ್ಲಿ ಹರಡುತ್ತದೆ ಮತ್ತು ಜನರು ಅಧಿಕ ಸಂಖ್ಯೆಯಲ್ಲಿ ಇಸ್ಲಾಂ ಅನ್ನು ಸ್ವೀಕರಿಸುತ್ತಾರೆ. ಮತ್ತು ಈ ವಿಷಯ ಮನದಟ್ಟಾಗುವುದು–ಇಸ್ಲಾಂ ಮಾತ್ರ ಒಂದು ನಿಜವಾದ ಧರ್ಮವಾಗಿದೆ ಮತ್ತು ಮನುಷ್ಯನ ಮೋಕ್ಷವು ಕೇವಲ ಪವಿತ್ರ ಪ್ರವಾದಿ ಮುಹಮ್ಮದ್ (ಸ) ರವರ ಮೂಲಕ ಮಾತ್ರ ದೊರಕಬಹುದಾಗಿದೆ.

ಆದ್ದರಿಂದ ಕಾಲಘಟ್ಟವು ಮನುಷ್ಯನಿಗೆ ವೇದನೆಯಲ್ಲಿ ಮತ್ತು ಕಠಿಣ ಪರಿಸ್ಥಿತಿಗಳಲ್ಲಿ ಬಂಧಿತನಾಗಿ ಮಾಡಿರುವಾಗ, ಒಬ್ಬ ಸತ್ಯವಿಶ್ವಾಸಿಯು ಮೊದಲಿಗಿಂತ ಹೆಚ್ಚು ಅಲ್ಲಾಹನ ಕಡೆ ವಾಲಬೇಕಾಗಿದೆ. ಮತ್ತು ಅಲ್ಲಾಹನ ಮಾರ್ಗದರ್ಶನ ಮಾಡಲು ಅಲ್ಲಾಹನು ತನ್ನ ಸಂದೇಶವಾಹಕನನ್ನು ಕಳುಹಿಸಿದದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ತನ್ನ ಸಂದೇಶವಾಹಕನನ್ನು ಕಳುಹಿಸಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ:– "ನೀವೆಲ್ಲರೂ ಒಟ್ಟು ಸೇರಿಕೊಂಡು ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. ಭಿನ್ನಭಿನ್ನರಾಗದಿರಿ, ನೀವು ಪರಸ್ಪರ ಶತ್ರುಗಳಾಗಿದ್ದಾಗ ಅಲ್ಲಾಹನು ನಿಮಗೆ ನೀಡಿದ ಅನುಗ್ರಹಗಳನ್ನು ಸ್ಮರಿಸಿರಿ. ಅವನು ನಿಮ್ಮ ಹೃದಯಗಳನ್ನು ಅನ್ಯೋನ್ಯ ಒಂದುಗೂಡಿಸಿದ ಫಲವಾಗಿ ಅವನ ಅನುಗ್ರಹದಿಂದ ನೀವು ಪರಸ್ಪರ ಸಹೋದರರಾಗಿರಿ. ನೀವು ಒಂದು ಅಗ್ನಿಕುಂಡದ ಅಂಚಿನಲ್ಲಿದ್ದಾಗ ಅವನು ನಿಮ್ಮನ್ನು ಅದರಿಂದ ರಕ್ಷಿಸಿದನು. ಹೀಗೆ ಅಲ್ಲಾಹನು ತನ್ನ ಆಜ್ಞೆಗಳನ್ನು ವಿವರಿಸಿಕೊಡುತ್ತಾನೆ. ನೀವು ಸತ್ಪಥವನ್ನು ಪಡೆಯಲಿಕ್ಕಾಗಿ.

ಇಂದು ಅಲ್ಲಾಹನ ಅದೇ ಉದ್ಧಾರಕ ಹಝ್‌ರತ್ ಖಲೀಫತುಲ್ ಮಸೀಹ್‌ನ ರೂಪದಲ್ಲಿ ವಿವಿಧ ರೀತಿಯಲ್ಲಿ, ವಿವಿಧ ಮಾಧ್ಯಮಗಳ ಮೂಲಕ, ವಿವಿಧ ಮಾತುಗಳಲ್ಲಿ ಗಮನವನ್ನು ಸೆಳೆಯುತ್ತ ನಮಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ಮಾರ್ಗದರ್ಶ ಅಲ್ಲಾಹನ ಮತ್ತು ಅವನ ನೆಚ್ಚಿನ ಪ್ರವಾದಿ (ಸ) ರವರ ಬೋಧನೆಗಳನ್ನು ಅವಲಂಬಿಸಿದೆ. ನಮಗೆ ಎಲ್ಲಾ ರೀತಿಯ

ಆಪತ್ತುಗಳಿಂದ ರಕ್ಷಣೆ ನೀಡಲು ಮತ್ತು ನಮ್ಮ ಜೀವನಕ್ಕಾಗಿ ಒಂದು ಎಂತಹ ಮಾಧ್ಯಮವಾಗಿದೆ ಎಂದರೆ ಅದು ಶಾಶ್ವತವಾಗಿರುವಂತಹದ್ದಾಗಿದೆ, ನಾವು ಅದರಂತೆ ನಡೆದುಕೊಂಡರೆ ಅದರ ಅತ್ಯುತ್ತಮ ಪರಿಣಾಮಗಳನ್ನು ಕಾಣಬಹುದು.

ಆದ್ದರಿಂದ ಮನುಷ್ಯನಿಗೆ ಮೂರನೇ ವಿಶ್ವಯುದ್ಧದ ದುಷ್ಪರಿಣಾಮಗಳಿಂದ ರಕ್ಷಣೆ ಪಡೆಯುವ ಮಾರ್ಗ ಅಲ್ಲಾಹನೆಡೆ ತಲೆಬಾಗದೆ ಮತ್ತು ಅಲ್ಲಾಹನನ್ನು ಮಾತ್ರ ತನ್ನ ಸಹಾಯಕನು ಎಂದು ಪರಿಗಣಿಸದಿದ್ದರೆ ಅನ್ಯಥಾ ಮಾರ್ಗವಿಲ್ಲ.

ಹಿಂದಿನ ಎರಡು ದಶಕಗಳಿಂದ ಸಯ್ಯದನಾ ಹಝ್ರತ್ ಅಮೀರುಲ್ ಮುಮಿನೀನ್ (ಅಬಿಅ) ಲೋಕಕ್ಕೆ ಮೂರನೇ ವಿಶ್ವಯುದ್ಧದ ಅಪಾಯಗಳ ಕುರಿತು ಮುನ್ನೆಚ್ಚರಿಕೆ ನೀಡುತ್ತಿದ್ದಾರೆ ಮತ್ತು ಜಮಾಅತ್ ಬಾಂಧವರಿಗೆ ದುಆ (ಪ್ರಾರ್ಥನೆಗಳ) ಜೊತೆಯಲ್ಲಿ ತನ್ನ ಸುಧಾರಣೆ ಮತ್ತು ತರಬೇತಿಯೆಡೆ ವಿಶೇಷ ಗಮನ ಸೆಳೆಯುತ್ತಿದ್ದಾರೆ, ಅದರಿಂದ ಜಮಾಅತ್ ಬಾಂಧವರು ತನ್ನನ್ನು ಮತ್ತು ಮುಂಬರುವ ಪೀಳಿಗೆಗೆ ಈ ವಿಶ್ವಯುದ್ಧ ಭಯಾನಕವದ ದುಷ್ಪರಿಣಾಮಗಳಿಂದ ರಕ್ಷಿಸಬಹುದು.

ಸಯ್ಯದನಾ ಹುಝೂರ್ (ಅಬಿಅ) ಖುತುಬ ಜುಮುಅ 7 ಅಕ್ಟೋಬರ್ 2016 ರಲ್ಲಿ ಹೇಳುತ್ತಾರೆ.

"ಲೋಕದ ಇಂದಿನ ಸ್ಥಿತಿ, ಲೋಕದ ಪರಿಣಾಮ ಏನಾಗಬಹುದು ಎಂಬ ಚಿಂತೆಗೆ ಒಳಗಾಗಿಸಿದೆ. ಹಿಂದೆ ಓರ್ವರು ಹೇಳುತ್ತಿದ್ದರು. ಲೋಕವು ಬಹುವೇಗವಾಗಿ ವಿನಾಶದೆಡೆ ಹೋಗುತ್ತಿದೆ. ನಮ್ಮ ಗತಿ ಏನಾಗಬಹುದು ಎಂದು. ಅದರ ಉತ್ತರ ಹಝ್ರತ್ ಮಸೀಹ್ ಮೌಊದ್ (ಅ) ತನ್ನ ಒಂದು ಕವನ ಸಾಲಿನಲ್ಲಿ ನೀಡಿದ್ದಾರೆ.

ಬೆಂಕಿ ಇದೆ, ಆದರೆ ಬೆಂಕಿಯಿಂದ ಅವರೆಲ್ಲರೂ ರಕ್ಷಿಸಲ್ಪಡುವರು.

ಯಾರು ತನ್ನ ಪ್ರಭುವಿನೊಡನೆ ಪ್ರೀತಿಯ ಸಂಪರ್ಕವನ್ನು ಇಟ್ಟುಕೊಳ್ಳುತ್ತಾರೆ.

(ದುರ್ರೆ ಸಮೀನ್ ಉರ್ದು ಪುಟ 154).

ಆದ್ದರಿಂದ ನಾವು ಅಲ್ಲಾಹನೊಡನೆ ತನ್ನ ಸಂಬಂಧ ದೃಢಪಡಿಸಿಕೊಳ್ಳುವುದು ಅಗತ್ಯವಾಗಿದೆ. ಅಲ್ಲಾಹನ ಹಕ್ಕುಗಳನ್ನು ಪಾಲಿಸುವವರಾಗಬೇಕು. ಅವನ ಸೃಷ್ಟಿಗಳ ಹಕ್ಕುಗಳು ಸಹ ಪಾಲಿಸುವವರಾಗಬೇಕು. ಅಲ್ಲಾಹನು ತೋರಿಸಿಕೊಟ್ಟ ತತ್ವಗಳ ಮೇಲೆ ನಡೆಯುವವರಾಗಬೇಕು ಮತ್ತು ಪಾಪಗಳಿಂದ ದೂರ ಇರುವ ಪ್ರಯತ್ನ ಮಾಡಬೇಕು. ಅಲ್ಲಾಹನ ದೃಷ್ಟಿಯಲ್ಲಿ ಯಾವುದು ಪಾಪಕಾರ್ಯಗಳಿವೆ. ಅದರಿಂದ ದೂರವಿರಬೇಕು. ಅಲ್ಲಾಹನು ಅದನ್ನು ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟಪಡಿಸಿದ್ದಾನೆ. ನಾವು ಹಝುರತ್ ಮಸೀಹ್ ಮೌಊದ್ (ಅ) ರವರ ಮೇಲೆ ನಂಬಿಕೆ ಹೊಂದಿದ ನಂತರ ನಂಬಿಕೆಯ ಆಧಾರದಲ್ಲೂ ಮತ್ತು ಪಾಲನೆಯ ಆಧಾರದಲ್ಲೂ ದೃಢತೆ ಹೊಂದುವ ಪ್ರಯತ್ನ ಮಾಡಬೇಕು. ಇವುಗಳು ಮಾತ್ರ ನಮ್ಮ ಮೋಕ್ಷಕ್ಕೆ ಕಾರಣವಾಗಲಿವೆ ಮತ್ತು ಅಲ್ಲಾಹನಿಗೂ ಮೆಚ್ಚಿಸುವಂತಾಗಿವೆ. ಆದ್ದರಿಂದ ನಾವು ಹಝ್ರತ್ ಮಸೀಹ್ ಮೌಊದ್ (ಅ) ರವರ ಮಾತುಗಳನ್ನು ಮುಂದುವೆಸಿಕೊಂಡು ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಆಜ್ಞೆಗಳ ಮೇಲೆ ಪಾಲಿಸುವ ದಿಕ್ಕಿನಲ್ಲಿ ಅವಲೋಕಿಸಿಕೊಳ್ಳುವ ಅಗತ್ಯವಿದೆ ಮತ್ತು ಇದು ಯಾವಾಗಲೂ ನಡೆಯುವ ಕಾರ್ಯವಾಗಬೇಕಾಗಿದೆ.

ಮಹನಿಯರೇ! ಮಸ್ಜಿದ್ ಫಝ್ಲ್ ಲಂಡನ್‌ನ ಒಂದು ನೂರು ವರ್ಷ ಪೂರ್ಣಗೊಂಡಾಗ, ಶತಮಾನೋತ್ಸವ ಸಂದರ್ಭದಲ್ಲಿ ಹುಝೂರ್ (ಅಬಿಅ) ವಿನಾಶದಿಂದ ರಕ್ಷಣೆ ಪಡೆಯಲು ನಮಗೆ ಅಲ್ಲಾಹನ ಹಕ್ಕುಗಳನ್ನು ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಪಾಲಿಸಲು ವಿಶೇಷವಾಗಿ ಗಮನ ಸೆಳೆದಿದ್ದಾರೆ. ಹುಝೂರ್ ಹೇಳುತ್ತಾರೆ. "ದಿಟವಾಗಿಯೂ ನಾವು ಒಂದು ಪ್ರಕ್ಷುಬ್ದ ಸಮಯವನ್ನು ಎದುರಿಸುತ್ತಿದ್ದೇವೆ, ಮತ್ತು ಲೋಕದಾದ್ಯಂತ ದ್ವೇಷದ ಬೆಂಕಿ ಹರಡಿ ಹೋಗಿದೆ, ಅಂತಹ ಪರಿಸ್ಥಿತಿಯಲ್ಲಿ ನಮಗೆ ತಮ್ಮ ನಡತೆ ಮತ್ತು ಚರಿತ್ರೆಗಳ ಮೇಲೆ ನಿಗಾವಹಿಸುವ ಅಗತ್ಯವಿದೆ. ನಾವು ಒಂದೇ ದೇವನ ಸೃಷ್ಟಿಯಾದ ನೆಲೆಯಲ್ಲಿ ಪರಸ್ಪರ ಪ್ರೀತಿ, ಸ್ನೇಹವನ್ನು ಬಲಪಡಿಸಬೇಕಾಗಿದೆ ಮತ್ತು ಪರಸ್ಪರ ಗೌರವ ಭಾವನೆ ಇರಿಸಿಕೊಳ್ಳಬೇಕಾಗಿದೆ. ಈ ಮೂಲಕ ನಾವು ಜಗತ್ತನ್ನು ಶಾಶ್ವತವಾಗಿ ಶಾಂತಿಗೆ ತರಬಹುದು. ಮಾನವಿಯತೆಯು ಅವರ ಸೃಷ್ಟಿಕರ್ತನ ಪಾದಗಳಿಗೆ ಬರಲು ಇದು ಸಾಧನವಾಗಿದೆ. ಒಬ್ಬ ಮುಸಲ್ಮಾನನಾಗಿ, ಈ ಜೀವನವು ತಾತ್ಕಾಲಿಕ ಜೀವನ ಮತ್ತು ಮರಣಾನಂತರದ ಜೀವನವು ವಾಸ್ತವ ಮತ್ತು ನಿಜವಾದ ಜೀವನವಾಗಿದೆ. ಅಲ್ಲಿ ನಾವು ನಮ್ಮ ಎಲ್ಲಾ ಕರ್ಮಗಳ ಲೆಕ್ಕ ಕೊಡಬೇಕಾಗುತ್ತದೆ. ಈ ನೆಲೆಯಲ್ಲಿ ನಾವು ಮುಂದಿನ ಜೀವನಕ್ಕಾಗಿ ಏನು ಸಿದ್ಧತೆ ಮಾಡಿಕೊಂಡಿದ್ದೇವೆ? ಲೋಕವು ಬಹುವೇಗವಾಗಿ ವಿನಾಶದ ಕಡೆ ಹೋಗುತ್ತಿದ. ನಾವು ಅದನ್ನು ತಡೆಯಲು ಭಗಿರಥ ಪ್ರಯತ್ನ ಮಾಡಬೇಕಾಗಿದೆ. ಪರಮಾಣು ವಿನಾಶದ ಈ ಮಾರ್ಗ ಯಾವ ವೇಗದಲ್ಲಿ ಲೋಕ ಸಾಗಿದೆ, ಅದನ್ನು ತಡೆಯದಿದ್ದರೆ, ಲೋಕದ ಮುಂಬರುವ ಪೀಳಿಗೆ ವಿಕ್ಲಾಂಗವಾಗಿ ಹುಟ್ಟಬಹುದು. ಆದ್ದರಿಂದ ಇಂದು ನಾವು ನೋಡಬೇಕಾಗಿದೆ. ನಾವು ಮುಂಬರುವ ಪೀಳಿಗೆಗಾಗಿ ಎಂತಹ ನೆಲೆಯನ್ನು ಮತ್ತು ಎಂತಹ ವಿಶ್ವವನ್ನು ಬಿಟ್ಟು ಹೋಗುತ್ತಿದ್ದೇವೆ ಎಂದು. ಅಲ್ಲಾಹನು ತನ್ನ ಪ್ರೀತಿ ಮತ್ತು ಅವನ ಸೃಷ್ಟಿಯ ಪ್ರೀತಿ ಎಲ್ಲಾ ಮನುಷ್ಯರಲ್ಲೂ ಹುಟ್ಟಿ ಬರುವಂತೆ ದಯಪಾಲಿಸಲಿ. ನಿಶ್ಚಿತವಗಿಯೂ ಅದೇ ಉದ್ದೇಶದಿಂದ ಮಸ್ಜಿದ್ ಫಝ್ಲ್ ಲಂಡನ್‌ನ್ನು ಸ್ಥಾಪಿಸಲಾಗಿದೆ. ಅಲ್ಲಾಹನ ಅನುಗ್ರಹದಿಂದ ನಾವು ನೂರು ವರ್ಷಗಳ ನಂತರವೂ ಈ ಉದ್ದೇಶಕ್ಕಾಗಿ ಪ್ರಯತ್ನಶೀಲರಾಗಿದ್ದೇವೆ. ಮತ್ತು ಅದೇ ಉದ್ದೇಶಕ್ಕಾಗಿ ಈ ಸಮಾರಂಭ ಹಮ್ಮಿಕೊಂಡಿದ್ದೇವೆ.

ಅಲ್ಲಾಹನು ನಮಗೆ ಜಾತಿ ಮತ ಭೇಧವನ್ನೂ ಲೆಕ್ಕಿಸದೇ ಸಮಾಜದ ಉನ್ನತಿಗಾಗಿ ಒಳಿತಿಗಾಗಿ ಪ್ರಯತ್ನಿಸುವಂತೆ ದಯಪಾಲಿಸಲಿ. ನಾವು ಈ ಮುಖ್ಯವದ ಉದ್ದೇಶದಲ್ಲಿ ಯಶಸ್ವಿಯಾಗುವಂತೆ ದಯಪಾಲಿಸಲಿ.

(ಅಲ್‌ಫಝ್ಲ್ 8 ನವೆಂಬರ್ 2024)

ಹೇಗೆ ತಾನೆ ಭೂಕಂಪಗಳು ಬಾರದು, ಭಯಭಕ್ತಿ ಇಲ್ಲದಾಯಿತು.

ಒಬ್ಬ ಮುಸ್ಲಿಮನು ಸಹ ನಾಮಮಾತ್ರಕ್ಕೆ ಮುಸ್ಲಿಮನಾಗಿದ್ದಾನೆ.

ಮಹನಿಯರೇ !

ಯುದ್ಧದ ದುಷ್ಪರಿಣಾಮಗಳಿಂದ ರಕ್ಷಿಸಲ್ಪಡಲು ನಮಗೆ ಭಯಭಕ್ತಿಯ ಮಟ್ಟವನ್ನು ಉತ್ತಮಪಡಿಸಬೇಕಾಗಿದೆ. ಅದರತ್ತ ಗಮನ ಸೆಳೆಯುತ್ತಾ ಹುಝೂರ್ (ಅಬಿಅ) 15 ಮಾರ್ಚ್ 2024 ರ ಖುತುಬ ಜುಮುಅದಲ್ಲಿ ಹೇಳುತ್ತಾರೆ.

"ಅಲ್ಲಾಹನು ಯುದ್ಧ ಮತ್ತು ಅದರ ಘೋರ ಪರಿಣಾಮಗಳಿಂದ ರಕ್ಷಿಸುವಂತಾಗಲಿ. ಯುದ್ಧ ಆದಲ್ಲಿ ಅಹ್ಮದಿಯರು ಸಹ ಪ್ರಭಾವಿತರಾಗುವರು. ಅಲ್ಲಾಹನು ಅವರಿಗೆ ರಕ್ಷಿಸುವಂತಾಗಲಿ. ಅದರಿಂದ ರಕ್ಷಿಸಲ್ಪಡಲು ಸಹ ಅಹ್ಮದಿಯರು ತಮ್ಮ ದೇವಭಕ್ತಿಯ ಮಟ್ಟವನ್ನು ಉತ್ತಮಗೊಳಿಸಬೇಕಾಗುವುದು. ಹಝ್ರತ್ ಮಸೀಹ್ ಮೌಊದ್ (ಅ) ಅದನ್ನೇ ಪ್ರತಿಪಾದಿಸಿದ್ದಾರೆ. ಅಲ್ಲಾಹನು ಅದರ ಭಾಗ್ಯವು ನಮಗೆ ದಯಪಾಲಿಸಲಿ."

ಮಹನೀಯರೇ ! ಅಹ್ಮದಿಯರು ಎಷ್ಟು ವಿಶಾಲ ರೀತಿಯ ಸಾಹಸಿಯಾಗಬೇಕೆಂದರೆ ಈ ವಿಶ್ವಯುದ್ಧದ ದುಷ್ಪರಿಣಾಮಗಳಿಂದ ರಕ್ಷಿಸಲ್ಪಡಲು ಕೇವಲ ತಾವು ಮತ್ತು ಸಂಬಂಧದವರಿಗೆ ಮಾತ್ರ ಚಿಂತಿಸುವವರಾಗಬಾರದು. ಬದಲು ಜಮಾಅತ್ ಬಾಂಧವರ ಇದು ಜಾತಿಕ ನೆಲೆಯ ಹೊಣೆಗಾರಿಕೆಯಾಗಿದೆ. ಅವರು ಮಾನವ ಕುಲದ ಉಳಿವಿಗಾಗಿ ಪ್ರಯತ್ನ ಮಾಡುವವರಾಗಬೇಕು. ಈ ಪೈಕಿ ಹುಝೂರ್ ಅನ್ವರ್ ನುಡಿಯುತ್ತಾರೆ.

"ಹುಝೂರ್ ಖುತುಬ ಈದುಲ್ ಫಿತ್ರ್ 2 ಮೇ 2022 ರಲ್ಲಿ ಹೇಳಿದರು.

"ಇಂದು ಲೋಕವು ವಿನಾಶದ ಕಡೆ ಮುಖ ಮಾಡಿದೆ, ಲೋಕವನ್ನು ರಕ್ಷಿಸುವುದು ಸಹ ನಮ್ಮ ಕರ್ತವ್ಯವಾಗಿದೆ. ಇದಕ್ಕೆ ಕಾರಣ ಲೋಕದಲ್ಲಿ ಜನರ ಹಕ್ಕುಗಳನ್ನು ಪಾಲಿಸುವ ಕಡೆ ಗಮನ ನೀಡುತ್ತಿಲ್ಲ. ಲೋಕದಲ್ಲಿ ಜನರ ಹಕ್ಕುಗಳನ್ನು ಪಾಲಿಸವವರಾಗುತ್ತಿದ್ದರೆ ನಾವು ಇರಾಕ್, ಸೀರಿಯಾ, ಅಫ್‌ಗಾನಿಸ್ತಾನ್‌ದಲ್ಲಿ ವಿನಾಶವನ್ನು ಕಾಣುತ್ತಿರಲಿಲ್ಲ. ಪರಮಾಣು ಆಯುಧಗಳನ್ನು ಬಳಸಲಾಗುವುದಿಲ್ಲ ಎಂಬುದು ಸಹ ಒಂದು ಭ್ರಮೆಯಾಗಿದೆ.

ಆದರೆ ಈ ಕುರಿತು ಮಾತುಗಳು ನಡೆದಿವೆ, ಅದಕ್ಕೆ ಯಾವ ಗ್ಯಾರಂಟಿಯೂ ಇಲ್ಲ. ಒಟ್ಟಿನಲ್ಲಿ ಅದರ ಭೀಕರ ಪರಿಣಾಮ ಬೀರಬಹುದು. ಈಗ ಇದು ಅಹ್ಮದಿಯರ ಕರ್ತವ್ಯವಾಗಿದೆ. ಜನರಿಗೆ ಜನರ ಹಕ್ಕುಗಳ ಪಾಲನೆಯ ಬಗ್ಗೆ ಗಮನಸೆಳೆಯಬೇಕು. ಸಾಮಾಜಿಕ ಜಾಲತಾಣದಲ್ಲಿ ವ್ಯರ್ಥ ಮಾತುಕತೆ ಬೆಳೆಸುವುದರ ಬದಲು, ಜನರಿಗೆ ದೇವನತ್ತ ಕರೆ ನೀಡಬೇಕು ಮತ್ತು ದೇವನ ಆಜ್ಞೆಗಳ ಪ್ರಕಾರ ನಡೆದಾಗ ಮಾತ್ರ ಲೋಕದಲ್ಲಿ ಶಾಂತಿ ನೆಲೆಸಬಹುದು ಎಂಬ ಅಂಶ ಮನವರಿಕೆ ಮಾಡಿಕೊಡಬೇಕು. ಇದು ಪ್ರಚಾರಕ್ಕಾಗಿ ಹೊಸ ಮಾರ್ಗಗಳನ್ನು ತೆರೆದಂತಾಗುವುದು. (ಖುತ್ಬ ಈದಲ್ ಫಿತರ್ 2 ಮೇ 2022)

ಸಯ್ಯದನಾ ಹುಝೂರ್ ಅನ್ವರ್ (ಅಬಿಅ) ಅಹ್ಮದಿ ವೈದ್ಯರ ಸಂಘವನ್ನು ಉದ್ದೇಶಿಸಿ ಮತನಾಡುತ್ತಾ ಹೇಳುತ್ತಾರೆ. "ನಾವು ಎಂತಹ ಪ್ರಕ್ಷುಬ್ಧ ಕಾಲದಲ್ಲಿ ಜೀವಿಸುತ್ತಿದ್ದೇವೆ ಎಂದರೆ, ಯುದ್ಧಗಳ ಭೀಕರ ಕಾರ್ಮೋಡಗಳು ನಿರಂತರವಾಗಿ ನಮ್ಮ ತಲೆಗಳ ಮೇಲೆ ಹಾರಾಡುತ್ತಿವೆ. ವಿವಿಧ ದೇಶದ ಮಧ್ಯೆ ಸಮಸ್ಯೆಗಳು ಎಷ್ಟೊಂದು ಜಟಿಲಗೊಳ್ಳುತ್ತಿವೆ ಎಂದರೆ ವಿಶ್ವಯುದ್ದದ ಬೆಂಕಿ ಬಾಯಿ ತೆರೆದು ನಿಂತಿದೆ. ಅಲ್ಲಾಹನು ಅದರಿಂದ ಎಲ್ಲರಿಗೂ ರಕ್ಷಿಸುವಂತಾಗಲಿ. ಈ ಯುದ್ಧದಿಂದ ರಕ್ಷಿಸಲ್ಪಡಲು ದುಆ ಜೊತೆಯಲ್ಲಿ ನಾವು ಮಾನವೀಯತೆಯ ಉಳಿವಿಗಾಗಿ ಯುದ್ಧವನ್ನು ತಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ನಾನು ಅಮೇರಿಕಾ ಮತ್ತು ಉಳಿದ ಎಲ್ಲಾ ಸಂಘಟನೆಗಳೊಡನೆ ಹತೋಟಿಗೆ ತರಲು ಉಪಯುಕ್ತ ಯೋಜನೆಗಳನ್ನು ಹಾಕಿಕೊಳ್ಳಬೇಕು." (ಅಲ್‌ಫಝ್ಲ್ 21 ನವೆಂಬರ್ 2024).

ಸಯ್ಯದನಾ ಹುಝೂರ್ ಅನ್ವರ್(ಅಬಿಅ) ನನ್ನ ಖುತುಬ ಜುಮುಅ 3 ಮೇ 2024 ರಲ್ಲಿ ವಿಶ್ವಯುದ್ಧದ ದುಷ್ಪರಿಣಾಮಗಳಿಂದ ರಕ್ಷಿಸಲ್ಪಡಲು ಅಹಂಕಾರದಿಂದ ದೂರವಾಗುವ ಕಡೆ ಗಮನಸೆಳೆಯುತ್ತಾ ಹೇಳುತ್ತಾರೆ.

"ಒಟ್ಟಿನಲ್ಲಿ ಈ ಪರಿಸ್ಥಿತಿಗಳು ಅಹಂಕಾರಿಗಳ ಅಹಂಕಾರವನ್ನು ಮಟ್ಟ ಹಾಕುವ ಸಾಧನಗಳು ಸಹ ಹುಟ್ಟಿ ಹಾಕಿವೆ. ಅಲ್ಲಾಹನು ಸಹ ಅವರ ಅಹಂಕಾರವನ್ನು ಮುರಿಯಲು ಅದಕ್ಕೆ ತಕ್ಕುದಾದ ಕಾರ್ಯವಾಹಿ ತಯಾರಿಸಿದಂತೆ ಭಾಸವಾಗುತ್ತದೆ. ಯಾವಾಗ ಈ ಕಾರ್ಯ ಸಂಪೂರ್ಣವಾಗಿ ಕಾರ್ಯಕ್ಕೆ ಬರುವುದೋ ಅಲ್ಲಾಹನೆ ಬಲ್ಲನು, ಅಂತೂ ಅವರ ಅಹಂಕಾರ ಮುರಿಯುವ ಲಕ್ಷಣಗಳು ಪ್ರಾರಂಭವಾಗಿವೆ. ಅಲ್ಲಾಹನು ಲೋಕದ ದೊಡ್ಡ ಶಕ್ತಿಗಳಿಗೆ ಸದ್ಬುದ್ಧಿಯನ್ನು ದಯಪಾಲಿಸಲಿ ಮತ್ತು ನ್ಯಾಯದಿಂದ ವರ್ತಿಸುವಂತೆ ದಯಪಾಲಿಸಲಿ.

ಮಹನಿಯರೇ! ಇಂದು ಪ್ರಪಂಚವು ಮೂರನೇ ವಿಶ್ವಯುದ್ಧದ ಬಾಗಿಲಿಗೆ ಬಂದು ನಿಂತಿದೆ, ಅದರ ಮುಖ್ಯ ಕಾರಣ ನ್ಯಾಯ ನೀತಿ ಇಲ್ಲದ್ದಾಗಿದೆ. ಸಯ್ಯದನಾ ಹುಝೂರ್ ಅನ್ವರ್ (ಅಬಿಅ) ಪ್ರಪಂಚದ ದೊಡ್ಡ ದೊಡ್ಡ ಸಂಸತ್‌ಗಳಿಗೆ ಹೋಗಿ ಅವರ ಗಮನ ಸೆಳೆದರು. ಎಲ್ಲಿಯವರೆಗೆ ನ್ಯಾಯ ಪಾಲಿಸುವುದಿಲ್ಲವೋ ಲೋಕದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ ಅದರ ಪ್ರಥಮ ಹೊಣೆಗಾರರು ಜಮಾಅತ್ ಬಾಂಧವರಾಗಿದ್ದಾರೆ. ಜಮಾಅತ್ ಬಾಂಧವರು ಸಹ ಎಲ್ಲಾ ಸ್ತರಗಳಲ್ಲಿ ನ್ಯಾಯ ಸಮಾನತೆ ಸ್ಥಾಪಿಸಲು ಆದ್ಯತೆ ನೀಡಬೇಕ, ತಮ್ಮ ಲೌಕಿಕ ಕಾರ್ಯಗಳಲ್ಲೂ ಹಾಗೂ ಧರ್ಮದ ವಿಷಯದಲ್ಲೂ, ನ್ಯಾಯಪರತೆ ಇದ್ದಾಗ ಮಾತ್ರ ಲೋಕದಲ್ಲಿ ಶಾಂತಿ ನೆಲೆಸಲು ಸಾಧ್ಯ. ಈ ನ್ಯಾಯ ಸಮಾನತೆ ನಮ್ಮ ನಡೆ ನುಡಿಗಳಲ್ಲಿ ಹೊಕ್ಕಿದಾಗ ಮಾತ್ರ ನಾವು ಈ ಯುದ್ಧದ ದುಷ್ಪರಿಣಾಮಗಳಿಂದ ಉಳಿಯಲು ಸಾಧ್ಯ.

ಹುಝೂರ್ ಅನ್ವರ್ (ಅಬಿಅ) ವಿಶ್ವಯುದ್ಧದಿಂದ ಬೀರುವ ದುಷ್ಪರಿಣಾಮಗಳಿಂದ ಸುರಕ್ಷಿತವಾಗಿರಲು ಮತ್ತು ಪರಮಾಣು ಉಷ್ಣದಿಂದ ಉಳಿಯಲು ಹೋಮಿಯೋಪಥಿ ಔಷಧಿಗಳನ್ನು ಸಹ ತೆಗೆದುಕೊಳ್ಳಲು ಸಲಹೆಯನ್ನು ನೀಡಿದ್ದಾರೆ. ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ಪ್ರೀತಿಪೂರ್ವಕವಾಗಿ ರಕ್ಷಣಾತ್ಮಕ ದೃಷ್ಟಿಯಿಂದ Rodium Brom ಮತ್ತು Carcinosim ಹೋಮಿಯೋಪಥಿ ಔಷಧ ಒಂದು ವಿಶಿಷ್ಟ ರೀತಿಯಲ್ಲಿ ಬಳಕೆ ಮಾಡಲು ಸಲಹೆಯನ್ನು ನೀಡಿದ್ದಾರೆ. ಹಾಗೆಯೇ ಅಲ್ಲಾಹನು ಎಲ್ಲರನ್ನೂ ತನ್ನ ಕರುಣೆಯಿಂದ ಸುರಕ್ಷಿತವಾಗಿರುವಂತೆ ದಯಪಾಲಿಸಲು ಪ್ರಾರ್ಥಿಸಲು ಸಹ ಮನವಿ ಮಾಡಿದ್ದಾರೆ.

ಸಯ್ಯದನಾ ಹುಝೂರ್ ಅನ್ವರ್ (ಅಬಿಅ) ಖುತುಬ ಜುಮುಅ 22 ನವೆಂಬರ್ 2024 ರಲ್ಲಿ ಯುದ್ಧ ಪರಿಸ್ಥಿತಿಗಳ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡುತ್ತಾ ಹೇಳುತ್ತಾರೆ.

"ಈ ಸಮಯ ನಾನು ಹೇಳಬಯಸುವುದೇನೆಂದರೆ, ಇದು ಎಲ್ಲರಿಗೂ ತಿಳಿದ ವಿಷಯವೂ ಆಗಿದೆ, ಯೂರೋಪಿನಲ್ಲಿ ಪರಿಸ್ತಿತಿಗಳು ಬಹು ವೇಗಗತಿಯಲ್ಲಿ ಯುದ್ಧ ಕಡೆ ಹೋಗುತ್ತಿದೆ, ಯುಕ್ರೇನ್ ಮತ್ತು ರಷ್ಯಾದ ಯುದ್ಧವು ಹರಡುವ ಅಪಾಯ ತಲೆದೋರಿದೆ. ಯೂರೋಪಿನ ಉಳಿದ ದೇಶಗಳು ಹೆದರಿಸುತ್ತಿದ್ದಾರೆ. ಬುದ್ಧಿವಂತ ಹಾಗೂ ಶಾಂತಿಪ್ರಿಯ ಜನರು ಈ ಬಗ್ಗೆ ಗಾಬರಿಗೊಂಡಿರುತ್ತಾರೆ. ಒಟ್ಟಿನಲ್ಲಿ ಪ್ರಾರ್ಥಿಸಿರಿ. ಅಲ್ಲಾಹನು ಅಹ್ಮದಿಯರಿಗೆ ಮತ್ತು ಶಾಂತಿಪ್ರಿಯ ಜನರಿಗೆ ಯುದ್ಧದ ದುಷ್ಪರಿಣಾಮಗಳಿಂದ ಸುರಕ್ಷಿತವಾಗಿರುವಂತೆ ದಯಪಾಲಿಸಲಿ ಮತ್ತು ಈ ಜನರು ಬರುವ ಪೀಳಿಗೆಗೆ ಪ್ರಭಾವಿತರಾಗುವ ರೀತಿಯಲ್ಲಿ ಯುದ್ಧದ ಆಯುಧಗಳನ್ನುಬಳಸದಿರಲಿ. ಮುಸ್ಲಿಂ ರಾಷ್ಟ್ರಗಳಿಗಾಗಿಯೂ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಸದ್ಬುದ್ಧಿ ಹಾಗೂ ತಿಳುವಳಿಕೆ ನೀಡುವಂತಾಗಲಿ, "ಸತ್ಯವನ್ನು ಅರಿಯುವ ಭಾಗ್ಯ ದೊರೆಯುವಂತಾಗಲಿ, ಎರಡನೆಯದಾಗಿ ಗಮನ ಸೆಳೆಯುವ ವಿಷಯವೇನೆಂದರೆ ಪರಿಸ್ಥಿತಿಗಳು ದಿನೇ ದಿನೇ ಹದಗೆಡುತ್ತಿವೆ, ಈ ಬಗ್ಗೆ ಜನರಿಗೆ ಮೊದಲೇ ತಿಳಿಸಿರುತ್ತೇವೆ. ಆದರೆ ಮತ್ತೊಮ್ಮೆ ನೆನಪಿಗೆ ತರಬಯಸುತ್ತೇನೆ, ಅದೇನೆಂದರೆ ಮನೆಗಳಲ್ಲಿ ಎರಡು ಮೂರು ತಿಂಗಳುಗಳ Ration ಕಾಯ್ದಿರಿಸುವ ಪ್ರಯತ್ನ ಮಾಡಿ. ಆದರೆ ಮುಖ್ಯವದ ವಿಷಯವೇನೆಂದರೆ ಅಲ್ಲಾಹನ ಸಾಮೀಪ್ಯ ಗಳಿಸುವ ಮತ್ತು ಅವನ "ಸಂತೃಪ್ತಿ ಪಡೆಯಲು ಪ್ರಯತ್ನಿಸಬೇಕು, ಅವನೊಂದಿಗೆ ಸಂಬಂಧ ದೃಢಪಡಿಸಲು ಪ್ರಯತ್ನಿಸಬೇಕು. ಅಲ್ಲಾಹನು ನಮಗೆ ಈ ಭಾಗ್ಯ ದಯಪಾಲಿಸಲಿ. ಆಮೀನ್.

ಮಹನೀಯರೇ !

ಲೋಕವು ಬೆಂಕಿಯ ಬಾಗಿಲಿಗೆ ಬಂದು ನಿಂತಿದೆ. ಇಂತಹ ಸಮಯದಲ್ಲಿ ಹುಝೂರ್ ಅನ್ವರ್ (ಅಬಿಅ) ನಮಗೆ ಅದರ ದುಷ್ಪರಿಣಾಮಗಳಿಂದ ರಕ್ಷಿಸಿಕೊಳ್ಳಲು ತಮ್ಮ ಆಚಾರದ ಮೂಲಕ ಇಸ್ಲಾಮಿನ ಪ್ರಚಾರ ಮಾಡಲು ಗಮನ ಸೆಳೆಯುತ್ತಿದ್ದಾರೆ. ಇದರಿಂದ ವಿಶ್ವಯುದ್ಧದ ನಂತರ ಒಂದು ಸ್ವರ್ಗಮಯ ಸಮಾಜ ಸ್ಥಾಪನೆ ಸಾಧ್ಯವಾಗಬೇಕು ಮತ್ತು ಅಹ್ಮದಿಯರು ಅವರಿಗೆ ಮಾರ್ಗದರ್ಶಕರಾಗಿರಬೇಕು.

ಹುಝೂರ್ ಹೇಳುತ್ತಾರೆ:

ಇಂದಿನ ದಿನಗಳಲ್ಲಿ ಇಸ್ಲಾಮಿಕ ವಿರುದ್ಧ, ಮುಸಲ್ಮಾನರ ವಿರುದ್ಧ ಹಲವು ರೀತಿಯ ಮಾತುಗಳನ್ನು ಆಡುತ್ತಿದ್ದಾರೆ. ಆದರೆ ನಮ್ಮ ವಾತಾವರಣದಲ್ಲಿ ಪ್ರೀತಿ, ಸ್ನೇಹ ಮತ್ತು ಸಹೋದರತ್ವ ನೋಡುವವರಾದರೆ ಮತ್ತು ನಮ್ಮ ಉತ್ತಮ ನಡತೆ ನೋಡುವವನರಾದರೆ, ಅಲ್ಲಾಹನೊಂದಿಗೆ ನಮ್ಮ ಸಂಬಂಧ ನೋಡುವವರಾದರೆ, ಅವರ ತಲೆಗಳಿಂದ ಅವರಲ್ಲಿರುವ ತಪ್ಪು ಕಲ್ಪನೆಗಳು, ಅನುಮಾನಗಳು ದೂರವಾಗುವುವು, ಮುಸಲ್ಮಾನರು ತಪ್ಪು ನಡವಳಿಕೆ ಹೊಂದಿದವರಾಗಿದ್ದಾರೆ ಎಂಬುವ, ತಪ್ಪು ಬೋಧನೆಗಳಿರುವ ಅನುಮಾನಗಳು ದೂರವಾಗುವುವು. ಆದ್ದರಿಂದ ತನ್ನ ನಡೆನುಡಿಗಳಿಂದ ತನ್ನ ಪರಿಸರವನ್ನು ಶಾಂತಿಮಯವಾಗಿ ಸೃಷ್ಟಿಸಿಕೊಳ್ಳಿ. ಅಷ್ಟೇ ಅಲ್ಲ. ತಮ್ಮ ಜೀವನದಲ್ಲಿ ಶಾಶ್ವತವಾಗಿ ಇಂತಹ ಆಚಾರಗಳನ್ನು ಹಮ್ಮಿಕೊಳ್ಳಿರಿ. ಅದರಿಂದ ಅವರ ಮೇಲೆ ಇಂತಹ ಪ್ರಭಾವ ಬೀರುವಂತಾಗಬೇಕು, ಜನರು ಹೇಳುವಂತಾಗಬೇಕು, ಇವರೇ ಇಸ್ಲಾಮಿನ ನಿಜವಾದ ಬೋಧನೆಗಳ ಮೇಲೆ ನಡೆಯುವವರಾಗಿದ್ದಾರೆ. ಇಸ್ಲಾಮಿನ ನಿಜವಾದ ಶಿಕ್ಷಣ ಮಾತ್ರ ಶಾಂತಿ ಮತ್ತು ಪ್ರೀತಿ ನೀಡಬಲ್ಲದು. ಆದ್ದರಿಂದ ಇದು ಮೌನಪ್ರಚಾರವು ಆಗಿದೆ. ಇದು ಯಾವುದೇ ಸಾಹಿತ್ಯವಿಲ್ಲದೆ, ಯಾವುದೇ ಸಾಕ್ಷ್ಯ ನೀಡದೆ, ಜನರಿಗೆ ತಲುಪುವವರಾಗುವಿರಿ. ನಾವು ನಮ್ಮ ಜೀವನಗಳನ್ನು ಇಸ್ಲಾಮಿನ ನಿಜವಾದ ಶಿಕ್ಷಣದಂತೆ ಪರಿವರ್ತಿಸಿಕೊಂಡರೆ ನಮ್ಮ ಪ್ರತಿಜ್ಞೆಯನ್ನು ಪಾಲಿಸುವವರಾಗುವೆವು. ಹಝ್ರತ್ ಮಸೀಹ್ ಮೌಊದ್ (ಅ) ರವರ ಬೈಅತ್ ನಾವು ಧರ್ಮವನ್ನು ಲೋಕಕಾರ್ಯಗಳ ಮೇಲೆ ಆದ್ಯತೆ ನೀಡುವವರಾದಾಗ ಮಾತ್ರ ಫಲ ನೀಡುವುದು. ಕೇವಲ ಟೊಳ್ಳು ಘೋಷಣೆಗಳಿಂದ ಏನೂ ಸಾಧ್ಯವಿಲ್ಲ.

(ಖುತ್‌ಬ ಜುಮುಅ 23, ಆಗಸ್ಟ್ 2024).

ಹುಝೂರ್ ಮತ್ತು ನುಡಿಯುತ್ತಾರೆ.

"ಆದ್ದರಿಂದ ಈ ಉದ್ದೇಶವನ್ನು ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾಗಿದೆ. ಪವಿತ್ರ ಪ್ರವಾದಿ (ಸ) ಹೇಳಿದರು. ನೀವು ನಿಮಗಾಗಿ ಏನು ಇಷ್ಟಪಡುತ್ತೀರಿ, ಅದನ್ನೇ ಇತರರಿಗಾಗಿ ಇಷ್ಟಪಡುವವರಾಗಿರಿ, ಈ ಬೋಧನೆಯ ಪ್ರಕಾರ ಪ್ರೀತಿ ಮತ್ತು ಶಾಂತಿ ಮತ್ತು ಸೌಹಾರ್ಧನತೆಯ ಸಂದೇಶವಾಗುವ ಈ ಉಪದೇಶವನ್ನು ಜಗತ್ತಿಗೆ ಹರಡುವುದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ. ಇಲ್ಲದಿದ್ದರೆ ಮುಂದಿನ ಪೀಳಿಗೆಗಳು ವಿನಾಶದ ಕೂಪಕ್ಕೆ ಬೀಳುವುದು. ಈ ಯುದ್ಧಗಳಿಂದಾಗಿ ಭವಿಷ್ಯದ ಪೀಳಿಗೆಗಳು ಅಪಾಂಗಳಾಗಿ ಹುಟ್ಟಿದರೆ ಆಶ್ಚರ್ಯವೇನಿಲ್ಲ. (18 ಅಕ್ಟೋಬರ್ 2024).

ಮಹನೀಯರೇ! ಸಯ್ಯದನಾ ಅಖದಸ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ಪ್ರಾರ್ಥನೆಗಳ ಮೇಲೆ ವಿಶ್ವಾಸ ಹೊಂದಿರುವ ಆ ವ್ಯಕ್ತಿ ತುಂಬಾ ಅದೃಷ್ಟವಂತನಾಗಿದ್ದಾನೆ. ಏಕೆಂದರೆ ಅವನು ಅಲ್ಲಾಹನ ಅದ್ಭುತ ಶಕ್ತಿಗಳನ್ನು ನೋಡುವವನಾಗುತ್ತಾನೆ ಮತ್ತು ಅಲ್ಲಾಹನ ಸರ್ವಶಕ್ತಿಯ ಪವಾಡವನ್ನು ಅನುಭವಿಸಿ ನಂಬಿಕೆ ಹೊಂದುವವನಾಗುತ್ತಾನೆ.

(ಮಲ್ಫೂಝಾತ್ ಸಂಪುಟ 7 ಪುಟ 265-266)

ಸಯ್ಯದನಾ ಹುಝೂರ್ ಅನ್ವರ್ (ಅಬಿಅ) ಮೂರನೇ ವಿಶ್ವಯುದ್ಧದ ದುಷ್ಪರಿಣಾಮಗಳಿಂದ ರಕ್ಷಿಸಲ್ಪಡಲು ಯಾವಾಗಲೂ ಜಮಾಅತ್ ಸದಸ್ಯರಿಗೆ ಪ್ರಾರ್ಥಿಸಲುಒತ್ತನ್ನು ನೀಡಿದ್ದಾರೆ. ಹುಝೂರ್ ಅನ್ವರ್ ಅವರ ಯಾವ ಖುತುಬ, ಯಾವ ಭಾಷಣ ಇದಕ್ಕೆ ಹೊರತಾಗಿಲ್ಲ.

ಹುಝೂರ್ ಅನ್ವರ್ (ಅಬಿಅ) ನುಡಿದರು.

"ಯುದ್ಧಗಳ ಬೆಂಕಿಯಿಂದ ಸುರಕ್ಷಿತವಾಗಿರಲು ಮತ್ತು ಅದರ ಪರಿಣಾಮಗಳಿಂದ ಸುರಕ್ಷಿತವಾಗಿರಲು ಬಹಳ ಪ್ರಾರ್ಥಿಸುತ್ತಿರಬೇಕು. ಅಲ್ಲಾಹನು ನಮಗೆ ಅದರಿಂದ ಅಲ್ಲಾಹನು ನಮಗೆ ಅದರಿಂದ ರಕ್ಷಿಸುವಂತಾಗಲಿ. ಈಗ ಯುದ್ಧ ನಮ್ಮ ಮುಂದೆ ಬಂದು ನಿಂತಹಾಗೆ ಭಾಸವಾಗುತ್ತಿದೆ, ಈಗಲೂ ಪ್ರಾರಂಭ ಆಗಿಯೇ ಬಿಟ್ಟಿದೆ. ಆದ್ದರಿಂದ ಅಹ್ಮದಿಯರಿಗೆ ತಮ್ಮನ್ನು ತಾವು ಅಲ್ಲಾಹನ ಸಾಮೀಪ್ಯ ಹೊಂದಲು ಮತ್ತು ತಮ್ಮ ಪ್ರಾರ್ಥನೆಗಳಲ್ಲಿ ಕಳವಳ ಹೊಂದುವ ಅಗತ್ಯವಿದೆ. ಆಗ ನಾವು ಅದರ ದುಷ್ಟತೆಯಿಂದ ಉಳಿಯಬಹುದು. ಮಾನವೀಯತೆಯ ಉಳಿಯುವಿಕೆಗಾಗಿ ಮತ್ತು ತಮ್ಮ ಹಕ್ಕುಗಳನ್ನು ಪಾಲಿಸುವ ಸಲುವಾಗಿ ಪ್ರಾರ್ಥಿಸಬೇಕಾಗಿದೆ. ಅಲ್ಲಾಹನು ನಮಗೆ ಈ ಭಾಗ್ಯ ದಯಪಾಲಿಸಲಿ.

ಜಲ್ಸಾ ಸಾಲಾನ ಜರ್ಮನಿ 2024 ರ ಸಂದರ್ಭದಲ್ಲಿ ಸಯ್ಯದನಾ ಹುಝೂರ್ ಅನ್ವರ್ (ಅಬಿಅ) ವಿಶೇಷ ರೀತಿಯಲ್ಲಿ ಪ್ರಾರ್ಥಿಸಲು ಒತ್ತು ನೀಡಿದ್ದಾರೆ. ಅದನ್ನು ಪಾಲಿಸುವ ಪರಿಣಾಮವಾಗಿ ಮನುಷ್ಯನು ಒಂದು ಸುರಕ್ಷಿತ ಕೋಟೆಯಲ್ಲಿದ್ದು ತನ್ನನ್ನು ತಾನು ಸುರಕ್ಷಿಸಿಕೊಳ್ಳಬಹುದು. ಹುಝೂರ್ ಅನ್ವರ್ ಹೇಳಿದರು." ನಾನು ಈಗ ಒಂದು ಮಾತಿನ ಕಡೆಯು ನಿಮಗೆ ಕರೆಯನ್ನು ನೀಡಬಯಸುತ್ತೇನೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ (ರಹ) ಅವರ ಒಂದು ದಿವ್ಯ ಸ್ವಪ್ನವಿತ್ತು. ಅವರಿಗೆ ಓರ್ವ ಸಜ್ಜನರು ಹೇಳಿದರು. "ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ, ಹಿರಿಯನು ಎರಡೂ ನೂರು ಬಾರಿ ಈ ದುರೂದ್ ಶರೀಫ್ ಪಠಿಸಬೇಕು.

**ಸುಬ್‌ಹಾನಲ್ಲಾಹಿ ವ ಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ಲಝೀಮ್ ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್** ಮತು ಅವರು ನುಡಿದರು. ಮಧ್ಯೆ ವಯಸ್ಸಿನವರು ಅಂದರೆ 15 ರಿಂದ 25 ವರ್ಷದವರು

ಕನಿಷ್ಠ 100 ಬಾರಿ ಪಠಿಸಬೇಕು. ಮಕ್ಕಳು ಸಹ ಕನಿಷ್ಠ 33 ಬಾರಿ ಪಠಿಸಬೇಕು. ಅತಿ ಸಣ್ಣ ಮಕ್ಕಳಿಗೆ ಅವರ ತಂದೆ-ತಾಯಿಯರು ಅವರಿಗೆ 3,4 ಬಾರಿ ಇದನ್ನು ಪಠಿಸುವಂತೆ ಹೇಳಿಕೊಡಬೇಕು. ಅದರ ಜೊತೆಯಲ್ಲಿ 100 ಬಾರಿ. **ಅಸ್‌ತಗ್‌ಫಿರುಲ್ಲಾಹಿ ರಬ್ಬಿ ಮಿನ್ ಕುಲ್ಲಿ ಝುಂಬಿನ್ ವಅತುಬ್ಬು ಇಲೈಹಿ** ಸಹ ಪಠಿಸಬೇಕು. ಅದೇ ರೀತಿಯಲ್ಲಿ ನಾನು 100 ಬಾರಿ ಪಠಿಸಲು ಸೇರಿಸುತ್ತಿದ್ದೇವೆ. **ರಬ್ಬಿ ಕುಲ್ಲು ಶೈಯಿನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ**. ಇಂದಿನ ದಿನಗಳಲ್ಲಿ ವಿಶೇಷವಾಗಿ ಮತ್ತು ಸಾಮಾನ್ಯವಾಗಿ ಯಾವಾಗಲೂ ಇದನ್ನು ಪಠಿಸುತ್ತಿರಬೇಕು. ಅವರಿಗೆ (ರಹ) ದಿವ್ಯ ಸ್ವಪ್ನದಲ್ಲಿ ಇದನ್ನೇ ತೋರಿಸಲಾಗಿತ್ತು. ಇದನ್ನು ಆಚರಣೆಗೆ ತಂದರೆ ನೀವು ಒಂದು ಸುರಕ್ಷಿತ ಕೋಟೆಯಲ್ಲಿ ಸುರಕ್ಷಿತವಾಗಿರುವಿರಿ. ಅಲ್ಲಿ ಶೈತಾನನು ಪ್ರವೇಶ ಮಾಡಲಾರನು, ಅದು ಕಬ್ಬಿಣದ ಗೋಡೆಗಳಾಗಿವೆ. ಈ ಕೋಟೆಯ ಗೋಡೆಗಳು ಆಕಾಶದವರೆಗೆ ತಲುಪಿವೆ. ಆದ್ದರಿಂದ ಶೈತಾನನು ಆಕ್ರಮಣ ಮಾಡಲು ಸಾಧ್ಯವಾಗುವಂತಹ ಯಾವ ರಂಧ್ರವು ಇರಲಾರದು.
(ಆಧಾರ ವರದಿ ಮಜ್ಲಿಸ್ ಮಶಾವರತ್ ಜಮಾಅತ್ ಅಹ್ಮದಿಯಾ 1968, 5,6,7 ಏಪ್ರಿಲ್ 1968 ಪುಟ 233)

ಇಂದಿನ ದಿನಗಳಲ್ಲಿ ಶೈತಾನನು ಎಲ್ಲಾ ರೀತಿಯಿಂದಲೂ ನಮ್ಮ ಮೇಲೆ ಜಮಾಅತಿನ ನೆಲೆಯಲ್ಲೂ, ಸಾಮೂಹಿಕ ರೀತಿಯಲ್ಲೂ, ಸಾಮಾನ್ಯವಾಗಿ ಪ್ರಪಂಚದ ಮೇಲೂ ಆಕ್ರಮಣ ಮಾಡುವ ಪ್ರಯತ್ನದಲ್ಲಿದ್ದಾನೆ. ಇದರಿಂದ ರಕ್ಷಿಸಲ್ಪಡಲು ಇರುವ ಏಕೈಕ ಮಾರ್ಗ ಎಂದರೆ ಅದು ವಿಶೇಷ ರೀತಿಯಲ್ಲಿ ಪ್ರಾರ್ಥನೆಯ ಕುರಿತು ಹೆಚ್ಚು ಒಲವು ನೀಡಬೇಕಾಗಿದೆ. ಕೇವಲ ಜಲ್ಸದ ದಿನಗಳಲ್ಲಿ ಮಾತ್ರವಲ್ಲ, ಬದಲು ಶಾಶ್ವತ ರೀತಿಯಲ್ಲಿ ಈ ದೂರೂದ್ ಶರೀಫ್ ಮತ್ತು ದಿಕ್ರೆ ಇಲಾಹಿ (ದೇವಸ್ಮರಣೆ) ಯನ್ನು ತನ್ನ ಜೀವನದ ಒಂದು ಅಂಗವನ್ನಾಗಿ ಮಾಡಿಕೊಳ್ಳಬೇಕಾಗಿದೆ. ಇದರ ಮೇಲೆ ಎಲ್ಲರಿಗೂ, ಮಕ್ಕಳಾಗಲಿ, ಹಿರಿಯರಾಗಲಿ, ಮಹಿಳೆಯರಿಗಾಗಲಿ, ಪುರಷರಿಗಾಗಲಿ, ಎಲ್ಲರೂ ಗಮನಹರಿಸಬೇಕಾಗಿದೆ. (4 ಅಕ್ಟೋಬರ್ 2024)

ಮಹನಿಯರೇ ! ಈ ಜಗತ್ತು ವಿನಾಶದ ಕಡೆ ಧಾವಿಸಲು ಒಂದು ಮುಖ್ಯ ಕಾರಣ ಅಂತಿಮ ಕಾಲಘಟ್ಟದ ಇಮಾಮರಾದ ಹಝ್‌ರತ್ ಅಖದಸ್ ಮಸೀಹ್ ಮೌಊದ್ (ಅ)ರವರನ್ನು ಧಿಕ್ಕರಿಸುವುದಾಗಿದೆ. ಆದ್ದರಿಂದ ಜನರಿಗೆ ಹಝ್‌ರತ್ ಮಸೀಹ್ ಮೌಊದ್ (ಅ) ರವರ ಬೈಅತ್ ಮಾಡಲು ಆಹ್ವಾನಿಸುವ ಅಗತ್ಯವಿದೆ. ಈ ಇಟ್ಟಿನಲ್ಲಿ ಹುಝೂರ್ ಅನ್ವರ್ ಹೇಳುತ್ತಾರೆ.

"ಲೋಕದಲ್ಲಿ ಮುಸಲ್ಮಾನರ ಸಾಮಾನ್ಯ ಸ್ಥಿತಿಗತಿಗೋಸ್ಕರವು ಪ್ರಾರ್ಥಿಸಿರಿ. ಈ ಜನರು ಸಹ ಕಾಲಘಟ್ಟದ ಇಮಾಮರನ್ನು ನಂಬಿ ತಮ್ಮ ಗೌರವವು ಪುನಃ ಪಡೆಯುವಂತಾಗಬೇಕು. ಲೋಕದಲ್ಲಿ ಯುದ್ಧಕ್ಕಾಗಿ ನೆಲೆಸುತ್ತಿರುವ ಸಾಮಾನ್ಯ ಸ್ಥಿತಿಯ ಕುರಿತು ಪ್ರಾರ್ಥಿಸಬೇಕಾಗಿದೆ. ಲೋಕವು ಹೊರಟಿರುವ ಮಾರ್ಗವನ್ನು ನೋಡಿದರೆ ಯುದ್ಧವಾಗುವುದು ನಿಶ್ಚಿತ ಎನಿಸುತ್ತದೆ. ಅಂತೂ ಅಲ್ಲಾಹನು ಎಲ್ಲಾ ಅಹ್ಮದಿಯರಿಗೂ ಮತ್ತು ಎಲ್ಲಾ ಮುಗ್ಧರನ್ನು ಇದರ ಕೆಡಕುಗಳಿಂದ ರಕ್ಷಿಸುವಂತಾಗಲಿ." (ಖುತುಬ ಜುಮುಅ 28 ಜೂನ್ 2024).

ಕೊನೆಯಲ್ಲಿ ಹುಝೂರ್ ಅನ್ವರ್ (ಅಬಿಅ) ರವರ ನುಡಿಗಳ ಮೇಲೆಯೇ ನಮ್ಮ ಭಾಷಣವನ್ನು ಮುಕ್ತಾಯಗೊಳಿಸಬಯಸುತ್ತೇನೆ.

ಲೋಕವು ಅತ್ಯಂತ ಭೀಕರ ವಿನಾಶದ ಕಡೆ ವೇಗವಾಗಿ ಹೋಗುತ್ತಿದೆ. ಮುಸಲ್ಮಾನರಲ್ಲೂ ನ್ಯಾಯ ಉಳಿಯಲಿಲ್ಲ, ಮುಸ್ಲಿಮೇತರರಲ್ಲೂ ನ್ಯಾಯ ಉಳಿಯಲಿಲ್ಲ, ಕೇವಲ ನ್ಯಾಯ ಮಾತ್ರವಲ್ಲ, ಬದಲು ಹಿಂಸೆಯ ಮಿತಿಮೀರಿ ಬೆಳೆಯುತ್ತಿದೆ. ಆದ್ದರಿಂದ ಇಂತಹ ಸಮಯದಲ್ಲಿ ಲೋಕಕ್ಕೆ ತಮ್ಮ ಕಣ್ಣುಗಳನ್ನು ತೆರೆಯುವ ಮತ್ತು ಹಿಂಸೆಯಿಂದ ದೂರವಾಗುವ ಬಗ್ಗೆ ಗಮನ ಸೆಳೆದು ವಿನಾಶದ ರೂಪದಲ್ಲಿ ಬೀಳುವುದರಿಂದ ರಕ್ಷಿಸುವ ಪಾತ್ರ ಕೇವಲ ಅಹ್ಮದಿಯಾ ಜಮಾಅತ್ ನಿರ್ವಹಿಸಬಲ್ಲದು. ಅದಕ್ಕಾಗಿ ನಮ್ಮ ಪೈಕಿ ಎಲ್ಲರಿಗೂ ಎಲ್ಲಿ ತಮ್ಮ ತಮ್ಮ ನೆಲೆಯಲ್ಲಿ ತಮ್ಮ ನಡತೆಗಳಿಂದ ಪ್ರಯತ್ನಪಡಬೇಕಾಗಿದೆ, ಅಲ್ಲಿ ದರ ಜೊತೆಯಲ್ಲೇ ನಮಗೆ ಪ್ರಾರ್ಥನೆಯ ಕಡೆಗೂ ಹೆಚ್ಚು ಗಮನಹರಿಸುವ ಅಗತ್ಯವಿದೆ. ಮುಸಲ್ಮಾನ ರಾಷ್ಟ್ರಗಳ ಅನ್ಯಾಯಗಳು ಮತ್ತು ಅವರ ಪಾಪಕೃತ್ಯಗಳು ಅವರನ್ನು ಆಂತರಿಕವಾಗಿ ಭಿನ್ನಭಿನ್ನವಾಗಿಸಿಬಿಟ್ಟಿದೆ. ಅಂತೆಯೇ ಬಾಹ್ಯ ಅಪಾಯಗಳು ಸಹ ಬಹುವೇಗವಾಗಿ ಅವರ ಮೇಲೆ ತೂರಾಡುತ್ತಿವೆ. ಅವರ ಬಾಗಿಲುವರೆಗೆ ತಲುಪಿದೆ ಎಂದರು ತಪ್ಪಾಗಲಿಕ್ಕಿಲ್ಲ. ಭೀಕರ ಯುದ್ಧವು ಬಾಯಿ ತೆರೆದು ನಿಂತಿದೆ, ಲೋಕವು ಅದರ ಪರಿಣಾಮಗಳಿಂದ ತಿಳಿಯದೆ ಇದೆ ಎಂಬುದೇನಿಲ್ಲ, ಆದರೆ ಅದರಿಂದ ಉಪೇಕ್ಷೆಯಲ್ಲಿರುವುದು ನಿಜ ಆದ್ದರಿಂದ ಇಂತಹ ಸ್ಥಿತಿಯನ್ನು ಮಸೀಹ್ ಮುಹಮ್ಮದಿಯರ ಗುಲಾಮರಾದ ನಾವು ತನ್ನ ಪಾತ್ರವನ್ನು ನಿರ್ವಹಿಸುತ್ತಾ ಲೋಕವನ್ನು ವಿನಾಶದಿಂದ ರಕ್ಷಿಸಲು ಪ್ರಾರ್ಥನೆಗಳ ಹಕ್ಕು ಪಾಲಿಸುವ ಅಗತ್ಯ ಬಹಳಷ್ಟಿದೆ. ಸರ್ವಶಕ್ತನಾದ ಲಲಾಹನು ನಮಗೆ ಈ ಹಕ್ಕನ್ನು ಪಾಲಿಸುವ ಭಾಗ್ಯ ದಯಪಾಲಿಸಲಿ ಮತ್ತು ಲೋಕವನ್ನು ವಿನಾಶದಿಂದ ರಕ್ಷಿಸುವಂತಾಗಲಿ. ಆಮೀನ್.

(26 ಏಪ್ರಿಲ್ 2013) ಅಲ್ಲಾಹನು ನಮಗೆಲ್ಲರಿಗೂ ಇದರ ಭಾಗ್ಯ ದಯಪಾಲಿಸಲಿ ಆಮೀನ್.

**ವ ಆಖಿರುದ್ದಾವನಾ ಅನಿಲ್‌ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್**

-------------*****-------------

*(ಪುಟ ಸಂಖ್ಯೆ 08ರ ಉಳಿದ ಭಾಗ)*

ಕೇಳಿದ್ದೇನೆ ಎಂದು ಅವಳು ಹೇಳಿದಳು.... ನಾನು ಇದನ್ನು ಹೇಳುತ್ತಿದ್ದೇನೆ ಏಕೆಂದರೆ ಇದು ಒಬ್ಬ ಹುಡುಗಿಯ ಪ್ರಶ್ನೆಯಲ್ಲ ಆದರೆ ಅನೇಕ ಹುಡುಗಿಯರ ಪ್ರಶ್ನೆ. ಆದ್ದರಿಂದ ಮೊದಲನೆಯದು, ಕೆಲವು ಸಂದರ್ಭಗಳಲ್ಲಿ ವೈದ್ಯರು ಹಾಗೆ ಮಾಡಲು ಒತ್ತಾಯಿಸಲ್ಪಡುತ್ತಾರೆ ಎಂದು ನಾನು ಹೇಳಿದ್ದರೆ. ನೀವು ಸಾಂಪ್ರದಾಯಿಕ ಬುರ್ಖಾ ಅಥವಾ ಹಿಜಾಬ್ ಧರಿಸಿ ಅಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ, ಶಸ್ತ್ರಚಿಕಿತ್ಸೆ ಮಾಡುವಾಗ. ಅವರ ಉಡುಗೆ ಎಂದರೆ ಅವರು ಟೋಪಿ, ಮುಖವಾಡ ಮತ್ತು ಸಡಿಲವಾದ ಬಟ್ಟೆಗಳನ್ನು ಧರಿಸುತ್ತಾರೆ. ಇದರ ಹೊರತಾಗಿ, ವೈದ್ಯರು ಹಿನ್ನೆಲೆಯಲ್ಲಿಯೂ ಕೆಲಸ ಮಾಡಬಹುದು. ನಮಗೆ ರಬ್ವಾದಲ್ಲಿ ಒಬ್ಬ ವೈದ್ಯರು ಇದ್ದರು. ನಾವು ಯಾವಾಗಲೂ ಹಿನ್ನೆಲೆಯಲ್ಲಿ ಡಾ. ಫೆಹ್ಮಿದಾ ಅವರನ್ನು ನೋಡಿದ್ದೇವೆ. ಡಾ. ನುಸ್ರತ್ ಅವರು ಎಲ್ಲಿದ್ದರೂ ಕಟ್ಟುನಿಟ್ಟಾದ ಮುಸುಕನ್ನು ಇಟ್ಟುಕೊಳ್ಳುತ್ತಿದ್ದರು... ಪ್ರತಿ ವರ್ಷ, ಅವರು ತಮ್ಮ ಕೌಶಲ್ಯಗಳನ್ನು ಅಳವಡಿಸಿಕೊಳ್ಳಲು ಲಂಡನ್‌ಗೆ ಇಲ್ಲಿಗೆ ಬರುತ್ತಿದ್ದರು. ಹೊಸ ಸಂಶೋಧನೆಗೆ, ಅದಕ್ಕೆ ಹೊಂದಿಕೊಳ್ಳಲು, ಆದರೆ ಅವರು ಯಾವಾಗಲೂ ಮುಸುಕಿನಲ್ಲೇ ಇರುತ್ತಿದ್ದರು, ವಾಸ್ತವವಾಗಿ, ಅವರು ಮುಸುಕಿನ ಅಗತ್ಯಕ್ಕಿಂತ ಹೆಚ್ಚು ಬದ್ಧರಗಿದ್ದರು. ಇಲ್ಲಿ ಯಾರೂ ಅವರನ್ನು ಆಕ್ಷೇಪಿಸಲಿಲ್ಲ, ಅವರ ಕೆಲಸಕ್ಕೆ ಅವರು ಆಕ್ಷೇಪಿಸಲಿಲ್ಲ, ಅಥವಾ ಅದು ಅವರ ವೃತ್ತಿಪರ ಕೌಶಲ್ಯಗಳ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರಲಿಲ್ಲ. "ಅವರು ಬಹಳ ದೊಡ್ಡ ಕಾರ್ಯಾಚರಣೆಗಳನ್ನು ಸಹ ನಡೆಸಿದರು, ಆದ್ದರಿಂದ ಉದ್ದೇಶವಿದ್ದರೆ, ಧರ್ಮದ ಬೋಧನೆಗಳನ್ನು ಅನುಸರಿಸುವ ಮಾರ್ಗಗಳು ಹೊರಹೊಮ್ಮುತ್ತವೆ."

ತಮ್ಮ ಒಂದು ಖುತ್‌ಬ ಜುಮುಅದಲ್ಲಿ ಹುಝೂರ್ ಅನ್ವರ್(ಅತಬಿಅ) ಈ ನಿಟ್ಟಿನಲ್ಲಿ ಸಲಹೆ ನೀಡಿದರು ಮತ್ತು ಹೇಳಿದರು:

"ಅದೇ ಸಮಯದಲ್ಲಿ, ಒಂದು ರೀತಿಯ ಸಂಕೀರ್ಣತೆಯಿಂದ ಬಳಲುತ್ತಿರುವ ಅಹ್ಮದಿ ಹುಡುಗಿಯರಿಗೆ ನಾನು ಹೇಳುತ್ತೇನೆ, ಅವರು ಲೌಕಿಕ ವಸ್ತುಗಳ ಭಯದಿಂದ ಅಥವಾ ಫ್ಯಾಷನ್ ಕಾರಣದಿಂದಾಗಿ ತಮ್ಮ ಹಿಜಾಬ್ ಮತ್ತು ಮುಸುಕುಗಳನ್ನು ತೆಗೆದರೆ, ಅವರ ಗೌರವಕ್ಕೆ ಯಾವುದೇ ಗ್ಯಾರಂಟಿ ಇರುವುದಿಲ್ಲ. ನಿಮ್ಮ ಗೌರವವು ಧರ್ಮದ ಗೌರವದೊಂದಿಗೆ ಇರುತ್ತದೆ. ಹುಝೂರ್ ಅವರು, ಹಿಜಾಬ್‌ನ ಅನುಗ್ರಹದ ಮತ್ತು ಸರ್ವಶಕ್ತನಾದ ಅಲ್ಲಾಹನ ಬೆಂಬಲಕ್ಕೆ ಸಂಬಂಧಿಸಿದ ಒಂದು ಘಟನೆಯನ್ನು ಉಲ್ಲೇಖಿಸುತ್ತಾ, ಹೇಳಿದರು: ಒಬ್ಬ ಅಹ್ಮದಿ ಹುಡುಗಿಗೆ ಆಕೆಯ ಬಾಸ್ ನೋಟಿಸ್ ನೀಡಿದ್ದರು, ನೀವು ಹಿಜಾಬ್ ಧ'ರಿಸಿ ಕಚೇರಿಗೆ ಬಂದರೆ, ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗುವುದು ಮತ್ತು ನಿಮಗೆ ಒಂದು ತಿಂಗಳ ನೋಟಿಸ್ ನೀಡಲಾಗುವುದು. ಆ ಹುಡುಗಿ ಹೀಗೆ ದುಆ ಮಾಡಿದಳು: ಓ ಅಲ್ಲಾಹನೇ! ನಿನ್ನ ಆಜ್ಞೆಯಂತೆ ನಾನು ಈ ಕೆಲಸವನ್ನು ಮಾಡುತ್ತಿದ್ದೇನೆ. ಒಂದು ಮಾರ್ಗವನ್ನು ಕಂಡುಕೊಳ್ಳಿ ಮತ್ತು ಕೆಲಸ ನನಗೆ ಒಳ್ಳೆಯದಲ್ಲದಿದ್ದರೆ, ಅದು ಸರಿ, ನಂತರ ಬೇರೆ ಉತ್ತಮ ವ್ಯವಸ್ಥೆಯನ್ನು ಮಾಡಿ. ಹೀಗೆ, ಒಂದು ತಿಂಗಳ ಕಾಲ, ಆಕೆಯ ಬಾಸ್ ಈ ಹುಡುಗಿಯನ್ನು ಕಿರುಕುಳ ನೀಡುತ್ತಲೇ ಇದ್ದನು, ಇನ್ನೂ ಕೆಲವೇ ದಿನಗಳು ಉಳಿದಿವೆ, ನಂತರ ನಿಮ್ಮನ್ನು ವಜಾಗೊಳಿಸಲಾಗುತ್ತದೆ ಮತ್ತು ಅವಳು ಪ್ರಾರ್ಥಿಸಿದಳು. ಅಂತಿಮವಾಗಿ, ಒಂದು ತಿಂಗಳ ನಂತರ, ಈ ಹುಡುಗಿ ತನ್ನ ಕೆಲಸದಲ್ಲಿಯೇ ಇದ್ದಳು, ಆದರೆ ಆ ಅಧಿಕಾರಿಯನ್ನು ಅವನ ಅಥವಾ ಅವಳ ಕೆಲವು ತಪ್ಪಿನಿಂದಾಗಿ ವಜಾಗೊಳಿಸಲಾಯಿತು ಅಥವಾ ಬೇರೆ ಸ್ಥಳಕ್ಕೆ ವರ್ಗಾಯಿಸಲಾಯಿತು. ಹೀಗೆ ಅವನ ಜೀವವು ಉಳಿಯಿತು. ಉದ್ದೇಶ ಒಳ್ಳೆಯದಾಗಿದ್ದರೆ, ಸರ್ವಶಕ್ತನಾದ ಅಲ್ಲಾಹನು ಸಾಧನಗಳನ್ನು ಸೃಷ್ಟಿಸುತ್ತಾನೆ. ಅದು ಸರ್ವಶಕ್ತನಾದ ಅಲ್ಲಾಹನಿಗೆ ಸಂಬಂಧಿಸಿದ್ದಲ್ಲಿ, ಅಲ್ಲಾಹನು ಒಬ್ಬ ವ್ಯಕ್ತಿಯು ಆಶ್ಚರ್ಯಚಕಿತನಾಗುವ ರೀತಿಯಲ್ಲಿ ಸಹಾಯ ಮಾಡುತ್ತಾನೆ ಮತ್ತು ಅಲ್ಲಾಹನನ್ನು ಸ್ತುತಿಸುವ ಮಾತುಗಳು ಅನೈಚ್ಛಿಕವಾಗಿ ಹೃದಯದಿಂದ ಹೊರಬರುತ್ತವೆ.

(ಖುತ್‌ಬ ಜುಮುಅ ಏಪ್ರಿಲ್ 23, 2010, ಸ್ವಿಟ್ಜರ್ಲೆಂಡ್, ಅಲ್-ಫಝುಲ್ ಇಂಟರ್ನ್ಯಾಷನಲ್ ಪ್ರಕಟಣೆ, ಮೇ 14, 2010)

ಪ್ರಿಯ ಕೇಳುಗರೇ! ಕೊನೆಯದಾಗಿ, ಎಲ್ಲಾ ರೀತಿಯ ಪೈಶಾಚಿಕ ಪ್ರಭಾವಗಳನ್ನು ತಪ್ಪಿಸಲು ಮತ್ತು ಒಳ್ಳೆಯತನದ ಹಾದಿಯಲ್ಲಿ ಜೀವನ ನಡೆಸಲು ಪ್ರಾರ್ಥನೆ ಬಹಳ ಮುಖ್ಯ ಎಂದು ನಾನು ಹೇಳಲು ಬಯಸುತ್ತೇನೆ. ಆದ್ದರಿಂದ, ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್, ಪ್ರಾರ್ಥನೆಯ ಸಹಾಯದಿಂದ ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವಂತೆ ಅಹ್ಮದಿ ಮಹಿಳೆಯರ ಗಮನವನ್ನು ಸೆಳೆಯುತ್ತಾ ಹೇಳಿದರು:

"ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ, ಪ್ರತಿಯೊಬ್ಬ ಅಹ್ಮದಿ, ಪುರುಷ ಮತ್ತು ಮಹಿಳೆ, ಸರ್ವಶಕ್ತನಾದ ಅಲ್ಲಾಹನು ಮಾರ್ಗದರ್ಶನ ನೀಡಿದ್ದರೆ,

*(ಪುಟ ಸಂಖ್ಯೆ-21ರಲ್ಲಿ ಮುಂದುವರಿಸಲಾಗಿದೆ)*

ಜಲ್ಸ ಸಾಲಾನ ಖಾದಿಯಾನ್ 2024ರ ಭಾಷಣ

# "ಆರ್ಥಿಕ ತ್ಯಾಗದ ವಿಷಯದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಸದಸ್ಯರ ಅನುಕರಣೀಯ ಉದಾಹರಣೆಗಳು ಮತ್ತು ದೈವಾನುಗ್ರಹಗಳು"

(ಹುಝೂರ್ ಅನ್ವರ್[ಅತಬಿಅ] ಅವರ ಉಪದೇಶಗಳು ಹಾಗೂ ಸಂಬೋಧನೆಗಳ ಬೆಳಕಿನಲ್ಲಿ)

(ರಫೀಕ್ ಅಹ್ಮದ್ ಬೇಗ್, ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)

**ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ**
(ಆಲಿ ಇಮ್ರಾನ್: 93)

ನಾನು ಪಠಿಸಿದ ಈ ಆಯತ್ತಿನಲ್ಲಿ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ನಿಮಗೆ ಪ್ರಿಯವಾದವುಗಳಿಂದ (ದೇವ ಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ] ಇದರ ವ್ಯಾಖ್ಯಾನವನ್ನು ವಿವರಿಸಿದ್ದಾರೆ. ಅವರು ಹೇಳಿದರು: **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ** ಪವಿತ್ರ ಖುರ್‌ಆನ್‌ನಲ್ಲಿ ಸೂರಾ ಅಲ್-ಬಕರಾದ ಪ್ರಾರಂಭದ ರುಕುವಿನಲ್ಲಿ ಸತ್ಯವಿಶ್ವಾಸಿಗಳ ಕುರಿತು **ವ ಮಿಮ್ಮಾ ರ ಝಖ್ನಾಹುಮ್ ಯುನ್‌ಫಿಖೂನ್** ಅಂದರೆ: ಸರ್ವಶಕ್ತನಾದ ಅಲ್ಲಾಹನು ಅವರಿಗೆ ಏನು ನೀಡಿದ್ದಾನೋ ಅವರು ಅದರಿಂದ ಖರ್ಚು ಮಾಡುವವರಾಗಿದ್ದಾರೆ. ಇದು ಮೊದಲನೇಯ ರುಕುವಿನ ಪ್ರಸ್ತಾಪವಿದೆ. ಅದೇ ರೀತಿ, ಅದೇ ಸೂರಾದಲ್ಲಿ, ದೈವಮಾರ್ಗದಲ್ಲಿ ಖರ್ಚು ಮಾಡುವುದರ ಕುರಿತು ಅನೇಕ ಸ್ಥಳದಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ...... ನಿಮಗೆ ಪ್ರಿಯವಾದವುಗಳಿಂದ (ದೇವ ಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. **ಮಿಮ್ಮಾ ತುಹಿಬ್ಬೂನ** ನ ಅರ್ಥವು ಸಂಪತ್ತಾಗಿದೆ, ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, **ವಿನ್ನಹೂ ಲಿಹುಬ್ಬಿಲ್ ಖೈರಿ ಲಶದೀದ್** (ಅಲ್‌ಆದಿಯಾತ್: 9) ಸಂಪತ್ತು ಮನುಷ್ಯನಿಗೆ ತುಂಬಾ ಪ್ರಿಯವಾಗಿದೆ. ಆದ್ದರಿಂದ ನಿಜವಾದ ಒಳ್ಳೆಯತನವನ್ನು ಪಡೆಯಲು ನಿಮ್ಮ ಪ್ರೀಯವಾದ ವಸ್ತುಗಳಿಂದ ಖರ್ಚು ಮಾಡುತ್ತಿರುವುದು ಅವಶ್ಯಕವಾಗಿದೆ.

(ಝಮೀಮ ಅಖ್ಬಾರೆ ಬದರ್ ಖಾದಿಯಾನ್, 1,8 ಜುಲೈ 1909, ಹಖಾಯೆಖುಲ್ ಫುರ್ಖಾನ್, ಸಂಪುಟ-1, ಪುಟ-500-501)

ಆತ್ಮೀಯ ವೀಕ್ಷಕರೇ! ಸರ್ವಶಕ್ತನಾದ ಅಲ್ಲಾಹನು ಈ ಯುಗದಲ್ಲಿ ಖಿಲಾಫತೆ ಅಹ್ಮದಿಯಾದ ಅತ್ಯುನ್ನತ ಅನುಗ್ರಹವನ್ನು ನಮ್ಮನ್ನು ಅನುಗ್ರಹಿಸಿದ್ದಾನೆ, ಅದರ ಮೂಲಕ ನಾವು ತರಬೇತಿ ಪಡೆಯಬಹುದಾಗಿದೆ ಮತ್ತು ನಮ್ಮನ್ನು ಶುದ್ಧೀಕರಿಸಬಹುದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ, ಆತ್ಮಗಳನ್ನು ಶುದ್ಧೀಕರಿಸುವ ಪ್ರಮುಖ ಸಾಧನವೆಂದರೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಎಂದು ವಿವರಿಸಲಾಗಿದೆ. ಹುಝೂರ್ ಅನ್ವರ್[ಅತಬಿಅ] ಅವರು ಅಹ್ಮದಿಯಾ ಜಮಾಅತ್ತಿನ ಸದಸ್ಯರಿಗೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಪದೇ ಪದೇ ಸಲಹೆ ನೀಡುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಯೋಜನೆಗಳನ್ನು ಅಲ್ಲಾಹ ಆದೇಶವಾಗಿರುವಂತಹ ಪವಿತ್ರ ಖುರ್‌ಆನ್‌ನ ಆಯತ್‌ಗಳಿಂದ ಮತ್ತು ಅದರ ಜ್ಞಾನಭರಿತ ವ್ಯಾಖ್ಯಾನಗಳಿಂದ ನಮ್ಮ ಗಮನ ಸೆಳೆಯುತ್ತಾರೆ, ಅದಲ್ಲದೆ ಆರ್ಥಿಕ ತ್ಯಾಗಗಳ ಕುರಿತು ಹಝ್ರತ್ ಪೈಗಂಬರ್(ಸ)ರ ಸಹಾಬಗಳ ವಿಶ್ವಾಸವರ್ಧಕ ಆರ್ಥಿಕ ತ್ಯಾಗಗಳ ಘಟನೆಗಳನ್ನು ವಿವರಿಸುತ್ತಾರೆ. ನಮ್ಮ ಪ್ರೀತಿಯ ಯಜಮಾನರಾದ ಹುಝೂರ್ ಅನ್ವರ್[ಅತಬಿಅ] ಅವರ ಸಂಬೋಧನೆಗಳಲ್ಲಿ ಮತ್ತು ಭಾಷಣಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಗಳ ಮತ್ತು ಜಾಗತಿಕ ಅಹ್ಮದಿ ನಿಷ್ಠಾವಂತ ಸದಸ್ಯರ ಆರ್ಥಿಕ ತ್ಯಾಗಗಳ ಘಟನೆಗಳು ನಮ್ಮ ವಿಶ್ವಾಸವನ್ನು ಬಲಪಡಿಸುತ್ತದೆ. ಈ ಆರ್ಥಿಕ ತ್ಯಾಗದ ಘಟನೆಗಳು ಸಹಾಬಾಗಳ ತ್ಯಾಗವನ್ನು ನೆನಪಿಸುತ್ತವೆ. ಈ ತ್ಯಾಗದ ಘಟನೆಗಳನ್ನು ಆಲಿಸಿದಾಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಕವನ ಪಂಕ್ತಿಯ ನೆನಪಾಗುತ್ತದೆ:

ಮುಬಾರಕ್ ವೊ ಜೊ ಈಮಾನ್ ಲಾಯಾ
ಸಹಾಬ ಸೆ ಮಿಲಾ ಜಬ್ ಮುಜ್ಝ್‌ಕೊ ಪಾಯಾ

ನಿಮ್ಮ ಜಮಾಅತ್ತಿನ ಸದಸ್ಯರಲ್ಲಿ ಒಳಿತು, ಧರ್ಮನಿಷ್ಠೆ ಮತ್ತು ಶುದ್ಧೀಕರಣದಲ್ಲಿ ಅಸಾಧಾರಣ ಅಭಿವೃದ್ಧಿ ಹೊಂದುತ್ತಿದ್ದಾರೆ ಎಂಬುದಕ್ಕೆ ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸತ್ಯಾಸತ್ಯತೆಗೆ ಬಲವಾದ ಪುರಾವೆಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ಜಮಾತ್‌ನಲ್ಲಿ ಕಂಡುಬರುವ ಪ್ರಗತಿ ಮತ್ತು ಬದಲಾವಣೆಯು ಈ ಸಮಯದಲ್ಲಿ ಬೇರೆ ಯಾವುದರಲ್ಲಿಯೂ ಕಂಡುಬರುವುದಿಲ್ಲ."

(ಮಲ್‌ಫೂಝಾತ್, ಸಂಪುಟ-10, ಪುಟ-243, ಆವೃತ್ತಿ 1985, ಇಂಗ್ಲೆಂಡ್‌ನಲ್ಲಿ ಪ್ರಕಟಿತ)

ಅದೇ ರೀತಿ ಅವರು ಹೇಳಿದರು:

**"ನನ್ನನ್ನು ಪ್ರಾಮಾಣಿಕವಾಗಿ ನಂಬುವ ಮತ್ತು ಸತ್ಕಾರ್ಯಗಳನ್ನು ಮಾಡುವ ಕನಿಷ್ಠ ಒಂದು ಲಕ್ಷ ಜನರು ನನ್ನ ಜಮಾಅತ್ತಿನಲ್ಲಿದ್ದಾರೆ ಎಂದು ನಾನು ಪ್ರಮಾಣ ಮಾಡಬಲ್ಲೆ. ನನ್ನ ಜಮಾಅತ್ ಅಭಿವೃದ್ಧಿಪಡಿಸಿದ ಒಳ್ಳೆಯತನ ಮತ್ತು ಸಾಮರ್ಥ್ಯದ ಪ್ರಮಾಣವೂ ಒಂದು ಪವಾಡವಾಗಿದೆ ಎಂದು ನಾನು ನೋಡುತ್ತೇನೆ. ಸಾವಿರಾರು ಜನರು ಮನಃಪೂರಕವಾಗಿ ತ್ಯಾಗಶೀಲರಾಗಿದ್ದಾರೆ, ಇಂದು ಅವರಿಗೆ ನಿಮ್ಮ ಬಳಿ ಇರುವ ಇಡೀ ಸಂಪತ್ತನ್ನು ತ್ಯಜಿಸಿರಿ ಎಂದು ಹೇಳಿದರೆ ಅವರೆಲ್ಲರು ತ್ಯಜಿಸಲು ಸಿದ್ಧರಾಗುತ್ತಾರೆ."** (ಸೀರತುಲ್ ಮಹದಿ, ಭಾಗ-1, ಪುಟ-145)

ಆತ್ಮೀಯ ವೀಕ್ಷಕರೇ! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್ತಿನ ಸದಸ್ಯರ ಈ ಭಕ್ತಿ ಮತ್ತು ಆರ್ಥಿಕ ತ್ಯಾಗದ ಈ ಅನುಕರಣೀಯ ಉದಾಹರಣೆಗಳು ನಿಮ್ಮ(ಅ) ಅನುಗ್ರಹದಾಯ ಕಾಲಾವಧಿಯವರೆಗೇ ಸೀಮಿತವಿರಲಿಲ್ಲ ಬದಲಿಗೆ ಇಂದೂ ಕೂಡ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಅನುಕರಣೀಯ ದರ್ಶನಗಳನ್ನು ಗಮನಿಸಲಾಗುತ್ತಿದೆ. ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್[ಅತಬಿಅ] ಹೇಳುತ್ತಾರೆ:

"ಒಟ್ಟಿನಲ್ಲಿ, ನಿಮ್ಮಿಂದ ನೇರವಾಗಿ ಅನುಗ್ರಹ ಪಡೆದವರು ಈ ಸ್ಥಾನವನ್ನು ಪಡೆದರು ಮತ್ತು ನಿಮ್ಮಿಂದ ಸಂತೃಪ್ತಿಯ ಪ್ರಮಾಣಪತ್ರವನ್ನು ಪಡೆದರು. ಆದರೆ ಈ ಪ್ರಾಮಾಣಿಕತೆ ಮತ್ತು ನಿಷ್ಠೆಯು ಕಾಲಾನಂತರದಲ್ಲಿ ಕೊನೆಗೊಂಡಿತೇ? ಖಂಡಿತ ಇಲ್ಲ. ನಾನು ಹೇಳಿದಂತೆ, ಇಂದಿಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್ತಿನಲ್ಲಿ ಪುರುಷರು, ಮಹಿಳೆಯರು ಮತ್ತು ಮಕ್ಕಳಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆಯಲ್ಲಿ ಬೆಳೆದಂತಹ ಜನರಿದ್ದಾರೆ. ಕೆಲವು ಮತ್ತು ಕೆಲವು ನಿರ್ದಿಷ್ಟ ಭಾಗದಲ್ಲಲ್ಲ ಬದಲಿಗೆ ಪ್ರಪಂಚದ ವಿವಿಧ ದೇಶಗಳಲ್ಲಿ ಹರಡಿರುವ ಇಂತಹ ಸಾವಿರಾರು ಉದಾಹರಣೆಗಳಿವೆ. ಅವರು **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತಿಹಿಬ್ಬೂನ** ದ ಆದೇಶವನ್ನು ಸರಿಯಾಗಿ ಅರಿತುಕೊಂಡಿದ್ದಾರೆ. ಅವರು ತ್ಯಾಗ ನೀಡುವುದರಲ್ಲಿ ಮುಂದೆ ಸಾಗುತ್ತಿದ್ದಾರೆ. ಅವರಲ್ಲಿ ಹಳೆಯವರೂ ಇದ್ದಾರೆ ಮತ್ತು ಹೊಸದಾಗಿ ಸೇರಿರುವವರೂ ಇದ್ದಾರೆ, ಅವರು ಅಹ್ಮದೀಯತ್ ಅನ್ನು ಸ್ವೀಕರಿಸಿ ಸ್ವಲ್ಪ ದಿನವೇ ಆಗಿರುವವರಿದ್ದಾರೆ. ಅಹ್ಮದಿಯ್ಯತ್ ಅನ್ನು ಸ್ವೀಕರಿಸುವ ಮೊದಲು ಪ್ರಾಪಂಚಿಕ ಬಯಕೆಗಳ ಅವರು ಆದ್ಯತೆಗಳಾಗಿದ್ದವು, ಆದರೆ ಅಹ್ಮದಿಯ್ಯತ್ ಅನ್ನು ಸ್ವೀಕರಿಸಿದ ನಂತರ ಅವರು ಧರ್ಮಕ್ಕಾಗಿ ತಮ್ಮ ಪ್ರೀತಿಯ ಇಡೀ ಸಂಪತ್ತನ್ನು ಅಥವಾ ತಮ್ಮಲ್ಲಿರುವ ಎಲ್ಲವನ್ನು ತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ಈ ಯುಗದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸೃಷ್ಟಿಸಿದ ಕ್ರಾಂತಿ ಇದಾಗಿದೆ. ಜನರ ಒಲವು ಬದಲಾಗಿದೆ. ಮತ್ತು ಇಂದಿಗೂ ಸಹ, ಅವರು ಎಂತಹ ಜನರಾಗಿದ್ದಾರೆ ಎಂದರೆ ಅವರ ತ್ಯಾಗಗಳನ್ನು ನೋಡಿ ಆಶ್ಚರ್ಯವಾಗುತ್ತದೆ ಎಂಬ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮಾತುಗಳು ನಿಜವಾಗುತ್ತವೆ.

ಇಂದು ಜಮಾಅತ್ತಿನಲ್ಲಿ ನಮ್ಮಲ್ಲಿ ಅನೇಕರು "ತಮ್ಮ ಹಿರಿಯರು ಬಹಳಷ್ಟು ತೊಂದರೆಗಳನ್ನು ಅನುಭವಿಸಿ ತಮ್ಮ ಪರಿಶುದ್ಧ ಸಂಪಾದನೆಯಿಂದ ಮಾಡಿದ ತ್ಯಾಗಗಳ ಕಾರಣದಿಂದ ಸರ್ವಶಕ್ತನಾದ ಅಲ್ಲಾಹನು ಅವರ ಪೀಳಿಗೆಯ ಸಂಪತ್ತು ಮತ್ತು ಜೀವನವನ್ನು ಅನುಗ್ರಹಿಸಿದ್ದಾನೆ ಎಂದು ಸಾಕ್ಷಿ ಹೇಳುವವರಿದ್ದಾರೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರ ಘಟನೆ ಇದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ರು ಅದರ ಬಗ್ಗೆ ಬರೆದಿದ್ದಾರೆ, ಆದರೆ ಅದನ್ನು ಓದಿದರೆ ಪ್ರತಿ ಬಾರಿ ನಂಬಿಕೆಯಲ್ಲಿ ತಾಜಾತನ ಮತ್ತು ತ್ಯಾಗದ ಹೊಸ ಮನೋಭಾವವು ಹುಟ್ಟಿಕೊಳ್ಳುತ್ತದೆ. ಅವರು ಹೇಳುತ್ತಾರೆ:

"ನಾನು ಅನುಮತಿ ನೀಡಿದರೆ ಅವರು ತನ್ನ ಎಲ್ಲವನ್ನು ಈ ದಾರಿಯಲ್ಲಿ ಅರ್ಪಿಸಿ ತನ್ನ ಆಧ್ಯಾತ್ಮಿಕ ಸಹವಾಸದೊಂದಿಗೆ ಶಾರೀರಿಕ ಸಹವಾಸ ಮಾಡುತ್ತ ಯಾವಾಗಲೂ ನನ್ನೊಂದಿಗೆ ಇರಲು ಸಿದ್ಧರಾಗಿದೆ. ಅವರು ನನಗೆ ಬರೆದ ಪತ್ರಗಳು ಕೆಲವು ವಾಕ್ಯಗಳನ್ನು ಉದಾಹರಣೆಗೋಸ್ಕರ ಓದುದಿಗೆ ತೋರಿಸಿಕೊಡುತ್ತೇನೆ. ಅವರ ಪತ್ರದ ವಾಕ್ಯಗಳು ಇವುಗಳಾಗಿವೆ:

"ನಾನು ನಿಮ್ಮ ಮಾರ್ಗದಲ್ಲಿ ಬಲಿಯರ್ಪಿತನಾಗಿದ್ದೇನೆ. ನನ್ನದೆಲ್ಲವೂ ನನ್ನದಲ್ಲಿ ನಿಮ್ಮದಾಗಿದೆ. ಹಝ್ರತ್ ಪೀರ್, ಮುರ್ಷಿದ್, ನಾನು ಪೂರ್ಣ ಸತ್ಯದೊಂದಿಗೆ ನಿಮ್ಮದೊಂದಿಗೆ ನಿವೇದಿಸುತ್ತೇನೆ. ನನ್ನ ಎಲ್ಲಾ ಸಂಪತ್ತು ಧರ್ಮದ ಸೇವೆಯಲ್ಲಿ ಖರ್ಚಾದರೆ ನಾನು ನನ್ನ ಉದ್ದೇಲಕ್ಷ್ಯವನ್ನು ತಲಪಿದಂತಾಗುವುದು.

ಬರಾಹೀನೆ ಅಹ್ಮದಿಯಾ ಗ್ರಂಥದ ಖರೀದಿದಾರರು ಗ್ರಂಥಪೂರ್ಣವಾಗಿ ಮುದ್ರಿತವಾಗಲು ತಡವಾದ ಕಾರಣ ಗಾಬರಿಗೊಂಡಿದ್ದರೆ ಅವರು ನೀಡಿದ ಎಲ್ಲಾ ಹಣವನ್ನು ನಾನು ಅವರಿಗೆ ಮರುಪಾವತಿ ಮಾಡಬೇಕು. ಈ ಚಿಕ್ಕ ಸೇವೆ ಮಾಡಲು ಅನುಮತಿ ನೀವು ನೀಡುವುದಾದರೆ ನಾನು ಹಾಗೆ ಮಾಡುವೆನು. ಹಝ್ರತ್ ಪೀರ್, ಮುರ್ಶಿದ್, ಈ ವಿನೀತ ಲಜ್ಜಾವಂತನಾಗಿ ವಿನಂತಿಸುತ್ತೇನೆ. ತಾವು ಅನುಮತಿ ನೀಡುವುದಾದರೆ ಅದು ನನಗೆ ಪುಣ್ಯದಾಯಕವಾಗಿದೆ. ಬರಾಹೀನೆ ಅಹ್ಮದಿಯಾ ಮುದ್ರಿಸುವ ಎಲ್ಲಾ ಖರ್ಚು ನನ್ನ ಹೊಣೆಗಾರಿಕೆಗೆ ವಹಿಸಿಕೊಡಿರಿ. ಅನಂತರ ಪುಸ್ತಕದ ಬೆಲೆಯ ರೂಪದಲ್ಲಿ ವಸೂಲಾಗುವ ಹಣ ನೀವು ನಿಮ್ಮ ಆವಶ್ಯನುಸಾರವಾಗಿ ಖರ್ಚು ಮಾಡಿರಿ. ನನಗೆ ತಮ್ಮೊಂದಿಗೆ ಫಾರೂಖೀ ಸಂಬಂಧವಿದೆ. ನನ್ನ ಎಲ್ಲವನ್ನು ಈ ಮಾರ್ಗದಲ್ಲಿ ಅರ್ಪಿಸಲು ಸಿದ್ಧನಾಗಿದ್ದೇನೆ. ತಾವು ಪ್ರಾರ್ಥಿಸಿರಿ ನನ್ನ ಮೃತ್ಯು ಸತ್ಯಸಂಧರ (ಸಿದ್ದೀಖ್‌ಗಳ) ಮೃತ್ಯುವಿನಂತೆ ಸಂಭವಿಸಲಿ." (ಫತ್‌ಹ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ-3, ಪುಟ-36)

(ಅಂದರೆ, ಅವರೂ ಹಣ ನೀಡುತ್ತಿದ್ದಾರೆ ಮತ್ತು ನಂತರ ಬರುವುದನ್ನೂ ಈ ಕೆಲಸವನ್ನು ಮುಂದುವರಿಸಲು ಖರ್ಚು ಮಾಡಬೇಕು ಎಂದು ಹೇಳಿದರು).

ಮತ್ತೆ ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬ್ ಅವರ ಆರ್ಥಿಕ ತ್ಯಾಗದ ಒಂದು ದೊಡ್ಡ ಘಟನೆಯ ಉಲ್ಲೇಖವಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಲುಧಿಯಾನದಲ್ಲಿ ಪ್ರಮುಖ ಉಪದೇಶದ ಜಾಹೀರಾತನ್ನು ಪ್ರಕಟಿಸಲು ಅರವತ್ತು ರೂಪಾಯಿಗಳು ಬೇಕಾಗಿದ್ದವು. ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬ್ ಅವರಿಗೆ ನಿಮ್ಮ ಜಮಾಅತ್ತಿನ ಸದಸ್ಯರಿಗೆ ಈ ಮೊತ್ತವನ್ನು ಸಂಗ್ರಹಮಾಡಲು ಸಾಧ್ಯವಾಗುತ್ತದೆಯೇ ಎಂದು ಪ್ರಸ್ತಾಪಿಸಿದರು. ಅದಕ್ಕೆ ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬ್ ಅವರು ಹುಝೂರ್ ಇನ್‌ಶಾಅಲ್ಲಾಹ್ ಎಂದು ಹೇಳಿದರು. ಅವರು ಜಮಾಅತ್ತಿನ ಯಾವ ಸದಸ್ಯರಲ್ಲಿ ಪ್ರಸ್ತಾಪಿಸದೆ ತಮ್ಮ ಪತ್ನಿಯ ಆಭರಣವನ್ನು ಮಾರಿ ಅರವತ್ತು ರೂಪಾಯಿಗಳನ್ನು ಪಡೆದುಕೊಂಡರು ಮತ್ತು ಅದನ್ನು ಹಝ್ರತ್ ಸಾಹಿಬ್ ಅವರ ಸೇವೆಗೆ ಅರ್ಪಿಸಿದರು. ಕಪೂರ್ಥಾಲದ ಇನ್ನೋರ್ವ ನಿಷ್ಠಾವಂತ ಸಹಾಬಿ ಹಝ್ರತ್ ಮುನ್‌ಶಿ ಅರೋಡೆ ಖಾನ್ ಸಾಹಿಬ್ ಅವರು ತಮ್ಮ ಮಿತ್ರ ಮುನ್‌ಶಿ ಝಫರ್ ಅಹ್ಮದ್ ಸಾಹಿಬ್ ಅವರಿಂದ ಈ ಕಾರಣದಿಂದಲೇ ಆರು ತಿಂಗಳ ವರೆಗೆ ಕೋಪಗೊಂಡಿದ್ದರು ಏಕೆಂದರೆ ಅವರು ಆರ್ಥಿಕ ತ್ಯಾಗದಲ್ಲಿ ಭಾಗವಹಿಸದಂತೆ ಸ್ವತಃ ಸಂಪೂರ್ಣ ತ್ಯಾಗವನ್ನು ಅರ್ಪಿಸಿದರು ಎಂದು. ಅಲ್ಲಾಹ್! ಅಲ್ಲಾಹ್! ಇಂತಹ ನಿಷ್ಠಾವಂತ ಸದಸ್ಯರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ನೀಡಲಾಗಿತ್ತು. ಸ್ವಲ್ಪ ಯೋಚನೆ ಮಾಡಿ!! ಹಝ್ರತ್ ಸಾಹಿಬ್ ಅವರು ಜಮಾಅತ್ತಿನಿಂದ ಸಹಾಯವನ್ನು ಯಾಚಿಸುತ್ತಾರೆ, ಆದರೆ ಒಬ್ಬ ವ್ಯಕ್ತಿ ಮತ್ತು ಬಡವ ವ್ಯಕ್ತಿ ಏಳಿ ಅದನ್ನು ಜಮಾಅತ್ತಿನ ಸದಸ್ಯರಿಗೆ ತಳಿಸದೆ, ತನ್ನ ಪತ್ನಿಯ ಆಭರಣಗಳನ್ನು ಮಾರಿ ಈ ಮೊತ್ತವನ್ನು ಪೂರೈಸುತ್ತಾನೆ. ತದನಂತರ ಹಝ್ರತ್ ಸಾಹಿಬ್ ಅವರ ಮುಂದೆ ಹಣವನ್ನು ಪ್ರಸ್ತುತಪಡಿಸುವಾಗಲೂ, ನಾನು ಈ ಹಣವನ್ನು ನೀಡುತ್ತಿದ್ದೇನೆ ಅಥವಾ ಜಮಾಅತ್ತಿನ ಸದಸ್ಯರು ನೀಡುತ್ತಿದ್ದಾರೆ ಎಂದು ಉಲ್ಲೇಖಿಸುವುದಿಲ್ಲ. ಇದರಿಂದ ಹಝ್ರತ್ ಸಾಹಿಬರ ಪ್ರಾರ್ಥನೆಯು ಇಡೀ ಜಮಾಅತ್ತನ್ನು ತಲುಪುತ್ತದೆ ಎಂದು. ಮತ್ತೊಂದೆಡೆ, ಎರಡನೇ ತ್ಯಾಗಶೀಲ ಸಹಾಬಿ ಹಝ್ರತ್ ಸಾಹಿಬ್ ಅವರ ಅಗತ್ಯವನ್ನು ಕಂಡುಕೊಂಡರು ಮತ್ತು ನಾನು ಈ ಸೇವೆಯಿಂದ ವಂಚಿತನಾದೆ. ಹಝ್ರತ್ ಸಾಹಿಬ್ ಅವರ ಈ ಅಗತ್ಯವನ್ನು ನೀವು ನನ್ನ ಬಳಿ ಏಕೆ ಹೇಳಲಿಲ್ಲ ಎಂದು ಅವರು ಆರು ತಿಂಗಳ ವರೆಗೆ ತಮ್ಮ ಸ್ನೇಹಿತನ ಮೇಲೆ ಕೋಪಗೊಂಡಿದ್ದಾರೆ. (ಅಲ್-ಫಝಲ್, ಸೆಪ್ಟೆಂಬರ್ 4, 1914, ಅಸ್‌ಹಾಬೆ ಅಹ್ಮದ್, ವರದಿ ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬ್ ಕಪೂರ್‌ಥಾಲ್ವಿ, ಪುಟ-61, 62)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಗುರಿ ಸಾಧನೆಯ ಐದನೆಯ ಮಾರ್ಗ 'ಮುಜಾಹಿದಃ' ಅಥವಾ 'ಧರ್ಮ ಕಾರ್ಯಕ್ಕಾಗಿ ಪ್ರಯತ್ನ'ವಾಗಿದೆ. ಎಂದರೆ, ತನ್ನ ಸಂಪಾದನೆಯನ್ನು ದೇವ ಮಾರ್ಗದಲ್ಲಿ ವ್ಯಯಿಸಿಕೊಂಡು ತನ್ನ ಶಕ್ತಿ ಸಾಮರ್ಥ್ಯಗಳನ್ನು ದೇವ ಪಥದಲ್ಲಿ ವಿನಿಯೋಗಿಸಿಕೊಂಡು, ಜೀವವನ್ನು ದೇವನಾಮದಲ್ಲಿ ಅರ್ಪಿಸಿಕೊಂಡು, ಬುದ್ಧಿಯನ್ನೂ ಜ್ಞಾನವನ್ನೂ ದೈವಿಕ ಧರ್ಮದ ಸೇವೆಗಾಗಿ ಉಪಯೋಗಿಸಿಕೊಂಡು ಆ ಸರ್ವೈಕ ಕರ್ತನನ್ನು ಪಡೆಯಲು ಪ್ರಯತ್ನಿಸುವುದು. ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ ........ ನೀವು ನಿಮ್ಮ ಧನದಿಂದಲೂ ಜೀವದಿಂದಲೂ ನಿಮ್ಮ ಸರ್ವ ವಿಧ ಶಕ್ತಿಗಳಿಂದಲೂ ದೇವಮಾರ್ಗದಲ್ಲಿ ವಿಶೇಷ ಪ್ರಯತ್ನ ಮಾಡಿರಿ. ನಾವು ಅವರಿಗೆ ನೀಡಿರುವವುಗಳನ್ನು, ಎಂದರೆ ಬುದ್ಧಿ ಶಕ್ತಿ, ಜ್ಞಾನ, ವಿವೇಚನೆ, ವಿದ್ಯೆ ಮುಂತಾದುವನ್ನೆಲ್ಲ ನಮ್ಮ ದಾರಿಯಲ್ಲಿ ವಿನಿಯೋಗಿಸುವವರು ವಿಜಯಿಗಳು. ನಮ್ಮ ದಾರಿಯಲ್ಲಿ ಸರ್ವವಿಧದಲ್ಲೂ ಪರಿಶ್ರಮಿಸುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿಕೊಡುವೆವು." (ಇಸ್ಲಾಮಿ ಉಸೂಲ್ ಕೀ ಫಿಲಾಸಫಿ, ರೂಹಾನಿ ಖಝಾಈನ್, ಸಂಪುಟ-10, ಪುಟಗಳು 418, 419)

ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಒಂದು ದರ್ಶನವನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ:

"ದರ್ಶನದಲ್ಲಿ ನಾನು ನೋಡಿದ್ದೇನೆಂದರೆ ಒಂದು ಗೋಡೆಯ ಮೇಲೆ ಒಂದು ಕೋಳಿ ಇದೆ ಅದು ಏನೋ ಹೇಳುತ್ತಿತ್ತು. ನನಗೆ ಎಲ್ಲಾ ನುಡಿಗಟ್ಟುಗಳು ನೆನಪಿಲ್ಲ, ಆದರೆ ಕೊನೆಯ ನುಡಿಗಟ್ಟು ನೆನಪಿದೆ ಅದೇನೆಂದರೆ: **ಇನ್‌ಕುಂತುಮ್ ಮುಸ್ಲಿಮೀನ-** ನೀವು ಮುಸ್ಲಿಮರಾಗಿದ್ದರೆ. ಆ ಬಳಿಕ ಜಾಗೃತಿ ಮೂಡಿತು. ಕೋಳಿ ಈ ಮಾತುಗಳನ್ನು ಹೇಳಿದೆ ಎಂದು ಯೋಚನೆಯಲ್ಲಿತ್ತು. ನಂತರ ಹೀಗೆ ಇಲ್‌ಹಾಮ್ ಆಯಿತು: **ಅನ್‌ಫಿಖೂ ಫೀ ಸಬೀಲಿಲ್ಲಾಹಿ ಇನ್ ಕುಂತುಮ್ ಮುಸ್ಲಿಮೀನ-** ನೀವು ಮುಸ್ಲಿಮರಾಗಿದ್ದರೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿ. ಕೋಳಿಯ ಸಂಬೋಧನೆ ಮತ್ತು ಇಲ್‌ಹಾನ ಸಂಬೋಧನೆ ಎರಡು ಜಮಾಅತ್‌ಗಳ ಕಡೆಯಿದೆ ಎಂದು ಅವರು ಹೇಳಿದರು. ಎರಡೂ ನುಡಿಗಟ್ಟುಗಳಲ್ಲಿ, ನಮ್ಮ ಜಮಾಅತ್ ಅನ್ನು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಲದಲ್ಲಿ ಹಣದ ಅವಶ್ಯಕತೆ ಇದೆ. ಲಂಗರ್‌ನಲ್ಲಿಯೂ ಬಹಳಷ್ಟು ಖರ್ಚು ಇದೆ ಮತ್ತು ಕಟ್ಟಡ ನಿರ್ಮಾಣಕ್ಕೂ ಸಾಕಷ್ಟು ಖರ್ಚು ಮಾಡಲಾಗುತ್ತಿದ್ದು, ಈ ಆದೇಶದತ್ತ ಜಮಾಅತ್ ಗಮನಹರಿಸಬೇಕು. ನಂತರ ಅವರು(ಅ) ಹೇಳಿದರು: ಕೋಳಿ ತನ್ನ ಕಾರ್ಯಗಳಿಂದ ಅಲ್ಲಾಹನ ಮಾರ್ಗದಲ್ಲಿ ಹೇಗೆ ಖರ್ಚು ಮಾಡಬೇಕು ಎಂದು ತೋರಿಸುತ್ತದೆ, ಏಕೆಂದರೆ ಅದು ತನ್ನ ಇಡೀ ಜೀವನವನ್ನು ಮನುಷ್ಯನ ಸಲುವಾಗಿ ತ್ಯಾಗ ಮಾಡುತ್ತದೆ ಮತ್ತು ಮನುಷ್ಯನ ಸಲುವಾಗಿ ವಧಿಸಲಾಗುತ್ತದೆ. ಅದೇ ರೀತಿ ಕೋಳಿಯು ಪ್ರತಿ ದಿನ ಮನುಷ್ಯನಿಗೆ ಬಹಳ ಶ್ರಮದಿಂದ ಮೊಟ್ಟೆ ಇಡುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಆದ್ದರಿಂದ ನಮ್ಮ ಜಮಾಅತ್ತಿನ ಸತ್ಯವಿಶ್ವಾಸಿಗಳು ನಮ್ಮ ಧ್ವನಿಯನ್ನು ಕೇಳದಿದ್ದರೆ, ಈ ಕೋಳಿಯ ಧ್ವನಿಯನ್ನು ಆಲಿಸಿ. ಆದರೆ ಎಲ್ಲರೂ ಸಮಾನರಾಗಿರಲು ಸಾಧ್ಯವಿಲ್ಲ. ತಮ್ಮ ಶಕ್ತಿಗೂ ಮೀರಿ ಸೇವೆಯಲ್ಲಿ ತೊಡಗಿರುವವರು ಎಷ್ಟು ಪ್ರಾಮಾಣಿಕರಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಉತ್ತಮ ಪ್ರತಿಫಲವನ್ನು ನೀಡಲಿ." (ಮಲ್‌ಫೂಝಾತ್, ಸಂಪುಟ-4, ಪುಟ-582, 583, ಬದರ್, 8ನೇ ಡಿಸೆಂಬರ್ 1905)

ಹಝ್ರತ್ ಇಬ್ನ್ ಮಸ್‌ಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ಹೇಳಿದರು ಎರಡು ಜನರನ್ನು ಹೊರತುಪಡಿಸಿ ಯಾರೊಬ್ಬರ ಬಗ್ಗೆಯೂ ಹೆಮ್ಮೆ ಪಡಬಾರದು. ಒಬ್ಬರು ಸರ್ವಶಕ್ತನಾದ ಅಲ್ಲಾಹನು ಸಂಪತ್ತನ್ನು ನೀಡಿದ ವ್ಯಕ್ತಿ ಮತ್ತು ಅವನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದನು, ಇನ್ನೊಬ್ಬನು ಸರ್ವಶಕ್ತನಾದ ಅಲ್ಲಾಹನು ತಿಳುವಳಿಕೆ, ಬುದ್ಧಿವಂತಿಕೆ ಮತ್ತು ಜ್ಞಾನವನ್ನು ನೀಡಿದ ವ್ಯಕ್ತಿ. ಆತನು ಅದರ ಸಹಾಯದಿಂದ ಜನರಿಗೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ ಮತ್ತು ಜನರಿಗೆ ಬೋಧಿಸುತ್ತಾನೆ.

(ಬುಖಾರಿ, ಕಿತಾಬುಲ್ ಝಕಾತ್- ಅಧ್ಯಾಯ ಇನ್ಫಾಖ್ ಅಲ್‌ಮಾಲ ಫೀ ಹಖ್ಖಿಹೀ)

ಆದ್ದರಿಂದ ಈ ಜ್ಞಾನ ಮತ್ತು ಬುದ್ಧಿವಂತಿಕೆಯು ಸಹ ಒಂದು ಅನುಗ್ರಹವಾಗಿದೆ. ನಮ್ಮ ವಿರೋಧಿಗಳು ಜಮಾಅತ್‌ನ ಸದಸ್ಯರು ಏಕೆ ಚಂದಾ ನೀಡುತ್ತಾರೆ ಎಂದು ಯಾವಾಗಲೂ ಪ್ರಶ್ನಿಸಿ ಗೊಂದಲಕ್ಕೆ ಒಳಗಾಗುತ್ತಾರೆ. ನಾವು ನಮ್ಮ ಜಮಾಅತ್ತಿಗೆ ಸಂದಾ ನೀಡುತ್ತೇವೆ, ನೀವು ಅದರಿಂದ ತೊಂದರೆ ಏನಿದೆ? ಒಮ್ಮೊಮ್ಮೆ ಒಂದು ಅಂಗಡಿಯವರಿಗೆ ಬಹಿಷ್ಕಾರ ಹಾಕುತ್ತಾರೆ, ಅದಕ್ಕೆ ಕಾರಣವೆಂದರೆ ಆ ವ್ಯಕ್ತಿ ತನ್ನ ಅಂಗಡಿಯಿಂದ ಬರುವಂತಹ ಲಾಭದಿಂದ ಚಂದಾ ನೀಡುತ್ತಾನೆ ಎಂದು ಗಲಾಟೆ ಮಾಡುತ್ತಾರೆ. ನಮ್ಮ ಶೀರೂಝಾನ್ ಜ್ಯೂಸ್ ವಿರುದ್ಧ ಆಗಾಗ್ಗೆ ಭಾರಿ ವಿರೋಧ ವ್ಯಕ್ತವಾಗುತ್ತದೆ ಇವರು ಚಂದಾ ನೀಡುತ್ತಾರೆ ಎಂದು. ಮತ್ತು ಸರ್ಕಾರದ ಬಳಿಯೂ ಈ ಸಲಹೆ ಇರುತ್ತದೆ, ಪಕ್ಷದ ಎಲ್ಲ ನಿಧಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂಬುದು ವಿರೋಧಿಗಳ ಆಗ್ರಹವಿರುತ್ತದೆ. ಹೀಗೆ ಇವರು ಅಸೂಯೆಯ ಬೆಂಕಿಯಲ್ಲಿ ಉರಿಯುತ್ತಲೇ ಇರುತ್ತಾರೆ. ಏಕೆಂದರೆ ಅವರ ಸಮತಟ್ಟಾದ ಭೂಮಿಯಲ್ಲಿ ಈ ಅನುಗ್ರಹಗಳು ಲಭಿಸಲು ಸಾಧ್ಯವಿಲ್ಲ. ಆದ್ದರಿಂದ ಅವರ ಬಳಿ ಅಸೂಯೆ ಮಾತ್ರ ಉಳಿದಿರುತ್ತದೆ.

ನಾವು ಅಲ್ಲಾಹನ ಆಜ್ಞೆಗಳನ್ನು ಅನುಸರಿಸುತ್ತಿದ್ದೇವೆ ಎಂದು ನಾವು ಸಂತೋಷಪಡುತ್ತೇವೆ ಮತ್ತು ಇದರಿಂದಾಗಿ ಅಲ್ಲಾಹನ ಸಂದೇಶವಾಹಕರು ಸಲ್ಲಲ್ಲಾಹು ಅಲೈಹಿವ ಸಲ್ಲಮರು ನಮ್ಮ ಬಗ್ಗೆ ಹೆಮ್ಮೆ ಪಡುತ್ತಾರೆ. ಪವಿತ್ರ ಪ್ರವಾದಿ (ಸ.ಅ) ರಿಂದ ಯಾವುದಾದರು ಯೋಜನೆಯಾದರೆ ಮತ್ತು ನಾವು ಕಾರ್ಯನಿರ್ವಹಿಸಬೇಕು ಎಂದು ಸಹಾಬಗಳು ಯಾವಾಗಲೂ ಚಿಂತಿಸುತ್ತಿದ್ದರು. ಶ್ರೀಮಂತರು ತಮ್ಮ ಶ್ರೀಮಂತಿಕೆಯ ಕಾರಣದಿಂದ ಖರ್ಚು ಮಾಡುತ್ತಿದ್ದರು ಆದರೆ ಬಡವರೂ ಸಹ ಹಿಂದೆ ಉಳಿಯುತ್ತಿರಲಿಲ್ಲ. ಅವರೂ ಕೊಡು ತಮ್ಮ ಪಾಲನ್ನು ನೀಡುತ್ತಿದ್ದರು. ಅದು ಇಬ್ಬನಿಯ ಹನಿಗೆ ಸಮನಾದರೂ.

ಹಝ್ರತ್ ಅಬು ಮಸ್‌ಊದ್ ಅನ್ಸಾರಿ(ರ) ವರದಿ ಮಾಡುತ್ತಾರೆ,

ಹಝ್ರತ್ ಪೈಗಂಬರ್(ಸ) ಅವರು ಸದಖ ಮಾಡಲು ಉಪದೇಶಿಸಿದಾಗ, ನಮ್ಮಲ್ಲಿ ಒಬ್ಬರು ಮಾರುಕಟ್ಟೆಗೆ ಹೋಗಿ ಅಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದನು ಹೀಗೆ ಆಗಮ ಶ್ರಮದ ಪ್ರತಿಫಲವಾಗಿ ಒಂದು ಮುದ್ದ್ ದವಸಧಾನ್ಯ ಇತ್ಯಾದಿಗಳು ಪಡೆಯುತ್ತಿದ್ದನು ಆತನು ಅದನ್ನು ಸದಖದಲ್ಲಿ ನೀಡುತ್ತಿದ್ದನು, ನಾವು ಅದರಲ್ಲಿ ಭಾಗವಹಿಸಬೇಕೆ ಎಂಬ ಅವನ ಪ್ರಯತ್ನವಾಗಿರುತ್ತಿತ್ತು. ಮತ್ತು ಶ್ರಮವಹಿಸಿ ಭಾಗವಹಿಸುತ್ತಿದ್ದರು. ವರದಿಗಾರರು ಹೇಳುತ್ತಾರೆ: ಅವರಲ್ಲಿ ಕೆಲವರು ಒಂದೊಂದು ಲಕ್ಷ ದಿರ್ಹಮ್‌ಗಳನ್ನು ಹೊಂದಿದ್ದರು, ಅವರು ಅದನ್ನು ದುಡಿಮೆ ಮಾಡಿ ಚಂದಾ ನೀಡುತ್ತಿದ್ದರು. (ಬುಖಾರಿ, ಕಿತಾಬುಲ್ ಉಜಾರ)

ಒಟ್ಟಿನಲ್ಲಿ ಇದು ತ್ಯಾಗದ ಅನುಗ್ರಹವಾಗಿದೆ. ಆದ್ದರಿಂದ, ತಾವು ಬಡವರು ಎಂದು ಭಾವಿಸುವವರು. ಕೆಲವರು ದಾನ ಮಾಡಲು ಪರಿಸ್ಥಿತಿ ಅನುಮತಿಸುವುದಿಲ್ಲ, ಆದ್ದರಿಂದ ಕ್ಷಮಿಸಿ ಎಂದು ಹೇಳುಬಿಡುತ್ತಾರೆ. ಅಂತಹವರು ಚಂದಾ ನೀಡದಿರುವುದರಿಂದ ಅಲ್ಲಾಹನ ಅನುಗ್ರಗಳನ್ನು ಮತ್ತು ವಾಗ್ದಾನಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎಂದು ಆಲೋಚಿಸಬೇಕು. ಪಾಕಿಸ್ತಾನದಲ್ಲೂ ಸಾಕಷ್ಟು ಬಡತನವಿದೆ, ಆದರೆ ಅಲ್ಲಾಹನ ಅನುಗ್ರಹದಿಂದ ಅವರು ಪ್ರತಿ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ ಮತ್ತು ಚಂದಾ ನೀಡುತ್ತಾರೆ......... ಹೀಗೆ ಈ ರಹಸ್ಯವನ್ನು ತಿಳಿದುಕೊಂಡಿರುವ ಅಹ್ಮದಿಯರು ಎಷ್ಟು ಹೆಚ್ಚಾಗಿ ಚಂದಾ ನೀಡುತ್ತಾರೆ ಎಂದರೆ ಕೆಲವೊಮ್ಮೆ ಅವರಿಗೆ ತಡೆಯಬೇಕಾಗುತ್ತದೆ ಆದರೆ ಆ ಸಂದರ್ಭದಲ್ಲಿ ಅವರ ಉತ್ತರ ಏನಾಗಿರುತ್ತದೆ ಎಂದರೆ ನೀವು ನಮ್ಮ ಚೀಲಗಳ ಬಾಯಿಯನ್ನು ಮುಚ್ಚಲು ಬಯಸುತ್ತಿದ್ದೀರ? ನಾವು ನಮ್ಮ ದೇವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ, ಅದರಲ್ಲಿ ಹಸ್ತಕ್ಷೇಪ ಮಾಡಬೇಡಿ. ಈ ಅಭಿವ್ಯಕ್ತಿ ಪ್ರಪಂಚದ ಎಲ್ಲೆಡೆ ಎಲ್ಲ ಖೌಮುಗಳಲ್ಲಿ ಕಂಡುಬರುತ್ತದೆ. ಮತ್ತು ಇದು ಅಹ್ಮದಿ ಸಮಾಜದ ಪ್ರತಿಯೊಂದು ಖೌಮಿನಲ್ಲಿಯೂ ಕಾಣಬೇಕಾಗಿದೆ. ಕೊರತೆ ಇರುವವರು ಅದರತ್ತಲೂ ಗಮನ ಹರಿಸಬೇಕು. ಮತ್ತು ಅಲ್ಲಾನ ಅನುಗ್ರಹದಿಂದ, ಆಫ್ರಿಕಾದ ಬಡ ದೇಶಗಳಾಗಲಿ ಅಥವಾ ಶ್ರೀಮಂತ ರಾಷ್ಟ್ರಗಳಾಗಲಿ ಈ ಮನೋಭಾವವನ್ನು ವ್ಯಕ್ತಪಡಿಸುವ ದೊಡ್ಡ ಸಂಖ್ಯೆಯಲ್ಲಿ ಜನರಿದ್ದಾರೆ. ಆಫ್ರಿಕಾದ ಬಡವರು ತಮಗಾಗಿ ಮಾತ್ರ ಖರ್ಚು ಮಾಡಿಸುತ್ತಾರೆ ಎಂದು ಯಾರೂ ಭಾವಿಸಬಾರದು, ಅವರಲ್ಲಿಯೂ ತ್ಯಾಗದ ಉನ್ನತ ಗುಣಮಟ್ಟವನ್ನು ಹೊಂದಿಸುವ ಮತ್ತು ಅಗತ್ಯವಿರುವಂತೆ ಇತರ ದಾನಗಳನ್ನು ನೀಡುವವರೂ ಇದ್ದಾರೆ. ಈಗ ನಾನು ಘಾನಾದ ಉದಾಹರಣೆಯನ್ನು ನೀಡುತ್ತೇನೆ. ನಮ್ಮ ಮಹಾನ್ ತ್ಯಾಗ ನೀಡುವವರೂ ಇದ್ದಾರೆ, ಅವರಲ್ಲಿ ಒಬ್ಬರು ನಮ್ಮ ಯೂಸುಫ್ ಅಡೋಸಾಯಿ ಸಾಹಿಬ್ ಇದ್ದಾರೆ, ಅವರು ಸ್ಥಳೀಯ ಮಿಷನರಿಯೂ ಆಗಿದ್ದರು, ಮತ್ತು ಈಗಲೂ ಇದಾರೆ. ಅವರು ಕೆಲವು ಔಷಧಗಳು ಇತ್ಯಾದಿಗಳನ್ನು ತಯಾರಿಸುತ್ತಿದ್ದರು. ಸಣ್ಣ ವ್ಯಾಪಾರ ಬಹುಶಃ ಆಗಿತ್ತು. ಮತ್ತು ಅವರು ಅನಾರೋಗ್ಯದಿಂದ ಬಳಲುತ್ತಿದ್ದರು ಅವರ ಕಾಲಿನಲ್ಲಿ ಆಳವಾದ ಗಾಯವಾಗಿತ್ತು ಅದು ಮೂಳೆಗೆ ಹೋಗಿ ತಲುಪಿತ್ತು. ಬಹಳ ನೋವಿವಲ್ಲಿದ್ದರು. ಆದ್ದರಿಂದ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ರ ಚಿಕಿತ್ಸೆ ಮತ್ತು ಪ್ರಾರ್ಥನೆಯೊಂದಿಗೆ, ಸರ್ವಶಕ್ತನಾದ ಅಲ್ಲಾಹನು ಅವರನ್ನು ಅನುಗ್ರಹಿಸಿದನು ಅವರ ಗಾಯವು ವಾಸಿಯಾಯಿತು. ತದನಂತರ ಅವರು ಮೊದಲಿಗಿಂತ ಹೆಚ್ಚು ಜಮಾಅತ್ ಸೇವೆಯನ್ನು ಪ್ರಾರಂಭಿಸಿದರು. ಮತ್ತು ವ್ಯಾಪಾರದಲ್ಲಿಯೂ ಅವರು ಕೆಲವು ಗಿಡಮೂಲಿಕೆಗಳನ್ನು ತಯಾರಿಸಲು ಇಷ್ಟಪಡುತ್ತಿದ್ದರು, ಅದು ಔಷಧಿಗಳಾಗಿ ಮಾರ್ಪಟ್ಟಿತು, ಅದು ವ್ಯಾಪಾರವನ್ನು ಹೊಳೆಯುವಂತೆ ಮಾಡುತ್ತದೆ ಮತ್ತು ಅವರು ಊಹಿಸಲೂ ಸಾಧ್ಯವಾಗದ ಹಣವನ್ನು ಹೇರಳವಾಗಿ ತಂದಿತು. ಆದರೆ ಅವರು ಈ ಹಣದಲ್ಲಿ ಕೂರಲಿಲ್ಲ, ಆದರೆ ಅವರು ತಮ್ಮ ವಾಗ್ದಾನದ ಪ್ರಕಾರ ಜಮಾಅತ್ತಿಗಾಗಿ ಅಸಾಧಾರಣ ರೂಪದಲ್ಲಿ ಖರ್ಚು ಮಾಡಿದರು ಮತ್ತು ಈಗಲೂ ಮಾಡುತ್ತಿದ್ದಾರೆ. ವಿವಿಧ ಕಟ್ಟಡಗಳು ಮತ್ತು ಮಸೀದಿಗಳನ್ನು ನಿರ್ಮಿಸಿದರು. ಮತ್ತು ಬಹಳ ದೊಡ್ಡ ದೊಡ್ಡ ಭವ್ಯವಾದ ಮಸೀದಿಗಳನ್ನು ನಿರ್ಮಿಸಿದರು, ಸಣ್ಣ ಸಣ್ಣ ಮಸೀದಿಗಳಲ್ಲ ನಿರ್ಮಿಸಿಲ್ಲ ಮತ್ತು ಈಗಲೂ ಪ್ರತಿಕ್ಷಣ ತ್ಯಾಗಕ್ಕೆ ಸಿದ್ಧರಿರುತ್ತಾರೆ.

ಹೀಗೆ, ಅಹ್ಮದಿಯಾ ಜಮಾಅತ್‌ನಲ್ಲಿರುವ ಆರ್ಥಿಕ ತ್ಯಾಗದ ವಿವಿಧ ಯೋಜನೆಗಳು ಸರ್ವಶಕ್ತನಾದ ಅಲ್ಲಾಹನಿಗೆ ಸಾಮೀಪ್ಯವನ್ನು ತರುವ ಮತ್ತು ಮನಸ್ಸುಗಳನ್ನು ಶುದ್ಧೀಕರಿಸುವ ಸಾಧನಗಳಾಗಿವೆ.

ಸರ್ವಶಕ್ತನಾದ ಅಲ್ಲಾಹನು ತನ್ನ ಮಾರ್ಗದಲ್ಲಿ ಖರ್ಚು ಮಾಡಲು ಆದೇಶಿಸುತ್ತಾ ಹೀಗೆ ಹೇಳುತ್ತಾನೆ: **ವಮಾಲಕುಮ್ ಅಲ್ಲಾ ತುನ್‌ಫಿಖೂ ಫೀ ಸಬೀಲಿಲ್ಲಾಹಿ** (ಅಲ್‌ಹದೀದ್: 11) ಮತ್ತು ನಿಮಗೇನಾಗಿದೆ ನೀವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಿಲ್ಲ. ಆದ್ದರಿಂದ, ನಮ್ಮ ಜೀವನವನ್ನು ಸುಂದರಗೊಳಿಸಲು ಆರ್ಥಿಕ ತ್ಯಾಗದಲ್ಲಿ ಭಾಗವಹಿಸುವುದು ಬಹಳ ಮುಖ್ಯ, ಆದರೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡದವರು ತಮ್ಮನ್ನು ತಾವು ನಾಶಪಡಿಸಿಕೊಳ್ಳುತ್ತಾರೆ ಎಂಬ ಎಚ್ಚರಿಕೆಯೂ ಇದರಲ್ಲಿದೆ. ಅಲ್ಲಾಹನು ಹೇಳುವಂತೆ: **ವ ಅನ್‌ಫಿಖೂ ಫೀ ಸಬೀಲಿಲ್ಲಾಹಿ ವಲಾ ತುಲ್‌ಖೂ ಬಿ ಅಯ್‌ದೀಕುಮ್ ಇಲತ್ತಹ್‌ಲುಕತಿ** (ಅಲ್‌ಬಖರ: 196) ಅಂದರೆ: ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ. ನಿಮ್ಮ ಸ್ವಂತ ಕೈಗಳಿಂದಲೇ ನೀವು ವಿನಾಶದಲ್ಲಿ ಸಿಲುಕಿಕೊಳ್ಳಬೇಡಿರಿ. ಆದ್ದರಿಂದ, ನಾನು ಹೇಳಿದಂತೆ, ಜಮಾಅತ್ತಿನಲ್ಲಿ ನಡೆಯುವ ಈ ಆರ್ಥಿಕ ಯೋಜನೆಗಳು ಅಥವಾ ಕಡ್ಡಾಯವಾದ ಚಂದಾಗಳಿಗೆ ಗಮನ ನೀಡುವುದು ಸರ್ವಶಕ್ತನಾದ ಅಲ್ಲಾಹನ ಆದೇಶಗಳಿಗೆ ಅನುಗುಣವಾಗಿರುತ್ತದೆ. ಆದ್ದರಿಂದ, ಪ್ರತಿಯೊಬ್ಬ ಅಹ್ಮದಿಯು ತನ್ನನ್ನು ನಿಜವಾಗಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ತಿಗೆ ಸಂಬಂಧವಹಿಸಿದ್ದರೆ ಮತ್ತು ತನ್ನ ಸಂಬಂಧವನ್ನು ದೃಢಪಡಿಸಲು ಬಯಸಿದರೆ, ತನ್ನ ನಂಬಿಕೆಯನ್ನು ರಕ್ಷಿಸಲು ಆರ್ಥಿಕ ತ್ಯಾಗಗಳ ಕಡೆಗೆ ಗಮನವಹಿಸಬೇಕು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಪ್ರಾಮಾಣಿಕ ಜನರ ಒಂದು ದೊಡ್ಡ ಸಮೂಹವು ಇದರಲ್ಲಿ ಭಾಗವಹಿಸುತ್ತಾರೆ.......

ನಾನು ಹೇಳಿದಂತೆ, ಉದಾರ ದಾನಿಗಳು ಮತ್ತು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರು ಅನೇಕ ಜನರು ಜಮಾಅತ್ತಿನಲ್ಲಿದ್ದಾರೆ. ಆದರೆ ಉತ್ತಮ ಆದಾಯವಿರುವ ಅನೇಕ ಜನರಿದ್ದಾರೆ ಅವರು ನೆಪಗಳನ್ನು ಹುಡುಕುತ್ತಾರೆ. ಅನೇಕರು, ತಮ್ಮ ಖರ್ಚುಗಳನ್ನು ಸೇರಿಸಿದ ನಂತರ, ಇದು ನಮ್ಮ ನಿಜವಾದ ಆದಾಯವಾಗಿದೆ ಎಂದು ಹೇಳುತ್ತಾರೆ. ಇದರ ಪ್ರಕಾರ ನಾವು ಚಂದಾ ನೀಡುತ್ತೇವೆ. ನಮಗೆ ಯಾವ ಆದಾಯವಿಲ್ಲ, ಪರಿಸ್ಥಿತಿ ತುಂಬಾ ಕೆಟ್ಟದಾಗಿದೆ. ಹಾಗಾಗಿ ಅವರೂ ಸಹ ಯೋಚಿಸಬೇಕು, ಅಕೃತಜ್ಞರಾಗಬಾರದು. ಈ ಅಕೃತಜ್ಞತೆಯಿಂದಾಗಿ, ಒಳ್ಳೆಯ ಪರಿಸ್ಥಿತಿಗಳು ಹದಗೆಟ್ಟಬಹುದು. ಸರ್ವಶಕ್ತನಾದ ಅಲ್ಲಾಹನನ್ನು ಮೋಸಗೊಳಿಸಲು ಸಾಧ್ಯವಿಲ್ಲ. ಸರ್ವಶಕ್ತನಾದ ಅಲ್ಲಾಹನು ನಿಮಗೆ ಪ್ರಿಯವಾದ ಸಂಪತ್ತನ್ನು ನನ್ನ ಮಾರ್ಗದಲ್ಲಿ ಖರ್ಚು ಮಾಡಿ. ನಿಮ್ಮ ಅಗತ್ಯಗಳನ್ನು ಬದಿಗಿಟ್ಟು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿ ಎಂದು ಹೇಳುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ನೀವು ನಿಮ್ಮ ಅಭಿಲಾಷೆಗಳನ್ನು ತ್ಯಜಿಸಿ ನಿಮ್ಮ ಸುಖಭೋಗಗಳನ್ನು ತ್ಯಜಿಸಿ,ನಿಮ್ಮ ಗೌರವಗಳನ್ನು ತ್ಯಜಿಸಿ, ನಿಮ್ಮ ಸಂಪತ್ತನ್ನು ತ್ಯಜಿಸಿ, ನಿಮ್ಮ ಜೀವನವನ್ನು ತ್ಯಜಿಸಿ ಅಲ್ಲಾಹನ ಮಾರ್ಗದಲ್ಲಿ ಮೃತ್ಯುವಿನ ದೃಶ್ಯವನ್ನು ನಿಮ್ಮ ಮುಂದಿರಿಸುವಂತಹ ಕಹಿಯನ್ನು ಅನುಭವಿಸುವ ತನಕ ನೀವು ಅಲ್ಲಾಹನ ಪ್ರೀತಿಯನ್ನು ಗಳಸುವುದೇ ಸಾಧ್ಯವಿಲ್ಲ. ಆದರೆ ನೀವು ಕಹಿಯಾದ ಜೀವಿತವನ್ನು ಕೈಗೊಳ್ಳುವುದಾದರೆ ನೀವು ಒಬ್ಬ ಪ್ರಿಯ ಮಗುವಿನ ಹಾಗೆ ಅಲ್ಲಾಹನ ಮಡಿಲಲ್ಲಿ ಇರಿಸಲ್ಪಡುವಿರಿ. ನೀವು ನಿಮಗಿಂತ ಮುಂಚಿತವಾಗಿ ಗತಿಸಿ ಹೋದ ಸತ್ಯವಂತರಾದ ಜನರ ವಾರೀಸುದಾರರಾಗುವಿರಿ. ಎಲ್ಲಾ ವಿಧ ಅನುಗ್ರಹಗಳ ಬಾಗಿಲು ನಿಮಗಾಗಿ ತೆರೆಯಲ್ಪಡುವುವು............. ನೀವು ಸ್ವತಃ ನಿಜವಾಗಿಯೂ ನಿಮ್ಮ ಲೌಕಿಕ ಆಶಾಭಿಲಷೆಯಿಂದ ಮುಕ್ತರಾಗಿ ಮರಣ ಹೊಂದುವಿರಾದರೆ ಆಗ ನೀವು ಅಲ್ಲಾಹನಲ್ಲಿ ಪ್ರಕಟವಾಗುವಿರಿ. ಅಲ್ಲಾಹನು ನಿಮ್ಮ ಜೊತೆಗಿರುವನು. ನೀವು ಯಾವ ಮನೆಯಲ್ಲಿ ವಾಸಿಸುತ್ತಿರುವಿರೋ ಆ ಮನೆಯು ಅನುಗ್ರಹಿಸಲ್ಪಡುವುದು. ನಿಮ್ಮ ಮನೆಯ ಗೋಡೆಗಳ ಮೇಲೆ ಸಹ ಅಲ್ಲಾಹನು ಅನುಗ್ರಹಗಳ ಸುರಿಸಲ್ಪಡುವುದು. ಇಂತಹ ವ್ಯಕ್ತಿ ವಾಸಿಸುವ ನಗರ ಸಹ ಅನುಗ್ರಹಕ್ಕೆ ಪಾತ್ರವಾಗುವುದು. (ಅಲ್-ವಸಿಯ್ಯತ್, ರೂಹಾನಿ ಖಝಾಈನ್, ಸಂಪುಟ-20, ಪುಟಗಳು 308-307)

ನಾನು ಈ ಸಮಯದಲ್ಲಿ ತ್ಯಾಗದ ಕೆಲವು ಉದಾಹರಣೆಗಳನ್ನು ಪ್ರಸ್ತುತಪಡಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ: ದೇಹದ ಮೇಲೆ ಬಹಳ ಕಷ್ಟ ಬಟ್ಟೆ ಇರುತ್ತದೆ, ಆದರೆ ಪ್ರಾಮಾಣಿಕತೆ ಮತ್ತು ನಿಷ್ಠೆ ಹೆಚ್ಚಾಗುತ್ತದೆ, ನಾನು ಇದಕ್ಕೆ ಒಂದು ಉದಾಹರಣೆ ನೀಡುತ್ತೇನೆ.

ಆಫ್ರಿಕಾ ದೇಶವಾದ ಮಾಲಿಯಲ್ಲಿ ಪ್ರಾಮಾಣಿಕ ವ್ಯಕ್ತಿಯ ಘಟನೆಯನ್ನು ವಿವರಿಸುತ್ತಾ, ಅಲ್ಲಿನ ಬೋಧಕರು (ಮುಬಲ್ಲಿಗ್) ಬರೆಯುತ್ತಾರೆ: ಅವರ ಪೋಷ್ಟಿಂಗ್ ಮಾಲಿಯ ಸೆಗೋವಿಯಾ ಎಂಬ ಪ್ರದೇಶದಲ್ಲಾಯಿತು. ಒಂದು ದಿನ ಜುಮುಅ ನಮಾಝ್ ನಂತರ ಮುಅಲ್ಲಿಮ್ ಸಾಹಿಬರು ಓರ್ವ ವ್ಯಕ್ತಿಯನ್ನು ಇವರು ಮೌಲವೀಗಳ ದೊಡ್ಡ ಕುಟುಂಬದಿಂದ ಬಂದವರು ಮತ್ತು ಇವರು ಬೈಅತ್ ಮಾಡಿದ್ದಾರೆ ಎಂದು ಪರಿಚಯಿಸಿದರು. ಅವರು ಹೇಳಿದರು, ಇಂದು ನಾನು ಆಕಾಶವಾಣಿಯಲ್ಲಿ ಚಂದಾದ ಕುರಿತು ಇದ್ದ ಖಲೀಫತುಲ್ ಮಸೀಹರ ಖುತ್‌ಬವನ್ನು ಆಲಿಸಿದೆ ಆದ್ದರಿಂದ ನಾನು ಚಂದಾ ನೀಡಲು ಇಲ್ಲಿ ಬಂದಿದ್ದೇನೆ. ನಾನು ಅವರಿಗೆ ದೈವಮಾರ್ಗದಲ್ಲಿ ಖರ್ಚು ಮಾಡುವ ಅನುಗ್ರಹಗಳ ಬಗ್ಗೆ ತಿಳಿಸಲು ಆಯತ್ **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ**- ಎಂದು ಹೇಳಿದಾಗ ಅವರು ಬಹಳ ಆಶ್ಚರ್ಯಚಕಿತರಾಗಿ ಹೇಳಿದರು ನಾನು ರೇಡಿಯೊದಲ್ಲಿ ಕೇಳಿದ ಖುತ್‌ಬದಲ್ಲಿ ಇದೇ ಆಯತ್ ಅನ್ನು ಕೇಳಿದ್ದೇನೆ. ನಾನು ಐದು ಸಾವಿರ ಸಿಫಾಗಳನ್ನು ದಾನ ಮಾಡುತ್ತೇನೆ ಎಂದು ಭಾವಿಸಿದ್ದೆ, ಆದರೆ ನಂತರ ಸೈತಾನನು ನನ್ನ ಮನಸ್ಸಿನಲ್ಲಿ ಕೇವಲ ಎರಡು ಸಾವಿರ ಸೀಫಾಗಳು ಸಾಕು ಎಂದು ಪಿಸುಗುಟ್ಟಿದನು, ಆದರೆ ಈಗ ನೀವು ಈ ಆಯತ್ ಅನ್ನು ಮತ್ತೆ ಹೇಳಿದ್ದೀರಿ, ಆದ್ದರಿಂದ ಇದು ಸರ್ವಶಕ್ತನಾದ ಅಲ್ಲಾಹನ ವ್ಯವಸ್ಥೆಯಾಗಿದೆ ಎಂದು ನನ್ನ ಮನಸ್ಸಿಗೆ ಮನವರಿಕೆಯಾಯಿತು. ಈಗ ನಾನು 5000 ಸೀಫಾಗಳನ್ನು ದಾನವಾಗಿ ನೀಡುತ್ತೇನೆ. ಹೀಗೆ ಅವರು

ಐದು ಸಾವಿರ ಸಿಫಾಗಳನ್ನು ದಾನ ಮಾಡಿದರು, ಆದ್ದರಿಂದ ಅಲ್ಲಾಹನ ಅನುಗ್ರಹದಿಂದ ಅಲ್ಲಾಹನ ಅನುಗ್ರಹದಿಂದ ನವ ಅಹ್ಮದಿಯರು ಆರ್ಥಿಕ ತ್ಯಾಗದಲ್ಲಿ ಈಗ ಮುಂಚೂಣಿಯಲ್ಲಿದ್ದಾರೆ. (ಪುಟ-47)

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರು ನವೆಂಬರ್ 6, 2011 ರಂದು ಐವರಿ ಕೋಸ್ಟ್‌ನ ನವ ಅಹ್ಮದಿಯರ ಈ ವಿಶ್ವಾಸವರ್ಧಕ ಘಟನೆಯನ್ನು ವಿವರಿಸಿದರು.

ನಮ್ಮ ಐವರಿ ಕೋಸ್ಟ್‌ನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ನಮ್ಮ ಸ್ನೇಹಿತರಲ್ಲಿ ಒಬ್ಬರು ಅಲಿಡೋ ಔಡ್ರಾಗೋ ಸಾಹಿಬರು 2009 ರ ಕೊನೆಯಲ್ಲಿ ಬೈಅತ್ ಮಾಡಿದರು ಮತ್ತು ಬೈಅತ್‌ನ ಮೊದಲ ದಿನದಿಂದಲೇ, ಅವರು ತಮ್ಮ ಆದಾಯವನ್ನು ಲೆಕ್ಕಹಾಕಿದ ನಂತರ ನಿಯಮಿತ ದರದ ಪ್ರಕಾರ ಚಂದಾಗಳನ್ನು ಪಾವತಿಸಲು ಪ್ರಾರಂಭಿಸಿದರು. ಈ ಅವಧಿಯಲ್ಲಿ, ಅವರು ದಾನದ ಹಲವಾರು ಅನುಗ್ರಹಗಳಿಗೆ ಸಾಕ್ಷಿಯಾದರು. ಒಂದು ದಿನ ಅವರು ಜಮಾಅತ್ತಿನ ಹಳೆಯ ಸದಸ್ಯರೊಂದಿಗೆ ಈ ಅನುಗ್ರಹಗಳನ್ನು ಪ್ರಸ್ತಾಪಿಸುತ್ತಿದ್ದರು. 2004 ರಲ್ಲಿ ಬೈಅತ್ ಮಾಡಿದ ಹಳೆಯ ಸದಸ್ಯರಲ್ಲಿ ಒಬ್ಬರು ಈ ಘಟನೆಗಳನ್ನು ಕೇಳಿದ ನಂತರ ತಮ್ಮ ಚಂದಾವನ್ನು 2,000 ಫ್ರಾಂಕ್‌ಗಳಿಂದ 5,000 ಫ್ರಾಂಕ್‌ಗಳಿಗೆ ಹೆಚ್ಚಿಸಿದರು. ಅವರು ಹೇಳುತ್ತಾರೆ: ಇನ್ನೂ ನಾನು ಚಂದಾ ಪಾವತಿಸಲು ಪ್ರಾರಂಭಿಸಲೇ ಇರಲಿಲ್ಲ ಅಷ್ಟರಲ್ಲಿ ಅವರ ಆದಾಯವು ಅಸಾಧಾರಣವಾಗಿ ಹೆಚ್ಚಿರುವುದನ್ನು ಗಮನಿಸಿದರು, ಆದ್ದರಿಂದ ಆ ಹಳೆಯ ಸದಸ್ಯರು ನನ್ನ ಬಳಿಗೆ ಬಂದು ಇಡೀ ಘಟನೆಯನ್ನು ವಿವರಿಸಿ ಹೇಳಿದರು ನಾನು ಐದು ಸಾವಿರ ಫ್ರಾಂಕ್‌ಗಳನ್ನು ನೀಡುತ್ತೇನೆ ಎಂದು ಹೇಳಿದ್ದೆ ಆದರೆ ಇಂದು ನಾನು ಆ ಐದು ಸಾವಿರ ಫ್ರಾಂಕ್‌ಗಳ ಬದಲಾಗಿ ಹತ್ತು ಸಾವಿರ ಫ್ರ್ಯಾಂಕ್ ಸೀಫಾಗಳನ್ನು ಪ್ರತಿ ತಿಂಗಳು ನೀಡುತ್ತೇನೆ ಎಂದು ಹೇಳಿ ಅದಕ್ಕನುಗುಣವಾಗಿ ಪಾವತಿಯನ್ನೂ ಆರಂಭಿಸಿದೆ. ಹೀಗೆ ಅಸಂಖ್ಯಾತ ಹೆಚ್ಚಿನ ಸದಸ್ಯರಿದ್ದಾರೆ ಅವರು ಚಂದಾಗಳನ್ನು ನೀಡುವುದರಲ್ಲಿ ಮುಂಚೂಣಿಯಲ್ಲಿದ್ದಾರೆ.

ಹುಝೂರ್ ಅಖ್ದಸ್[ಅತಬಅ] ಅವರು ನವೆಂಬರ್ 9, 2012 ರಂದು ತಮ್ಮ ಖುತ್‌ಬ ಜುಮುಅದಲ್ಲಿ ಹೇಳಿದರು:

ಕಿರ್ಗಿಸ್ತಾನ್‌ನ ನಮ್ಮ ಬೋಧಕರು (ಮುಬಲ್ಲಿಗ್) ಬರೆಯುತ್ತಾರೆ: 2006 ರಲ್ಲಿ ಓರ್ವ ಕಿರ್ಗಿ ಸ್ನೇಹಿತ ಮಾರ್ಟ್ ಸಾಹಿಬ್ ಎಂಬವರು ಬೈಅತ್ ಮಾಡಿದರು. ತುಂಬಾ ಸಜ್ಜನ ಸ್ವಭಾವದ ಯುವಕರಾಗಿದ್ದರು. ಬೈಅತ್ ಸ್ವೀಕರಿಸಿದ ತಕ್ಷಣ, ನಮ್ಮ ಬೋಧಕರು ಚಂದಾದ ಬಗ್ಗೆ ತಿಳಿಸಲು ತಮಾಷೆಯಾಗಿ ಹೀಗಡ ಹೇಳಿದರು: ಬೇರೆಯವರು ತಮ್ಮ ಜಮಾಅತ್ತಿನಲ್ಲಿ ಸೇರಿಸಿಕೊಳ್ಳಲು ಅವರಿಗೆ ಹಣ ನೀಡುತ್ತಾರೆ, ಆದರೆ ನಮ್ಮ ಜಮಾಅತ್ತಿನಲ್ಲಿ ಸೇರಿದ ನಂತರ ಹಣ ನೀಡಬೇಕಾಗುತ್ತದೆ. ಅದಕ್ಕೆ ಅವರು ನಾನು ತಿಂಗಳಿಗೆ ಮುನ್ನೂರು ಕಿರ್ಗಿಜ್ ಚಂದಾ ಆಮ್‌ವನ್ನಾಗಿ ನೀಡುತ್ತೇನೆ ಎಂದು ಹೇಳಿದರು. ಸ್ವಲ್ಪ ಸಮಯದ ನಂತರ ಅವರು ನಾಲ್ಕು ನೂರು ಮತ್ತು ಸ್ವಲ್ಪ ಸಮಯದ ನಂತರ ಎಂಟು ನೂರು ಮಾಡಿದರು. ಮತ್ತಷ್ಟು ಕಾಲದ ನಂತರ ಅವರು ಯಾರನ್ನೂ ಕೇಳದೆ ಸ್ವತಃ ತಿಂಗಳಿಗೆ ಒಂದು ಸಾವಿರ ಸುಮ್ ನೀಡಲು ಪ್ರಾರಂಭಿಸಿದರು.

ಫ್ರಾನ್ಸ್‌ನ ಅಮೀರ್ ಸಾಹಿಬ್ ಮೊರಾಕೊಗೆ ಭೇಟಿ ನೀಡಿದರು ಅವರು ಹೇಳುತ್ತಾರೆ: ಅಲ್ಲಿ ನಾನು ತ್ಯಾಗ ಮತ್ತು ಪ್ರಾಮಾಣಿಕತೆಯಿಂದ ತುಂಬಿದ ಒಂಬತ್ತು ಅಹ್ಮದಿ ಸ್ನೇಹಿತರನ್ನು ಕಂಡುಕೊಂಡೆ. ಮತ್ತು ಅವರಿಗೆ ಖಿಲಾಫತ್ ಬಗ್ಗೆ ಅಪಾರವಾದ ಪ್ರೀತಿ ಇತ್ತು. ಮತ್ತು ಅವರಿಗೆ ಆರ್ಥಿಕ ತ್ಯಾಗದ ಬಗ್ಗೆ ಹೇಳಲಾಯಿತು ಮತ್ತು ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಬಗ್ಗೆ ಅವರು ಹೇಳುತ್ತಾರೆ: ಅವರು ಕೆಲವು ದಿನಗಳ ನಂತರ ಅಧ್ಯಕ್ಷರ ಬಳಿಗೆ ಬಂದು ಅವರಿಗೆ ದೊಡ್ಡ ಮೊತ್ತವನ್ನು ನೀಡಿ, ಹೇಳಿದರು ನಾನು ಅಹ್ಮದಿಯಾದ ದಿನದಿಂದ ಇದು ನನ್ನ ಚಂದಾವಾಗಿದೆ, ಏಕೆಂದರೆ ನಾನು ಚಂದಾದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳನ್ನು ಮತ್ತು ಖಲೀಫರ ಸಲಹೆಯನ್ನು ಕೇಳಿರಲಿಲ್ಲ. ಈಗ ನಾನು ಅದನ್ನು ಆಲಿಸಿದ್ದೇನೆ, ನಾನು ಅದರಿಂದ ಹಿಂದಿರಲು ಸಾಧ್ಯವಿಲ್ಲ. ನೈಜರ್‌ನಿಂದ ಅಸ್ಗರ್ ಅಲಿ ಭಟ್ಟಿ ಸಾಹಿಬ್ ಬರೆಯುತ್ತಾರೆ: ಅವರು ಅಕ್ಟೋಬರ್ 2011 ರಲ್ಲಿ ತಬ್ಲೀಗ್‌ನ ಸಂದರ್ಭದಲ್ಲಿ ಗಿಡಾ ಬ್ರಾವೂ ಗ್ರಾಮವನ್ನು ತಲುಪಿದರು. ಮಗ್ರಿಬ್ ನಮಾಝ್ ನಂತರ ತಬ್ಲೀಗ್ ಮಾಡಲಾಯಿತು ಮತ್ತು ಇಶಾ ನಮಾಝ್ ನಂತರ ನನ್ನ ಭೇಟಿಗಳ ವಿವಿಧ ವೀಡಿಯೊಗಳನ್ನು ತೋರಿಸಲಾಯಿತು. ಅವರು ಜಲ್ಸವನ್ನು ತೋರಿಸಿದರು, ಮಸೀದಿಗಳ ಬಗ್ಗೆ ಕಾರ್ಯಕ್ರಮಗಳನ್ನು ತೋರಿಸಿದರು, ತಬ್ಲೀಘಿ ಪ್ರಯತ್ನಗಳ ಬಗ್ಗೆ ಕಾರ್ಯಕ್ರಮಗಳನ್ನು ತೋರಿಸಿದರು, ಇಮಾಮ್ ಮಹದಿಯ ಆಗಮನದ ಬಗ್ಗೆ ಹೇಳಿದರು, ಬೈತುಲ್-ಮಾಲ್ ವ್ಯವಸ್ಥೆಯ ಬಗ್ಗೆ ಹೇಳಿದರು. ಇದೆಲ್ಲ ವಿಡಿಯೋದಲ್ಲಿತ್ತು, ವಿಡಿಯೋ ಮುಗಿದಾಗ ಒಬ್ಬ ಇಮಾಮ್ ಎದ್ದು ನಿಂತು ಹಿರಿಯರನ್ನು ಉದ್ದೇಶಿಸಿ ಮಸೀದಿಯಿಂದ ಹೊರಟು ಹೋದರು. ಅವರು ಹೇಳುತ್ತಾರೆ: ನಾವು ಆತಂಕಗೊಂಡಿದ್ದೆವು, ಆದರೆ ಸ್ವಲ್ಪ ಸಮಯದ ನಂತರ ಅವರು ಹಿಂತಿರುಗಿ ಹೇಳಿದರು: ಇಮಾಮ್ ಮಹದಿಯವರು ಆಗಮಿಸಿದ್ದಾರೆ ಮತ್ತು ಬೈತುಲ್ ಮಾಲ್ ವ್ಯವಸ್ಥೆ ಸ್ಥಾಪಿಸಲಾಗಿದೆ ಎಂದು ನಮಗೆ ಈಗ ತಿಳಿದು ಬಂದಿದೆ. ನಾವು ಈ ವ್ಯವಸ್ಥೆಯಲ್ಲಿ ಭಾಗವಹಿಸಬೇಕು ಮತ್ತು ಚಂದಾಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂಬ ಕಾರಣಕ್ಕಾಗಿ ನಾನು ಅವರೆಲ್ಲರನ್ನೂ ಕರೆದುಕೊಂಡು ಹೋದೆ. ಹೀಗಾಗಿ ಅವರು ತಕ್ಷಣವೇ ಅಲ್ಲಿ ಹಣವನ್ನು ಸಂಗ್ರಹಿಸಿ ನಮ್ಮ ಮಿಷನರಿಗೆ ನಿಡಿದರು ಮತ್ತು ಅದೇ ಸಮಯದಲ್ಲಿ ಅವರು ಬಯತ್ ಫಾರ್ಮ್ ಅನ್ನು ಸಹ ತುಂಬಿದರು.

ತಾಂಝಾನಿಯಾದ ದಾರುಸ್ಸಲಾಮ್‌ನ ಅಹ್ಮದಿ ಸ್ನೇಹಿತ ಈಸಾ ಸಾಹಿಬ್ ಹೇಳುತ್ತಾರೆ: ಅವರು ತೊಂಬತ್ತರ ದಶಕದಲ್ಲಿ ಅಹ್ಮದಿಯತ್ ಅನ್ನು ಸ್ವೀಕರಿಸಿದರು. ಅದಕ್ಕೂ ಮೊದಲು, ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿದ್ದರು, ಆದರೆ ಅಹ್ಮದಿಯ್ ಅನ್ನು ಸ್ವೀಕರಿಸಿದ ನಂತರ, ಅವರು ನಂಬಿಕೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದರು. ಈಗ, ಮಾಶಾಅಲ್ಲಾಹ ಅವರು ಮೂಸಿಯಾಗಿದ್ದಾರೆ ಮತ್ತು ಆರ್ಥಿಕ ತ್ಯಾಗ ಮಾಡುವವರಾಗಿದ್ದಾರೆ. ಯಾವಾಗಲು ಅವರು ತಮ್ಮ ಮತ್ತು ತಮ್ಮ ಕುಟುಂಬದ ಚಂದಾಗಳನ್ನು ವಾಗ್ದಾನ ಮಾಡಿರುವುದಕ್ಕಿಂತ ಹೆಚ್ಚಾಗಿ ನೀಡುತ್ತಾರೆ. ಜಮಾಅತ್ತಿನ ಬೋಧನೆಗಳನ್ನು ಅನುಸರಿಸುವುದರಲ್ಲಿ ಹಳೆಯ ಅಹ್ಮದೀಯರಿಗಿಂತ ಬಹಳ ಮುಂದಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಅವರು ದಾರುಸ್ಸಲಾಮ್ ತಾಂಝಾನಿಯಾದ ಪ್ರಾದೇಶಿಕ ಅಧ್ಯಕ್ಷರಾಗಿದ್ದಾರೆ. ಅವರು ಹೇಳುತ್ತಾರೆ: ನಾನು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ತ್ಯಾಗ ಮಾಡಲು ಪ್ರಾರಂಭಿಸಿದಾಗಿನಿಂದ, ಅಲ್ಲಾಹನ ಅನೇಕ ಅನುಗ್ರಹಗಳು ನನ್ನ ಮೇಲೆ ಬರುವುದನ್ನು ನಾನು ನೋಡಿದ್ದೇನೆ. ಅಸಂಖ್ಯಾತವಾದ ಅನೇಕ ಅನುಗ್ರಹಗಳು ಬಹಿರಂಗಗೊಂಡಿವೆ. ಉದಾಹರಣೆಗೆ, ಅವು ಹೇಳುತ್ತಾರೆ: ನನ್ನ ಬಳಿ ಮೊದಲು ಒಂದ ಮನೆ ಇತ್ತು ಆದರೆ ಈಗ ಅಲ್ಲಾಹನ ಅನುಗ್ರಹದಿಂದ ಮೂರು ಮನೆಗಳ ಒಡೆಯನಾಗಿದ್ದೇನೆ. ಮತ್ತು ನನ್ನ ಮಕ್ಕಳು ಸಹ ಉತ್ತಮ ಸ್ಥಳಗಳಲ್ಲಿ ಓದುತ್ತಿದ್ದಾರೆ.

ಒಕೆನೆ, ನೈಜೀರಿಯಾದ ಒಂದು ಜಮಾಅತ್ ಆಗಿದೆ ಅಲ್ಲಿನ ಸದರ್ ಸಾಹಿಬ್ ಹೇಳುತ್ತಾರೆ: ನಾನು ಕೆಲವು ಸಮಯದಿಂದ ಆರ್ಥಿಕ ತೊಂದರೆಯಿಂದ ಬಳಲುತ್ತಿದ್ದೆ, ಇದರಿಂದಾಗಿ ಸಾಕಷ್ಟು ತೊಂದರೆಗಳನ್ನು ಅನುಭವಿಸಿದೆ. ತದನಂತರ ಒಂದು ದಿನ ನಾನು ಮೂರು ತಿಂಗಳಿಂದ ಚಂದಾ ನೀಡಲಿಲ್ಲ ಎಂದು ಮನಸ್ಸಿಗೆ ಹೊಳಡಯಿತು. ಇದರಿಂದಾಗಿ ನಾನು ಈ ಆರ್ಥಿಕ ಸಮಸ್ಯೆಯಿಂದ ಬಳಲುತ್ತಿರುವ ಸಾಧ್ಯತೆ ಇದೆ ಎಂದು ಭಾವಿಸಿದೆ. ಹಾಗಾಗಿ ನಾನು ಮೂರು ತಿಂಗಳ ನಂತರ 4000 ನೈರಾ ಚಂದಾವನ್ನು ನೀಡಿದೆ. ಅದೇ ತಿಂಗಳಲ್ಲಿ ನಾನು ಒಂದು ತುಂಡು ಭೂಮಿಯನ್ನು ಮಾರಿದನು, ಅದರಲ್ಲಿ ನನ್ನ ಒಡೆಯನಾದ ಸರ್ವಶಕ್ತನಾದ ಅಲ್ಲಾಹನು ನನಗೆ ಎಂಟು ಲಕ್ಷ ನೈರಾ ಲಾಭವನ್ನು ನೀಡಿದನು. ಆ ಸಮಯದಲ್ಲಿ, ನನ್ನ ನಂಬಿಕೆಯು ಮತ್ತಷ್ಟು ಬಲಗೊಂಡಿತು, ಮತ್ತು ಸರ್ವಶಕ್ತನಾದ ಅಲ್ಲಾಹನು ತನ್ನ ವಾಗ್ದಾನಗಳಿಗೆ ನಿಜವೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ನೀವು ಅವನ ಮಾರ್ಗದಲ್ಲಿ ತ್ಯಾಗ ಮಾಡಿದರೆ, ಅವನು ಖಂಡಿತವಾಗಿಯೂ ಅದನ್ನು ಗುಣಿಸುವ ಮೂಲಕ ನಿಮ್ಮನ್ನು ಹಿಂತಿರುಗಿಸುತ್ತಾನೆ. ಈಗ ಅವರು ಕೋಗಿ ರಾಜ್ಯದ ರಾಜಧಾನಿ ಲೋಕೋಜಾದಲ್ಲಿ ಮಸೀದಿ ಮತ್ತು ಮಿಷನ್ ಹೌಸ್‌ಗಾಗಿ ಜಮಾಅತ್ತಿಗೆ ಒಂದು ದೊಡ್ಡ ಪ್ಲಾಟ್ ಅನ್ನು ನಗರ ಪ್ರದೇಶದಲ್ಲಿ ಕೊಂಡು ನೀಡಿದ್ದಾರೆ.

ನಮ್ಮ ಗಿನೀಕನಾಕರಿಯ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಓರ್ವ ಅಹ್ಮದಿ ಯುವಕ ಮುಹಮ್ಮದ್ ಸಾಕೋ ಎಂಬವರು ಹೇಳಿದರು ನನ್ನ ಮದುವೆಯ ದಿನಾಂಕವನ್ನು ನಿಗದಿಪಡಿಸಲಾಗಿದೆ ಮತ್ತು ಮದುವೆಗೆ ಸಿದ್ಧತೆಗಳನ್ನು ಮಾಡಲು ಮನೆಯಲ್ಲಿ ಸಾಕಷ್ಟು ಹಣವಿಲ್ಲ ಮತ್ತು ಹಣವು ಎಲ್ಲಿಂದ ಬರುತ್ತದೆ ಎಂದು ನಿರೀಕ್ಷಿಸಲಾಗಿತ್ತು ಅಲ್ಲಿಂದಲೂ ಹಣ ಬರುತ್ತಿರಲಿಲ್ಲ. ಅಷ್ಟರಲ್ಲಿ ಚಂದಾದದ ಬೇಡಿಕೆಯಾಯಿತು ಆದ್ದರಿಂದ ಮನೆಯಲ್ಲಿ ಎಷ್ಟು ಮನೆಯಿತ್ತು ಅದನ್ನೆಲ್ಲ ಚಂದಾದ ರೂಪದಲ್ಲಿ ನೀಡಲಾಯಿತು. ಅದಕ್ಕೆ ಆತನ ಭಾವಿ ಪತ್ನಿಯು ನೀನು ಏನು ಮಾಡಿದೆ ಎಂದು ಜೋರಾಗಿ ಗದ್ದಲ ಎಬ್ಬಿಸಿದಳು. ನಿಮ್ಮ ಬಳಿ ಇದ್ದ ಅಲ್ಪ ಮೊತ್ತವನ್ನು ಚಂದಾವನ್ನಾಗಿ ನಿಡಿದ್ದೀಯ ಎಂದು. ಅದಕ್ಕೆ ಆ ಯುವಕರು ಹೇಳಿದರು: ಅಲ್ಲಾಹನ ಅನುಗ್ರಹದಿಂದ ನಾನು ಪ್ರಾಮಾಣಿಕ ವ್ಯಕ್ತಿಯಾಗಿದ್ದೇನೆ ಮತ್ತು ನಾನು ದೇವರನ್ನು ನಂಬುವ ವ್ಯಕ್ತಿಯಾಗಿದ್ದೇನೆ, ಆದ್ದರಿಂದ ಭಯಪಡಬೇಡಿ, ಸರ್ವಶಕ್ತನಾದ ಅಲ್ಲಾಹನು ನಮಗೆ ಸಹಾಯ ಮಾಡುತ್ತಾನೆ ಮತ್ತು ನಮಗೆ ಅಲ್ಲಾಹನ ಮಾರ್ಗದಲ್ಲಿ ನೀಡಿರುವುದು ಎಂದಿಗೂ ವ್ಯರ್ಥವಾಗುವುದಿಲ್ಲ. ಅವರು ಹೇಳುತ್ತಾರೆ: ಮರುದಿನ ಅವರು ಕೆಲಸಕ್ಕೆ ಹೋದಾಗ ಬಹಳ ದಿನಗಳಿಂದ ತಡೆಹಿಡಿದಿದ್ದ ಹಣವೆಲ್ಲ ಅವರಿಗೆ ಲಭಿಸಿತು. ಮತ್ತು ಅವರು ಸಂಜೆ ಅದನ್ನು ತಂದು ಮನೆಗೆ ನೀಡಿದಾಗ ಸರ್ವಶಕ್ತನಾದ ಅಲ್ಲಾಹನು ಹೇಗೆ ಇಷ್ಟು ಬೇಗ ಅನುಗ್ರಹಿಸಿದನು ಎಂದು ಜನರು ಆಶ್ಚರ್ಯಪಟ್ಟರು.

ಆದ್ದರಿಂದ ಇಂದು ನಾವು ಜಗತ್ತನ್ನು ಅವಲೋಕಿಸಿ ನೋಡಿದರೆ, ಇಸ್ಲಾಂ ಧರ್ಮದ ಬೋಧನೆಗಳ ಪ್ರಕಾರ, ಯಾವುದೇ ಗುಂಪು ಸಂಪತ್ತನ್ನು

ಖರ್ಚು ಮಾಡುತ್ತಿದ್ದರೆ, ಅದು ಜಮಾಅತೆ ಅಹ್ಮದಿಯಾ ಆಗಿದೆ ಅವರು ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಪಡೆಯಲು ಖರ್ಚು ಮಾಡುತ್ತಿದ್ದಾರೆ. ಪ್ರಪಂಚದ ಉಳಿದ ಭಾಗಗಳು, ಏನಾದರೂ ಖರ್ಚು ಮಾಡುತ್ತಿದ್ದರೆ ಅದು ಬಹಳ ಕಡಿಮೆ ಪ್ರಮಾಣದಲ್ಲಿ ಮಾಡುತ್ತಿದೆ. ಮತ್ತು ಪ್ರತಿಯೊಬ್ಬರೂ ಕ್ರೀಡೆಗಳಲ್ಲಿ ಮತ್ತು ಸ್ವಯಂ ಆಸೆಗಳನ್ನು ಪೂರೈಸುವಲ್ಲಿ ತೊಡಗಿಸಿಕೊಂಡಿದ್ದಾರೆ. ಅನೇಕ ಹೊಸತನಗಳು ಮತ್ತು ಆಚರಣೆಗಳು ಮುಸ್ಲಿಮರಲ್ಲಿ ತಮ್ಮ ದಾರಿ ಮಾಡಿಕೊಂಡಿವೆ. ಲೌಕಿಕ ಆಚರಣೆಗಳಲ್ಲಿ ತೊಡಗಿಕೊಂಡಿದ್ದಾರೆ ಮದುವೆ ಸಮಾರಂಭಗಳಲ್ಲಿ ತೋರಿಕೆಗಾಗಿ ಸಾಕಷ್ಟು ಖರ್ಚು ಮಾಡುತ್ತಾರೆ. (ಖುತ್‌ಬ ಜುಮುಅ, 6-11-2009)

ಒಟ್ಟಿನಲ್ಲಿ ಇಂದು, ಅಹ್ಮದಿಯರು ಈ ಕೈಕೆಳಗೆ ಸೇರಿರುವುದರಿಂದ ಖೈರೆ ಉಮ್ಮತ್ ಎಂದು ಕರೆಸಲ್ಪಡುತ್ತಾರೆ ಮತ್ತು ಒಳ್ಳೆಯದನ್ನು ಆಜ್ಞಾಪಿಸುವುದು ಮತ್ತು ಕೆಟ್ಟದ್ದನ್ನು ನಿಷೇಧಿಸುವುದು ಅವರ ಜವಾಬ್ದಾರಿಯಾಗಿದೆ ಮತ್ತು ಅವರ ಕಾರ್ಯಗಳು ಅದರ ಪ್ರಕಾರ ಅನುಸರಿಸುವವರೆಗೆ ಮತ್ತು ಸರ್ವಶಕ್ತನಾದ ಅಲ್ಲಾಹನಲ್ಲಿ ದೃಢ ನಂಬಿಕೆ ಇಲ್ಲದಿದ್ದರೆ ಮತ್ತು ಈ ಒಳ್ಳೆಯ ಕಾರ್ಯಗಳನ್ನು ಹರಡಲು ಮತ್ತು ದುಷ್ಟ ಕಾರ್ಯಗಳಿಂದ ತಡೆಯಲು ಸಾಮೂಹಿಕ ತ್ಯಾಗದ ಮನೋಭಾವವಿಲ್ಲದಿದ್ದರೆ ಇವೆಲ್ಲವು ಆಗಲು ಸಾಧ್ಯವಿಲ್ಲ. ಮಹತ್ತಾದ ಗುರಿಗಳನ್ನು ಸಾಧಿಸಲು, ಆದಾಗ್ಯೂ, ತ್ಯಾಗಗಳನ್ನು ಮಾಡಲೇ ಬೇಕಾಗುತ್ತದೆ. ತಮ್ಮ ಆರಾಧನೆಯ ಮಾನದಂಡಗಳನ್ನು ಸ್ಥಾಪಿಸಬೇಕಾಗುತ್ತದೆ ಮತ್ತು ತನ್ನ ಸಂಪತ್ತನ್ನು ಶುದ್ಧೀಕರಿಸಬೇಕಾಗುತ್ತದೆ. ಸೂರಾ ಹಜ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಈ ವಿಷಯವನ್ನು ಈ ಕೆಳಗಿನಂತೆ ವಿವರಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ: **ಅಲ್ಲಝೀನ ಇನ್ ಮಕ್ಕನ್ನಾಹುಮ್ ಫಿಲ್ ಅರ್ಝಿ ಅಖಾಮುಸ್ಸಲಾತ ವ ಆತುಝ್ಝಕಾತ ವ ಅಮರು ಬಿಲ್ ಮಅ್‌ರೂಫಿ ವ ನಹು ಅನಿಲ್ ಮುಂಕರಿ- ವಲಿಲ್ಲಾಹಿ ಆಖಿಬತುಲ್ ಉಮೂರಿ** (ಅಲ್‌ಹಜ್ಜ್: 42) ಅಂದರೆ: ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝುನ್ನು ನಿಷ್ಠೆಯಿಂದ ನಿರ್ವಹಿಸುವರು; ಝಕಾತ್ ನೀಡುವರು; ಒಳಿತನ್ನು ಉಪದೇಶಿಸುವರು ಮತ್ತು ಕೆಡುಕನ್ನು ತಡೆಯುವರು. ಎಲ್ಲ ಕಾರ್ಯಗಳ ಅಂತ್ಯ ಪರಿಣಾಮ ಅಲ್ಲಾಹನ ಕೈಯಲ್ಲಿದೆ.

ಆತ್ಮೀಯ ಕೇಳುಗರೇ, ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಅಸಂಖ್ಯಾತ ಘಟನೆಗಳು ಅಹ್ಮದಿಯಾ ಜಗತ್ತಿನಲ್ಲಿ ನಡೆಯುತ್ತಿವೆ. ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಖುತ್‌ಬಗಳಲ್ಲಿ ಜಮಾಅತ್‌ನ ಸ್ನೇಹಿತರು ತಮ್ಮ ವ್ಯವಹಾರದಲ್ಲಿ ಅಪಾರವಾದ ಅನುಗ್ರಹಗಳನ್ನು ಪಡೆದ ಇಂತಹ ವೈವಿಧ್ಯಮಯ ಘಟನೆಗಳನ್ನು ನಾವು ಕೇಳುತ್ತಿರುತ್ತೇವೆ. ಅದರಿಂದಾಗಿ ಅವರ ಸಂಬಿಕೆಯ ಸ್ಥಿತಿಯು ಬದಲಾಗಿದೆ. ಅವರು ಅಲ್ಲಾಹನ ಪ್ರೀತಿಯಲ್ಲಿ ಬೆಳೆದರು. ಅವರು ಅಪಾಯದಿಂದ ಪಾರಾದರು. ಆದ್ದರಿಂದ, ಸಮಯ ರಿಯಾಯಿತಿಯೊಂದಿಗೆ ಕೆಲವೇ ಕೆಲವು ಘಟನೆಗಳನ್ನು ಪ್ರಸ್ತುತಪಡಿಸಲಾಗಿದೆ. ವಿಶ್ವಾಸವನ್ನು ವರ್ಧಿಸುವ ಒಂದು ಘಟನೆ ಗಿನಿಕನಾಕರಿಯಿಂದ ಇದೆ ಅದೇನೆಂದರೆ: ಗಿನಿಕನಾಕರಿಯ ಮುಬಲ್ಲಿಗ್ ಬರೆಯುತ್ತಾರೆ: ಮುಹಮ್ಮದ್ ಮರೇಗಾ ಸಾಹಿಬ್ ಎಂಬ ಯುವಕರು ದೀರ್ಘಕಾಲದ ತಬ್ಲೀಗ್ ನಂತರ ಸರ್ವಶಕ್ತನಾದ ಅಲ್ಲಾಹ ಅನುಗ್ರಹದಿಂದ ಜಮಾಅತ್ತಿನಲ್ಲಿ ಸೇರ್ಪಡೆಯಾದರು. ಅವರು ವೃತ್ತಿಯಲ್ಲಿ ಆರ್ಕಿಟೆಕ್ಟ್ ಇಂಜಿನಿಯರ್ ಆಗಿದ್ದರು. ಅವರು ಬೈಅತ್ ಮಾಡಿದಾಗ, ಅವರು ನಿರ್ಮಾಣ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅಲ್ಪ ಸಂಬಳ ಪಡೆಯುತ್ತಿದ್ದರು. ಬೈಅತ್ ನಂತರ, ಅವರಿಗೆ ಜಮಾಅತ್‌ನ ಆರ್ಥಿಕ ವ್ಯವಸ್ಥೆಯನ್ನು ಪರಿಚಯಿಸಿದಾಗ, ಅವರು ಕೇಳಿದರು: ಈ ಚಂದಾಗಳಲ್ಲಿ ಎಲ್ಲದಕ್ಕಿಂದ ಮಹತ್ವ ಹೊಂದಿರುವ ಚಂದಾ ಯಾವುದು? ಆಗ ಅವರಿಗೆ ಚಂದಾ ವಸಿಯ್ಯತ್, ಚಂದಾ ಆಮ್ ಮತ್ತು ಜಲ್ಸ ಸಾಲಾನದ ಚಂದಾಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಿಂದ ಜಾರಿಯಲ್ಲಿದೆ ಎಂದು ತಿಳಿಸಲಾಯಿತು. ಅದೇ ರೀತಿ ವಸಿಯ್ಯತ್‌ನ ಮಹತ್ವದ ಬಗ್ಗೆ ಅವರಿಗೆ ತಿಳಿಸಲಾಯಿತು. ಅದಕ್ಕೆ ಅವರು ಕೂಡಲೇ ಇಂದಿನಿಂದಲೇ ನಾನು ಚಂದಾ ವಸಿಯ್ಯತ್ ನೀಡುತ್ತೇನೆ ಎಂದು ಹೇಳಿದರು. ಮುಬಲ್ಲಿಗ್ ಸಾಹಿಬ್ ಅವರಿಗೆ ಹೇಳಿದರು, ವಸಿಯ್ಯತ್‌ನ ವ್ಯವಸ್ಥೆ ಇದೆ ಅದರಲ್ಲಿ ಪ್ರವೇಶಿಸಿದ ನಂತರ ನೀವು ಚಂದಾ ವಸಿಯ್ಯತ್ ಅನ್ನು ನೀಡಬಹುದು. ಹಾಗಾದರೆ ನಾನು ಕೂಡ ಈ ವ್ಯವಸ್ಥೆಯಲ್ಲಿ ಸೇರುತ್ತೇನೆ. ಆದ್ದರಿಂದ ಅವರು ಮೊದಲು ಅಲ್‌ವಸಿಯ್ಯತ್ ಪುಸ್ತಕವನ್ನು ಓದಿದ ನಂತರ ನಿಝಾಮೆ ವಸಿಯ್ಯತ್‌ನಲ್ಲಿ ಸೇರಿ ಬಹಳ ನಿಷ್ಠೆಯಿಂದ ತಮ್ಮ ಆದಾಯದ ಹತ್ತನೇ ಒಂದು ಭಾಗವನ್ನು ನೀಡಲು ಪ್ರಾರಂಭಿಸಿದರು ಮತ್ತು ವಸಿಯ್ಯತ್ ಅನುಮೋದನೆಗೆ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ, ಆದರೂ ಅವರು ಆ ಸಮಯ ಬರುವವರೆಗೂ ನಿಯಮಿತವಾಗಿ ವಸಿಯ್ಯತ್ ಚಂದಾವನ್ನು ನಿಡುತ್ತಿದ್ದರು. ತದನಂತರ ಸ್ವಲ್ಪ ಕಾಲದ ನಂತರ, ಅದನ್ನು ಹೊರತುಪಡಿಸಿ, ಅವರು ಇತರ ಸಾಮಪತ್ತಿಕ ಯೋಜನೆಗಳಲ್ಲಿ ಭಾಗವಹಿಸಿದರು. ಕೆಲ ಕಾಲದ ನಂತರ ಅವರು ಕಂಪನಿಯನ್ನು ತೊರೆದು ಸ್ವಂತ ಉದ್ಯಮವನ್ನು ಆರಂಭಿಸಿದರು ಇದೀಗ ಅಲ್ಲಾಹನ ಅನುಗ್ರಹದಿಂದ ಸ್ವಂತ ಕಂಪನಿಯ ಒಡೆಯರಾಗಿ ತಮ್ಮ ಪ್ರಾಮಾಣಿಕತೆಯಿಂದ ನಾಡಿನೆಲ್ಲೆಡೆ ಪ್ರಸಿದ್ಧಿ ಪಡೆದುಕೊಂಡಿದ್ದಾರೆ, ಹೀಗೆ ಅವರ ವ್ಯಾಪಾರವೂ ಮಿಂಚಿದೆ. ಅವರು ಇದನ್ನು ಎಲ್ಲರ ಮುಂದೆ ಕುಳಿತು, ಈ ಎಲ್ಲಾ ಅನುಗ್ರಹಗಳನ್ನು ನಾನು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ್ದರಿಂದ ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ.

ಅಂತಿಮವಾಗಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಒಂದು ಉಪದೇಶವನ್ನು ಪ್ರಸ್ತುತಪಡಿಸಿ ನನ್ನ ಭಾಷಣವನ್ನು ಮುಕ್ತಾಗೊಳಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

"ಓ ನನ್ನ ಆತ್ಮೀಯ ಸ್ನೇಹಿತರೇ! ನಾನು ನಿಮಗೆ ಭರವಸೆ ನೀಡುವುದೇನೆಂದರೆ ಸರ್ವಶಕ್ತನಾದ ಅಲ್ಲಾಹನು ನಿಮ್ಮ ಸಹಾನುಭೂತಿಗಾಗಿ ನಿಜವಾದ ಉತ್ಸಾಹವನ್ನು ನನಗೆ ಅನುಗ್ರಹಿಸಿದ್ದಾನೆ. ಮತ್ತು ನಿಮ್ಮ ನಂಬಿಕೆ (ಈಮಾನ್) ಮತ್ತು ದೈವಜ್ಞಾನವನ್ನು (ಮಾರಿಫತ್) ವರ್ಧಿಸುವುದರಕ್ಕಾಗಿ ನನಗೆ ನಿಜವಾದ ಜ್ಞಾನವನ್ನು ನೀಡಲಾಗಿದೆ ಮತ್ತು ಈ ದೈವಜ್ಞಾನವು ನಿಮಗೂ ಮತ್ತು ನಿಮ್ಮ ವಂಶಸ್ಥರಿಗೂ ಬೇಕಾಗಿದೆ. ಆದ್ದರಿಂದ, ನೀವು ನಿಮ್ಮ ಧಾರ್ಮಿಕ ಕಾರ್ಯಗಳಿಗೆ ನಿಮ್ಮ ಪರಿಶುದ್ಧ ಸಂಪತ್ತಿನಿಂದ ಸಹಾಯ ಮಾಡಬೇಕು ಮತ್ತು ಸರ್ವಶಕ್ತನಾದ ಅಲ್ಲಾಹನು ನಿಮಗೆ ಶಕ್ತಿಯನ್ನು ನೀಡಿದವರೆಗೆ ಪ್ರತಿಯೊಬ್ಬ ವ್ಯಕ್ತಿಯು ಹಿಂಜರಿಯಬಾರದು ಎಂದು ನಾನು ದೃಢಸಂಕಲ್ಪದಿಂದ ನೆಲೆನಿಂತಿರುವೆನು. ಮತ್ತು ನೀವು ನಿಮ್ಮ ಸಂಪತ್ತನ್ನು ಸರ್ವಶಕ್ತನಾದ ಅಲ್ಲಾಹ್ ಹಾಗೂ ಪ್ರವಾದಿಗಳಿಗೆ ಶ್ರೇಷ್ಠ ಎಂದು ಭಾವಿಸಬಾರದು, ಮತ್ತು ನಾನು ಸಾಧ್ಯವಾದಷ್ಟು ರೀತಿಯಲ್ಲಿ ಸಾಹಿತ್ಯದ ಮೂಲಕ, ಸರ್ವಶಕ್ತನಾದ ಅಲ್ಲಾಹನ ಪವಿತ್ರಾತ್ಮವು ನನಗೆ ನೀಡಿರುವಂತಹ ಈ ಜ್ಞಾನವನ್ನು ಮತ್ತು ಅನುಗ್ರಹಗಳನ್ನು ಏಷ್ಯಾ ಮತ್ತು ಯುರೋಪ್‌ನ ದೇಶಗಳಲ್ಲಿ ಹರಡಿಸುತ್ತೇನೆ."

(ಇಝಾಲಾ ಔಹಾಮ್, ರೂಹಾನಿ ಖಝಾಇನ್, ಸಂಪುಟ-3, ಪುಟ-516)

**ವಆಖಿರುದ್ದಅ್‌ವನ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್**

---------------*****---------------

*(ಪುಟ ಸಂಖ್ಯೆ 16ರ ಉಳಿದ ಭಾಗ)*

ಅವನು ಅದನ್ನು ಪಾಲಿಸಬೇಕು ಮತ್ತು ಸರ್ವಶಕ್ತನಾದ ಅಲ್ಲಾಹನು ಪೈಶಾಚಿಕ ಆಲೋಚನೆಗಳು ನನ್ನ ಮೇಲೆ ಪ್ರಾಬಲ್ಯ ಸಾಧಿಸಲು ಬಿಡದಿರಲಿ ಎಂದು ಪ್ರಾರ್ಥಿಸುತ್ತಲೇ ಇರಬೇಕೆಂದು ಆಜ್ಞಾಪಿಸಲಾಗಿದೆ. ಇದೆಲ್ಲವೂ ಸಂಭವಿಸಿದಲ್ಲಿ, ಪ್ರಪಂಚದ ಸುಖಗಳು, ಪ್ರಪಂಚದ ಫ್ಯಾಷನ್‌ಗಳು ಅಥವಾ ನಾವು ಜಗತ್ತನ್ನು ಅನುಸರಿಸದಿದ್ದರೆ, ಜಗತ್ತು ನಮಗೆ ಏನು ಹೇಳುತ್ತದೆ, ಇವೆಲ್ಲವೂ ಅಪ್ರಸ್ತುತವಾಗುತ್ತವೆ ಎಂಬ ಕೀಳರಿಮೆಯ ಭಾವನೆಯಾಗಿರುತ್ತದೆ. ಧರ್ಮ ಮತ್ತು ಸಮುದಾಯವು ಆದ್ಯತೆ ಪಡೆಯುತ್ತದೆ. ಅಹ್ಮದಿ ಹುಡುಗಿ ತನ್ನ ಲಜ್ಜೆಯನ್ನು ರಕ್ಷಿಸುವವಳಾಗುತ್ತಾಳೆ. ತನ್ನ ಚಿತ್ರ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವುದರಿಂದ ಯಾವುದೇ ಹಾನಿ ಇದೆ ಎಂದು ಅವಳು ಭಾವಿಸುವುದಿಲ್ಲ. ಬದಲಾಗಿ, ಮುಖವನ್ನು ಮುಚ್ಚಿಕೊಳ್ಳಬೇಕೆಂಬ ಸರ್ವಶಕ್ತನಾದ ಅಲ್ಲಾಹನ ಆಜ್ಞೆಯು ಅವಳನ್ನು ಹಾಗೆ ಮಾಡದಂತೆ ತಡೆಯುತ್ತದೆ. ಅಲ್ಲಾಹನ ಪ್ರತಿಯೊಂದು ಆಜ್ಞೆಯಲ್ಲೂ ಯುಕ್ತಿ ಇದೆ ಎಂಬ ಕಲ್ಪನೆ ಮೂಡುತ್ತದೆ, ಮತ್ತು ಈ ಆಜ್ಞೆಯು ಪವಿತ್ರ ಖುರ್‌ಆನ್‌ನ ಮುಸುಕು ಮತ್ತು ಲಜ್ಜೆಯ ಬಗ್ಗೆ ಇರುವ ಆಜ್ಞೆಗಳಲ್ಲಿ ಒಂದಾಗಿದೆ. ಆದ್ದರಿಂದ, ನಾನು ಹೇಗಾದರೂ ನನ್ನ ಲಜ್ಜೆ ಮತ್ತು ನನ್ನ ಮುಸುಕನ್ನು ರಕ್ಷಿಸಿಕೊಳ್ಳಬೇಕು. ಸರ್ವಶಕ್ತನಾದ ಅಲ್ಲಾಹನು ಆಜ್ಞಾಪಿಸಿದ ಎಲ್ಲಾ ಕೆಲಸಗಳನ್ನು ಒಬ್ಬನು ಮಾಡಬೇಕು ಅಥವಾ ಮಾಡಲು ಪ್ರಯತ್ನಿಸಬೇಕು... ಪ್ರತಿಯೊಬ್ಬ ಮಹಿಳೆ... ಪ್ರತಿಯೊಬ್ಬ ಪುರುಷನು ಈ ಆಲೋಚನೆಯೊಂದಿಗೆ ತನ್ನ ಜೀವನವನ್ನು ನಡೆಸಲು ಪ್ರಯತ್ನಿಸಿದಾಗ, ಅವನು ತನ್ನ ಕೈಗಳನ್ನು ಇಟ್ಟಿರುವ ಈ ಬಳೆಯು ಅವನನ್ನು ಪೈಶಾಚಿಕ ಮತ್ತು ಲೌಕಿಕ ಆಲೋಚನೆಗಳಿಂದ ರಕ್ಷಿಸುವ ಖಾತರಿಯಾಗುತ್ತದೆ... **ಅಲ್ಲಾಹು ವಲಿಯ್ಯುಲ್ಲಝೀನ ಆಮನೂ** ಸರ್ವಶಕ್ತನಾದ ಅಲ್ಲಾಹನು ವಿಶ್ವಾಸಿಗಳ ಸ್ನೇಹಿತನಾಗಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ಸ್ನೇಹಿತನಾಗುವವನ ಬಳಿಗೆ ಸೈತಾನನು ಬರಬಹುದು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ.

(ಜಲ್ಸ ಸಾಲಾನ ಯೂಕೆ (ಮಹಿಳೆಯರ ಸಭಾಂಗಣದಿಂದ), 8 ಸೆಪ್ಟೆಂಬರ್ 2012, ಹದೀಖತುಲ್ ಮಹದಿ, ಅಲ್-ಫಝಲ್ ಇಂಟರ್‌ನ್ಯಾಶನಲ್ ಪಬ್ಲಿಕೇಶನ್, 30 ನವೆಂಬರ್ 2012)

ಪವಿತ್ರ ಖುರ್‌ಆನ್, ಪರಿಪೂರ್ಣ ನಾಯಕ ಹಝ್ರತ್ ಮುಹಮ್ಮದ್ ಮುಸ್ತಫಾ(ಸ), ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಪ್ರಸ್ತುತ ಕಾಲದ ಖಲೀಫರ ಎಲ್ಲಾ ಬೋಧನೆಗಳನ್ನು ಅನುಸರಿಸುವ ಸಾಮರ್ಥ್ಯವನ್ನು ಸರ್ವಶಕ್ತನಾದ ಅಲ್ಲಾಹನು ನಮಗೆಲ್ಲರಿಗೂ ನೀಡಲಿ. ಸರ್ವಶಕ್ತನಾದ ಅಲ್ಲಾಹನು ನಮಗೆಲ್ಲರಿಗೂ ಮುಸುಕಿನ ನಿಜವಾದ ಅರ್ಥವನ್ನು ಅರ್ಥಮಾಡಿಕೊಳ್ಳುವ ಮತ್ತು ಅದರಂತೆ ವರ್ತಿಸುವ ಸಾಮರ್ಥ್ಯವನ್ನು ನೀಡಲಿ. ಆಮೀನ್.

---------------*****---------------

**Love for All, Hatred for None**

ಜಲ್ಸ ಸಾಲಾನ ಖಾದಿಯಾನ್ 2024ರ ಭಾಷಣ

# ಹಝ್ರೂರ್ ಅನ್ವರ್(ಅತಬಿಅ) ಅವರ ಅಧ್ಯಾಪನೆಗಳ ಬೆಳಕಿನಲ್ಲಿ ಇಸ್ಲಾಮಿಕ್ ಪರದೆಯ (ಮುಸುಕಿನ) ಮಹತ್ವ ಮತ್ತು ಅನುಗ್ರಹಗಳು

(ಡಾ. ಮನ್ಸೂರ ಅಲ್ಲಾದೀನ್ ಸಾಹಿಬ, ಸದರ್ ಲಜ್ನಾ ಇಮಾಅಲ್ಲಾಹ್ ಭಾರತ್, ಖಾದಿಯಾನ್)

ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ "ಇಸ್ಲಾಮ್ ಧರ್ಮದ ತತ್ವಜ್ಞಾನ" ಎಂಬ ಜ್ಞಾನಭರಿತ ಗ್ರಂಥದಲ್ಲಿ ಇಸ್ಲಾಮಿಕ್ ಮುಸುಕಿನ ಬಗ್ಗೆ ಬೆಳಕು ಚೆಲ್ಲುತ್ತಾ ಹೀಗೆ ಹೇಳುತ್ತಾರೆ: ".....ವಿಶ್ವಾಸಿಗಳಾದ ಪುರುಷರೊಡನೆ ಅವರ ದೃಷ್ಟಿಯನ್ನು ಪರಸ್ತ್ರೀ ದರ್ಶನದಿಂದ ತಡೆಯಲಿಕ್ಕೂ ಕಾಮವಿಕಾರಗಳನ್ನುಂಟುಮಾಡಲು ಕಾರಣವಾಗುವ ಸ್ತ್ರೀಯರನ್ನು ನೋಡದಿರಲಿಕ್ಕೂ ಬೇಕಾಗಿ ತಮ್ಮ ನೋಟವನ್ನು ಅಧೋಮುಖವಾಗಿರಿಸಲಿಕ್ಕೆ; ತಮ್ಮ ಗುಹ್ಯಾಂಗಗಳನ್ನು ರಕ್ಷಿಸಲಿಕ್ಕೆ; ಹಾಗೆಯೇ ತಮ್ಮ ಕಿವಿಗಳನ್ನು ಅನ್ಯ ಸ್ತ್ರೀಯರ ಮಧುರ ಗಾನಗಳನ್ನೂ ಮೃದುಲ ಸ್ವರಗಳನ್ನೂ ಶೃಂಗಾರ ಕಥೆಗಳನ್ನೂ ಕೇಳುವುದರಿಂದ ತಡೆಯಲಿಕ್ಕೆ ಹೇಳು. ಇದು ದೃಷ್ಟಿಯನ್ನೂ ಕರ್ಣಗಳನ್ನೂ ಪರಿಶುದ್ಧವಾಗಿರಿಸಲು ಉತ್ತಮ ಮಾರ್ಗವಾಗಿದೆ...... ಹಾಗೆಯೇ ವಿಶ್ವಾಸಿಗಳಾದ ಸ್ತ್ರೀಯರೊಡನೆ ಅವರ ನೇತ್ರಗಳನ್ನು ಪರಪುರುಷರ ದರ್ಶನದಿಂದ ತಡೆಯಲಿಕ್ಕೂ ಅವರ ವ್ಯಾಮೋಹ ಸ್ವರಗಳನ್ನು ಆಲಿಸದಿರಲಿಕ್ಕೂ ತಮ್ಮ ಗುಹ್ಯಾಂಗಗಳನ್ನು ಕಾಪಾಡಲಿಕ್ಕೂ ತಮ್ಮ ಸೌಂದರ್ಯವನ್ನು- ಸ್ವಯಂ ಪ್ರಕಟವಾಗುವಂಥವು ಹೊರತು- ಅನ್ಯರಿಗೆ ತೋರಿಸದಿರಲಿಕ್ಕೂ ತಮ್ಮ ಎದೆ, ಕಿವಿ, ಕೆನ್ನೆ ಮತ್ತು ತಲೆ ಆಚ್ಛಾದಿಸಲ್ಪಡುವಂತೆ ಮುಸುಕನ್ನು ಧರಿಸಲಿಕ್ಕೂ...... ನರ್ತಕಿಯರ ಹಾಗೆ ಪಾದಗಳನ್ನು ನೆಲಕ್ಕೆ ಬಡಿದು ನಡೆಯದಿರಲಿಕ್ಕೂ ಹೇಳು. ಇದು ಅಪಾವಿತ್ರ್ಯವನ್ನು ತಡೆಯುವ ಒಂದು ಮಾರ್ಗವಾಗಿದೆ."
(ರೂಹಾನಿ ಖಝಾಇನ್, ಸಂಪುಟ-10, ಪುಟ 341-342)

ನಾನು ಮೇಲೆ ಪಠಿಸಿರುವ ಶ್ಲೋಕಗಳಿಂದ, ಮುಸುಕಿನ ಆಜ್ಞೆಯು ದೃಷ್ಟಿಯನ್ನು ಕೆಳಗಿರಿಸುವುದಿಂದ (ಗ಼ರ್ಝ್ಝು ಬಸರ್) ಪ್ರಾರಂಭವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಕಣ್ಣುಗಳ ಪರಿಶುದ್ಧತೆಯು ನಿಜವಾದ ಮುಸುಕನ್ನು ಸೂಚಿಸುತ್ತದೆ, ಮತ್ತು ಸರ್ವಶಕ್ತನಾದ ಅಲ್ಲಾಹನು ಪುರುಷರು ಈ ವಿಷಯದಲ್ಲಿ ಮೊದಲು ತಮ್ಮನ್ನು ತಾವು ಮುಸುಕು ಹಾಕಿಕೊಳ್ಳಬೇಕೆಂದು ಸಲಹೆ ನೀಡಿದ್ದಾನೆ, ಮುಸುಕು ಹಾಕಿಕೊಳ್ಳುವುದು ಮುಸುಕಿನ ಮೊದಲ ಹೆಜ್ಜೆಯಂತೆ, ಪುರುಷರು ಮತ್ತು ಮಹಿಳೆಯರು ಇಬ್ಬರೂ ಅದನ್ನು ಹತ್ತುವುದರ ಮೂಲಕ ತಮ್ಮ ಪರಿಶುದ್ಧತೆಯ ರಕ್ಷಣೆಯನ್ನು ಖಾತರಿಪಡಿಸಬಹುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಪವಿತ್ರ ಖುರ್‌ಆನ್ ಮುಸ್ಲಿಂ ಪುರುಷರು ಮತ್ತು ಮಹಿಳೆಯರು ಪರಸ್ಪರ ನೋಡುವುದನ್ನು ತಪ್ಪಿಸಲು ಸೂಚಿಸುತ್ತದೆ, ಇದರಿಂದ ಅವರು ಸುರಕ್ಷಿತವಾಗಿರುತ್ತಾರೆ. ಇಸ್ಲಾಮಿಕ್ ಮುಸುಕು ಎಂದರೆ ಮಹಿಳೆಯನ್ನು ಜೈಲಿನಂತೆ ಬಂಧಿಸಿಡಬೇಕೆಂದು ಅರ್ಥವಲ್ಲ - ಪವಿತ್ರ ಖುರ್‌ಆನ್‌ನ ಅರ್ಥವೇನೆಂದರೆ, ಮಹಿಳೆಯರು ಪರ ಪುರುಷರನ್ನು ನೋಡದಂತೆ ತಮ್ಮನ್ನು ತಾವು ಮುಚ್ಚಿಕೊಳ್ಳಬೇಕು. ಸಾಂಸ್ಕೃತಿಕ ವಿಷಯಗಳಿಗಾಗಿ ಹೊರಗೆ ಹೋಗಬೇಕಾದ ಮಹಿಳೆಯರು ಮನೆಯಿಂದ ಹೊರಗೆ ಹೋಗುವುದನ್ನು ನಿಷೇಧಿಸಲಾಗಿಲ್ಲ. ಅವರು ಖಂಡಿತವಾಗಿಯೂ ಹೊರಗೆ ಹೋಗಬೇಕು, ಆದರೆ ದೃಷ್ಟಿಯ ಮುಸುಕು ಅಗತ್ಯ. (ಮಲ್‌ಫೂಝಾತ್, ಸಂಪುಟ-1, ಪುಟ-405, ಪ್ರಕಟಣೆ 2016)

ಮುಖವು ಮಾನವ ದೇಹದ ಅತ್ಯಂತ ಆಕರ್ಷಕ ಭಾಗವಾಗಿದೆ, ಮತ್ತು ಪವಿತ್ರ ಖುರ್‌ಆನ್ ಮಹಿಳೆಯರು ತಮ್ಮ ಅಲಂಕಾರಗಳನ್ನು ಮುಚ್ಚಿಕೊಳ್ಳಬೇಕೆಂದು ಆದೇಶಿಸುತ್ತದೆ. ಹಾಗಾದರೆ ಮಹಿಳೆ ಸ್ವಾಭಾವಿಕವಾಗಿಯೇ ಅಲಂಕಾರದತ್ತ ಒಲವು ಹೊಂದಿರುವಾಗ ಮುಖವನ್ನು ಹೇಗೆ ಬೆತ್ತಲೆಯಾಗಿ ಇಡಲು ಸಾಧ್ಯ? ಮುಸುಕು ಧರಿಸುವ ಆಜ್ಞೆಯ ನಂತರ, ಎಲ್ಲಾ ಮುಸ್ಲಿಂ ಮಹಿಳೆಯರು ತಮ್ಮ ಅಲಂಕಾರವು ಬಹಿರಂಗವಾಗದಂತೆ ತಮ್ಮ ಮುಖಗಳನ್ನು ಮುಚ್ಚಿಕೊಳ್ಳುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: "ಒಬ್ಬ ಮಹಿಳೆಯ ಇಡೀ ದೇಹವು ಮುಚ್ಚಿಡಲು ಯೋಗ್ಯವಾಗಿದೆ." ಮುಖವು ಮುಸುಕಿನಿಂದ ಹೊರತಾಗಿಲ್ಲ ಎಂದು ಈ ಹದೀಸ್ ಸ್ಪಷ್ಟವಾಗಿ ತೋರಿಸುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಕಣ್ಣುಗಳು ಮತ್ತು ಅವುಗಳ ಸುತ್ತಲಿನ ಒಂದು ಸಣ್ಣ ಭಾಗವನ್ನು ಖಾಲಿಯಾಗಿ ಇಡಬಹುದು, ಆದ್ದರಿಂದ ಕಣ್ಣುಗಳನ್ನು ಕೆಳಕ್ಕೆ ಇಳಿಸಲು ಆದೇಶಿಸಲಾಗಿದೆ. (ಅಲ್‌ಅಝ್‌ಹಾರ್ ಲಿಝುವಾತಿಲ್ ಖಮಾರ್, ಪುಟ-214)

ಅದೇ ರೀತಿ ಅವರು ಹೇಳಿದರು: "ಮಹ್ರಮ್ ಅಲ್ಲದ ಪುರುಷರಿಂದ ತಮ್ಮನ್ನು ಮುಚ್ಚಿಕೊಳ್ಳದ ಮಹಿಳೆಯರೊಂದಿಗೆ ಶೈತಾನನು ಇದ್ದಾನೆ."
(ಮಜ್‌ಮುಅ ಇಶ್ತಿಹಾರಾತ್, ಸಂಪುಟ-1, ಪುಟ-69)

ಆತ್ಮೀಯ ಕೇಳುಗರೇ! ಇಸ್ಲಾಮಿಕ್ ಮುಸುಕು ಎಂದರೆ ಒಬ್ಬರ ಅಲಂಕಾರವನ್ನು ಮುಚ್ಚುವ ಸಾಧಾರಣ ಉಡುಪು ಧರಿಸುವುದು ಮತ್ತು ನಾಚಿಕೆ ಮತ್ತು ಧರ್ಮನಿಷ್ಠ ಮನೋಭಾವವನ್ನು ಅಳವಡಿಸಿಕೊಳ್ಳುವುದಾಗಿದೆ. ಇಸ್ಲಾಂ ಧರ್ಮವೂ ಮನುಷ್ಯನಿಗೆ ಎಲ್ಲಾ ನೈತಿಕತೆಗಳಲ್ಲಿ ಉನ್ನತ ಗುಣಮಟ್ಟವನ್ನು ಸ್ಥಾಪಿಸಲು ಕಲಿಸಿದೆ ಮತ್ತು ಲಜ್ಜೆಯು ಇಸ್ಲಾಂನ ಲಕ್ಷಣವಾಗಿದೆ. ಹಝ್ರತ್ ಪೈಗಂಬರ್(ಸ) ಒಂದು ಹದೀಸ್‌ನಲ್ಲಿ ಹೇಳಿದಂತೆ, ಪ್ರತಿಯೊಂದು ಧರ್ಮಕ್ಕೂ ಒಂದು ನಿರ್ದಿಷ್ಟ ಲಕ್ಷಣವಿದೆ ಮತ್ತು ಲಜ್ಜೆ ಇಸ್ಲಾಮಿನ ಆ ಲಕ್ಷಣವಾಗಿದೆ. ಇಸ್ಲಾಮ್‌ನ ಪ್ರಕೃತಿ ಸ್ವಭಾವದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಲಜ್ಜೆಯನ್ನು ಕಡ್ಡಾಯಗೊಳಿಸಿದೆ ಮತ್ತು ಹಝ್ರತ್ ಪೈಗಂಬರ್(ಸ) ಈ ಪಾತ್ರದ ಪರಿಪೂರ್ಣ ಸಾಕಾರವಾಗಿದ್ದರು. ಹಝ್ರತ್ ಅಬು ಸಯೀದ್(ರ) ಹೇಳುವಂತೆ, ಸಾಧಾರಣ ಮತ್ತು ಸ್ವಚ್ಛ ವಾತಾವರಣವನ್ನು ಸ್ಥಾಪಿಸುವ ಸಲುವಾಗಿ, ಇಸ್ಲಾಂ ಪುರುಷರು ಮತ್ತು ಮಹಿಳೆಯರು ಇಬ್ಬರೂ ತಮ್ಮ ಖಾಸಗಿ ಅಂಗಗಳನ್ನು ಮುಚ್ಚಿಕೊಳ್ಳುವಂತೆ ಆದೇಶಿಸುತ್ತದೆ, ಏಕೆಂದರೆ ಅವರ ಖಾಸಗಿ ಅಂಗಗಳನ್ನು ಮುಚ್ಚಿಕೊಳ್ಳುವ ಆಜ್ಞೆಯು ವಾಸ್ತವವಾಗಿ ಪುರುಷರು ಮತ್ತು ಮಹಿಳೆಯರ ಮುಕ್ತ ಸಹವಾಸವನ್ನು ನಿರ್ಬಂಧಿಸುವುದು ಮತ್ತು ಅದರ ಪರಿಣಾಮವಾಗಿ ಉಂಟಾಗಬಹುದಾದ ನೈತಿಕ ಪರಿಣಾಮಗಳನ್ನು ತಡೆಯುವುದಾಗಿದೆ. ಆದ್ದರಿಂದ, ಮುಚ್ಚಿಕೊಳ್ಳುವಿಕೆಯ ಪ್ರಾಯೋಗಿಕ ಅಭಿವ್ಯಕ್ತಿಗಾಗಿ, ಪುರುಷರು ಮತ್ತು ಮಹಿಳೆಯರು ಇಬ್ಬರೂ ಯಾವುದೇ ತಾರತಮ್ಯವಿಲ್ಲದೆ ಕಣ್ಣುಮುಚ್ಚಿ ಕುಳಿತುಕೊಳ್ಳುವ ಆಜ್ಞೆಯಲ್ಲಿ ಸೇರಿಸಲ್ಪಟ್ಟಿದ್ದಾರೆ.

ಪ್ರಿಯ ಸಹೋದರಿಯರೇ! ಮುಸುಕಿನ ಮಹತ್ವ ಮತ್ತು ಉಪಯುಕ್ತತೆಯ ಬಗ್ಗೆ ಇಸ್ಲಾಮಿನ ಆದೇಶಗಳನ್ನು ನಾವು ಅಧ್ಯಯನ ಮಾಡಿದರೆ, ನಿಸ್ಸಂದೇಹವಾಗಿ ಇಸ್ಲಾಂ ಧರ್ಮವು ಇತರ ಎಲ್ಲಾ ಧರ್ಮಗಳಿಗಿಂತ ಹೆಚ್ಚಾಗಿ ಮುಸುಕಿನ ಅಗತ್ಯವನ್ನು ಒತ್ತಿಹೇಳಿದೆ. ಒಂದು ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಉಮ್ಮುಲ್ ಮುಮಿನೀನ್ (ಸತ್ಯವಿಶ್ವಾಸಿಗಳ ತಾಯಿ) ಹಝ್ರತ್ ಉಮ್ ಸಲ್ಮಾ(ರ.ಅ) ಮತ್ತು ಹಝ್ರತ್ ಮೈಮೂನಾ(ರ.ಅ) ರವರಿಗೆ ಕುರುಡು ಸಹಾಬಿಯಾದ ಇಬ್ನ್ ಉಮ್ ಮಖ್ತೂಮ್(ರ.ಅ) ಅವರಿಂದ ಪರದ ಮಾಡಲು ಆದೇಶಿಸಿದರು. ಆಗ ಅವರು ಹೇಳಿದರು ಯಾ ರಸೂಲಲ್ಲಾಹ್(ಸ)!! ಅವರು ಕುರುಡರಾಗಿದ್ದಾರೆ ಮತ್ತು ನಮ್ಮನ್ನು ನೋಡಲು ಸಾಧ್ಯವಿಲ್ಲ, ಇದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, "ನೀವಿಬ್ಬರೂ ಕುರುಡರೇ, ಅವರನ್ನು ನೋಡಲು ಸಾಧ್ಯವಿಲ್ಲವೇ?" (ಮಿಶ್ಕಾತ್ ಕಿತಾಬುಲ್ ಆದಾಬ್)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಪುರುಷರು ಮಹಿಳೆಯರಿಂದ ಮತ್ತು ಮಹಿಳೆಯರು ಪುರುಷರಿಂದ ತಮ್ಮನ್ನು ಮುಚ್ಚಿಕೊಳ್ಳಬೇಕು ಎಂಬ ಇಸ್ಲಾಂನ ಆಜ್ಞೆಯ ಉದ್ದೇಶವು ಮಾನವ ಆತ್ಮವನ್ನು ಜಾರಿಬೀಳುವ ಮತ್ತು ಎಡವಿ ಬೀಳುವ ಅಪಾಯದಿಂದ ರಕ್ಷಿಸುವುದಾಗಿದೆ."
(ಅಲ್-ಬದ್ರ್, ಸಂಪುಟ-3, ಪುಟ-34)

ಲಜ್ಜೆಯ ಕಾರಣದಿಂದಾಗಿ, ವ್ಯಕ್ತಿಯ ಮಾತು ಮತ್ತು ಕಾರ್ಯಗಳಲ್ಲಿ ಸೌಂದರ್ಯ ಮತ್ತು ಅನುಗ್ರಹವು ಸೃಷ್ಟಿಯಾಗುತ್ತದೆ. ಆದ್ದರಿಂದ, ಲಜ್ಜೆವುಳ್ಳ ವ್ಯಕ್ತಿಯು ಸೃಷ್ಟಿಯ ದೃಷ್ಟಿಯಲ್ಲಿ ಆಕರ್ಷಕನಾಗುತ್ತಾನೆ ಮತ್ತು ಲೋಕಗಳ ಪ್ರಭುವಿಗೆ ಸಹ ಸ್ವೀಕಾರಾರ್ಹನಾಗಿರುತ್ತಾನೆ. ಇದಕ್ಕೆ ಪುರಾವೆಯಾಗಿ, ಪವಿತ್ರ ಖುರ್‌ಆನ್ ಪ್ರವಾದಿ ಮೂಸಾ(ಅಲೈಹಿಸ್ಸಲಾಮ್) ಮದ್ಯನ್‌ಗೆ ವಲಸೆ ಹೋದಾಗ ಭೇಟಿಯಾದ ಹುಡುಗಿಯರ ಲಜ್ಜೆಯನ್ನು ಉಲ್ಲೇಖಿಸಿದೆ. ಅವರು ತಮ್ಮ ತಂದೆಯ ಸಂದೇಶದೊಂದಿಗೆ ಪ್ರವಾದಿ ಮೂಸಾ(ಅ) ರ ಬಳಿಗೆ ಬಂದಾಗ, ಅವರು ತಮ್ಮ ನಡವಳಿಕೆಯಲ್ಲಿ ಬಹಳ ವಿನಮ್ರ ಮತ್ತು ಸಭ್ಯರಾಗಿದ್ದರು. ಸರ್ವಶಕ್ತನಾದ ಅಲ್ಲಾಹನಿಗೆ ಅವರ ನಾಚಿಕೆ ಮತ್ತು ನಮ್ರತೆ ಎಷ್ಟು ಇಷ್ಟವಾಯಿತು ಎಂದರೆ ಅವನು ಪವಿತ್ರ ಖುರ್‌ಆನ್‌ನಲ್ಲಿ ಅದನ್ನು ಈ ಕೆಳಗಿನಂತೆ ಉಲ್ಲೇಖಿಸಿದ್ದಾನೆ: **ಫಜಾಅತ್‌ಹು ಇಹ್‌ದಾಹುಮಾ ತಮ್‌ಶಿ ಅಲಸ್ತಿಹ್‌ಯಾಇನ್** ಅಂದರೆ: ಅವರಲ್ಲಿ ಒಬ್ಬಳು ನಾಚಿಕೆಯಿಂದ ನಡೆಯುತ್ತಾ ಅವನ ಬಳಿಗೆ ಬಂದಳು.
(ಸೂರಾ ಅಲ್-ಖಸಸ್, ಆಯತ್-26)

ಲಜ್ಜೆ ಗುಣಲಕ್ಷಣದಿಂದ ಒಬ್ಬ ವ್ಯಕ್ತಿಯು ಶುದ್ಧತೆ ಮತ್ತು ಪರಿಶುದ್ಧತೆಯ ಜೀವನವನ್ನು ನಡೆಸಲು ಅನುವು ಮಾಡಿಕೊಡುವ ಗುಣವಾಗಿದೆ, ಆದರೆ ಇದಕ್ಕೆ ವಿರುದ್ಧವಾಗಿ, ಲಜ್ಜೆಯಂತಹ ಅನುಗ್ರಹದಿಂದ ವಂಚಿತನಾದ ವ್ಯಕ್ತಿಯು ವಾಸ್ತವವಾಗಿ ವಿಧಿಯಿಂದ ವಂಚಿತನಾಗುತ್ತಾನೆ. ಸರ್ವಶಕ್ತನಾದ ಅಲ್ಲಾಹನು ಅಂತಹ ವ್ಯಕ್ತಿಯನ್ನು ದ್ವೇಷಿಸುತ್ತಾನೆ ಮತ್ತು ಅಂತಹ ವ್ಯಕ್ತಿಯಿಂದ ಒಳ್ಳೆಯದನ್ನು ನಿರೀಕ್ಷಿಸುವುದು ವ್ಯರ್ಥ. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಹೇಳಿದರು, "ನಾಚಿಕೆ ಮತ್ತು ಲಜ್ಜೆ ಇಲ್ಲದಿದ್ದಾಗ, ಅವನು ತನ್ನ ಮನಸ್ಸಿಗೆ ಬಂದದ್ದನ್ನು ಮಾಡುತ್ತಾನೆ." (ಸಹೀಹ್ ಬುಖಾರಿ, ಕಿತಾಬುಲ್ ಅದಬ್) ಇದು ನಾಚಿಕೆಯಿಲ್ಲದ ವ್ಯಕ್ತಿಯನ್ನು ಯಾವುದೇ ನೀತಿ ಸಂಹಿತೆಗೆ ಬದ್ಧಗೊಳಿಸಲು ಸಾಧ್ಯವಿಲ್ಲ ಮತ್ತು

ಅವನ ಜೀವನವು ಗೂನು ಇಲ್ಲದ ಒಂಟೆಯಂತೆ ಎಂದು ತೋರಿಸುತ್ತದೆ. ಇಂದು, ಲಜ್ಜೆಯ ಮಾನದಂಡಗಳು ತಲೆಕೆಳಗಾಗಿವೆ ಎಂದು ಕರೆಯಲ್ಪಡುವ ಈ ಮುಂದುವರಿದ ಯುಗದಲ್ಲಿ, ಪಶ್ಚಿಮವನ್ನು ಕುರುಡಾಗಿ ಅನುಸರಿಸುವುದರಿಂದ ಉಂಟಾಗುವ ಭೀಕರ ಪರಿಣಾಮಗಳನ್ನು ತಪ್ಪಿಸಲು, ಪ್ರಸ್ತುತ ಕಾಲದ ಇಮಾಮರಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ರವರ ನಿರಂತರ ಮಾರ್ಗದರ್ಶನ ನಮಗಿರುವುದು ನಮ್ಮ ಅದೃಷ್ಟವಾಗಿದೆ. ಈ ನಿಟ್ಟಿನಲ್ಲಿ, "ಇಸ್ಲಾಮಿಕ್ ಮುಸುಕಿನ ಮಹತ್ವ ಮತ್ತು ಅನುಗ್ರಹಗಳು ಹುಝೂರ್ ಅನ್ವರ್(ಅತಬಿಅ) ಅವರ ಹೇಳಿಕೆಗಳ ಬೆಳಕಿನಲ್ಲಿ" ಎಂಬ ವಿಷಯದ ಕುರಿತು ಇಂದಿನ ಜಲ್ಸ ಸಾಲಾನದ ಈ ಅಧಿವೇಶನದಲ್ಲಿ ಬೆಳಕು ಚಲ್ಲಲು ನನ್ನನ್ನು ಆದೇಶಿಸಲಾಗಿದೆ.

ಗೌರವಾನ್ವಿತ ಸಹೋದರಿಯರೇ! ನಮ್ಮ ಪ್ರೀತಿಯ ಇಮಾಮ್ ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರು ಅಹ್ಮದಿ ಮಹಿಳೆಯರಲ್ಲಿ ಇಸ್ಲಾಮಿನ ಮುಸುಕನ್ನು ಉತ್ತೇಜಿಸಲು ಶ್ರಮಿಸುತ್ತಿದ್ದಾರೆ, ಮತ್ತೊಂದೆಡೆ ಅವರು ಮುಸ್ಲಿಮೇತರರಿಂದ ಮುಸುಕಿನ ಮೇಲಿನ ದಾಳಿಯನ್ನು ಯಶಸ್ವಿಯಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ ಮತ್ತು ಅವರು ನೀಡುವ ಪ್ರತಿಯೊಂದು ಸಲಹೆಯೂ ನಮ್ಮ ಇಹಲೋಕ ಹಾಗೂ ಪರಲೋಕವನ್ನು ಸುಧಾರಿಸಲಿದೆ. ಆದ್ದರಿಂದ, ಹುಝೂರ್ ಅನ್ವರ್(ಅತಬಿಅ) ಅವರ ಈ ಸಲಹೆಗಳನ್ನು ಎಚ್ಚರಿಕೆಯಿಂದ ಆಲಿಸುವುದು ಮಾತ್ರವಲ್ಲದೆ, ನಮ್ಮಲ್ಲಿ ಮತ್ತು ನಮ್ಮ ಪೀಳಿಗೆಯಲ್ಲಿ ಅವುಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ಸರ್ವಶಕ್ತನಾದ ಅಲ್ಲಾಹನು ನಮ್ಮೆಲ್ಲರಿಗೂ ಇದರಲ್ಲಿ ಯಶಸ್ಸನ್ನು ನೀಡಲಿ. ಆಮೀನ್.

ಹುಝೂರ್ ಅನ್ವರ್(ಅತಬಿಅ) ಅವರು ಹೇಳುತ್ತಾರೆ, "ಇಂದು, ಪ್ರಪಂಚದ ಬಹುಪಾಲು ಜನರು ಧರ್ಮದಿಂದ ದೂರ ಸರಿದಿರುವುದನ್ನು ನಾವು ನೋಡುತ್ತೇವೆ ಮತ್ತು ಆದ್ದರಿಂದ ಅವರ ಒಳ್ಳೆಯದು ಮತ್ತು ಕೆಟ್ಟದ್ದರ ಮಾನದಂಡಗಳು ಸಹ ಬದಲಾಗುತ್ತಿವೆ. ಉದಾಹರಣೆಗೆ, ಈ ಯುಗದಲ್ಲಿ, ಸ್ವಾತಂತ್ರ್ಯ ಮತ್ತು ಫ್ಯಾಷನ್ ಹೆಸರಿನಲ್ಲಿ ಮಹಿಳೆಯರು ಮತ್ತು ಪುರುಷರು ಬೆರೆಯುವುದು ಸಾಮಾನ್ಯವಾಗುತ್ತಿದೆ ಎಂದು ನಾವು ನೋಡುತ್ತೇವೆ. ಪ್ರಗತಿ ಹೊಂದುತ್ತಿರುವುದಕ್ಕೆ ಸಂಕೇತವೆಂದರೆ ಅವರು ಬಹಿರಂಗವಾಗಿ ಅನೈತಿಕತೆಯನ್ನು ಮಾಡುವುದಾಗಿದೆ. ಲಜ್ಜೆ ಎಂದೇ ಇಲ್ಲ, ಮತ್ತು ಇದು ಇಲ್ಲಿ ವಾಸಿಸುವ ನಮ್ಮ ಹುಡುಗರು ಮತ್ತು ಹುಡುಗಿಯರ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಸ್ಪಷ್ಟ, ಮತ್ತು ಸ್ವಲ್ಪ ಮಟ್ಟಿಗೆ ಅದು ಈಗಾಗಲೇ ಆಗುತ್ತಿದೆ.

ಕೆಲವು ಹುಡುಗಿಯರು ಹದಿಹರೆಯಕ್ಕೆ ಕಾಲಿಟ್ಟಾಗ, ಇಸ್ಲಾಂನಲ್ಲಿ ಮುಸುಕು ಏಕೆ ಅಗತ್ಯ ಎಂದು ಕೇಳುತ್ತಾ ನನಗೆ ಬರೆಯುತ್ತಾರೆ. ನಾವು ಬಿಗಿಯಾದ ಜೀನ್ಸ್ ಮತ್ತು ಬ್ಲೌಸ್ ಧರಿಸಿ ಬುರ್ಖಾ ಅಥವಾ ಕೋಟ್ ಇಲ್ಲದೆ ಮನೆಯಿಂದ ಹೊರಗೆ ಹೋಗಲು ಏಕೆ ಸಾಧ್ಯವಿಲ್ಲ? ನಾವು ಯುರೋಪಿನ ಸ್ವತಂತ್ರ ಹುಡುಗಿಯರಂತೆ ಏಕೆ ಉಡುಗೆ ತೊಡಬಾರದು? ಮೊದಲನೆಯದಾಗಿ, ನಾವು ಧರ್ಮಕ್ಕೆ ಬದ್ಧರಾಗಬೇಕಾದರೆ, ಧಾರ್ಮಿಕ ಬೋಧನೆಗಳನ್ನು ಅನುಸರಿಸಬೇಕು ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಮುಸ್ಲಿಮರು ಮತ್ತು ಧರ್ಮಕ್ಕೆ ಬದ್ಧರು ಎಂದು ಘೋಷಿಸಬೇಕಾದರೆ, ಸಂಯಮವೂ ಅಗತ್ಯ. ಸರ್ವಶಕ್ತನಾದ ಅಲ್ಲಾಹ್ ಮತ್ತು ಅವನ ಸಂದೇಶವಾಹಕ(ಸ) ರ ಆಜ್ಞೆಗಳನ್ನು ಪಾಲಿಸುವುದು ಸಹ ಮುಖ್ಯವಾಗಿದೆ. ಲಜ್ಜೆಯು ವಿಶ್ವಾಸದ ಭಾಗವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆದ್ದರಿಂದ, ನಮ್ಮ ವಿಶ್ವಾಸವನ್ನು ರಕ್ಷಿಸಲು ಸಾಧಾರಣ ಉಡುಪು ಮತ್ತು ಮುಸುಕು ಅಗತ್ಯ. ದೇಶಗಳು ಪ್ರಗತಿ ಅಥವಾ ಸ್ವಾತಂತ್ರ್ಯ ಮತ್ತು ಪ್ರಗತಿಯ ಹೆಸರಿನಲ್ಲಿ ತಮ್ಮ ಲಜ್ಜೆಯನ್ನು ಕಳೆದುಕೊಳ್ಳುತ್ತಿದ್ದರೆ, ಅದಕ್ಕೆ ಕಾರಣ ಅವರು ಧರ್ಮದಿಂದ ದೂರ ಸರಿದಿರುವುದು. ಹಾಗಾಗಿ, ಹಝ್ರತ್ ಮಸೀಹ್ ಮೌಊದ್(ಅ) ರನ್ನು ಸ್ವೀಕರಿಸಿದ ಅಹ್ಮದಿ ಹುಡುಗಿ, ಧರ್ಮವನ್ನು ಜಗತ್ತಿನ ಮುಂದೆ ಇಡುವುದಾಗಿ ಪ್ರತಿಜ್ಞೆ ಮಾಡಿದ್ದಾಳೆ. ಹಝ್ರತ್ ಮಸೀಹ್ ಮೌಊದ್(ಅ) ರನ್ನು ಸ್ವೀಕರಿಸಿದ ಅಹ್ಮದಿ ಮಗು ಅಥವಾ ಅಹ್ಮದಿ ವ್ಯಕ್ತಿ, ಪುರುಷ ಅಥವಾ ಮಹಿಳೆ, ಧರ್ಮವನ್ನು ಪ್ರಪಂಚದ ಮುಂದೆ ಇಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ ಮತ್ತು ಅವರು ಧರ್ಮದ ಬೋಧನೆಗಳಿಗೆ ಅನುಗುಣವಾಗಿ ವರ್ತಿಸಿದಾಗ ಮಾತ್ರ ಈ ಆದ್ಯತೆಯನ್ನು ನೀಡಲಾಗುತ್ತದೆ.

(ಜನವರಿ 13, 2017 ರಂದು ನೀಡಿದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ), ಅವರ ಖುತ್ಬ ಜುಮುಅದ ಆಯ್ದ ಭಾಗ)

ಪ್ರಿಯ ಸಹೋದರಿಯರೇ! ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ), ಅಹ್ಮದಿ ತಾಯಂದಿರ ಗಮನವನ್ನು ತಮ್ಮ ಮಕ್ಕಳನ್ನು ಬೆಳೆಸುವ ಮಹತ್ವದ ಜವಾಬ್ದಾರಿಯತ್ತ ಸೆಳೆಯುತ್ತಾ, ಬಾಲ್ಯದಿಂದಲೇ ಲಜ್ಜೆ ಮತ್ತು ನಮ್ರತೆಯ ಶಿಕ್ಷಣವನ್ನು ಉತ್ತೇಜಿಸುವ ಮಹತ್ವವನ್ನು ಉಲ್ಲೇಖಿಸಿ ಹೇಳಿದರು:

"ಬಾಲ್ಯದಿಂದಲೂ ಮಕ್ಕಳ ಬಟ್ಟೆಗಳನ್ನು ನೋಡಿಕೊಳ್ಳದ ತಾಯಂದಿರು ದೊಡ್ಡವರಾದಾಗಲೂ ಅವರನ್ನು ನೋಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೆಲವು ಹುಡುಗಿಯರ ಬೆಳವಣಿಗೆ ಹೇಗಾಗಿರುತ್ತದೆ ಎಂದರೆ 10-11 ವರ್ಷದ ಹುಡುಗಿಯು 14-15 ಪ್ರಾಯದ ಹುಡುಗಿಯಂತೆ ಕಾಣುತ್ತಾಳೆ. ಅವರಿಗೆ ಲಜ್ಜೆ ಮತ್ತು ಬಟ್ಟೆಯ ಪಾವಿತ್ರ್ಯವನ್ನು ಕಲಿಸದಿದ್ದರೆ, ಅವರು ದೊಡ್ಡವರಾದಾಗಲೂ, ಈ ಪಾವಿತ್ರ್ಯವು ಅವರಲ್ಲಿ ಎಂದಿಗೂ ಸೃಷ್ಟಿಯಾಗುವುದಿಲ್ಲ. ಬದಲಿಗೆ, ಹುಡುಗಿಯನ್ನು ವಯಸ್ಕಳಂತೆ ಕಾಣದಿದ್ದರೂ ಸಹ, ಅವರು ಚಿಕ್ಕ ವಯಸ್ಸಿನಿಂದಲೇ ಹುಡುಗಿಯರಲ್ಲಿ ಲಜ್ಜೆಯ ಭಾವನೆಗಳನ್ನು ತುಂಬದಿದ್ದರೆ ಮತ್ತು ಅವರಿಗೆ ಈ ರೀತಿ ಬೋಧಿಸದಿದ್ದರೆ ಅಂದರೆ: ನೀವು ಅಹ್ಮದಿಯಾಗಿದ್ದೀರಿ, ನೀವು ಇಲ್ಲಿನ ಜನರ ಬೆತ್ತಲೆ ಬಟ್ಟೆಗಳ ಕಡೆಗೆ ಹೋಗಬಾರದು. ನೀವು ಜಗತ್ತನ್ನು ಮುನ್ನಡೆಸಬೇಕು. ಸರ್ವಶಕ್ತನಾದ ಅಲ್ಲಾಹನು ನಮಗೆ ನೀಡಿದ ಬೋಧನೆಗಳನ್ನು ನೀವು ಅನುಸರಿಸಬೇಕು. ಹೀಗಾಗಿ, ಬಿಗಿಯಾದ ಜೀನ್ಸ್ ಮತ್ತು ಅವುಗಳ ಮೇಲೆ ಸಣ್ಣ ಕುಪ್ಪಸವು ಅಹ್ಮದಿ ಹುಡುಗಿಗೆ ಸೂಕ್ತವಲ್ಲ. ಹೀಗೆ ಬೋಧಿಸಿದರೆ, ಕ್ರಮೇಣ ಬಾಲ್ಯದಿಂದಲೇ ಅವರ ಮನಸಿನಲ್ಲಿ ತುಂಬಿದ ಪದಗಳು ಪರಿಣಾಮ ಬೀರುತ್ತವೆ ಮತ್ತು ಅವಳು ಪ್ರೌಢಾವಸ್ಥೆಯನ್ನು ತಲುಪಿದಾಗ, ಅವಳು ಸ್ವಯಂಚಾಲಿತವಾಗಿ ಹಿಜಾಬ್ ಅಥವಾ ಸ್ಕಾರ್ಫ್ ಮತ್ತು ಉದ್ದನೆಯ ಕೋಟ್ ಧರಿಸಲು ಆಸಕ್ತಿ ಹೊಂದುತ್ತಾಳೆ. ಇಲ್ಲದಿದ್ದರೆ, ಅವಳಿಗೂ ಕೆಲವು ಹುಡುಗಿಯರ ಸ್ಥಿತಿಯೇ ಆಗುತ್ತದೆ... ಅವಳು ಮಸೀದಿಗೆ ಬಂದಾಗ ಅಥವಾ ಜಮಾಅತ್ತಿನ ಕಾರ್ಯಕ್ರಮಕ್ಕೆ ಹೋದಾಗ, ತಲೆಗೆ ಬಟ್ಟೆ ಮುಚ್ಚಿಕೊಂಡಿರುತ್ತದೆ, ಬಟ್ಟೆ ಚೆನ್ನಾಗಿ ಧರಿಸಿರುತ್ತಾಳೆ, ಮತ್ತು ಅವಳು ಹೊರಗೆ ನಡೆಯುವಾಗ, ತಲೆಯ ಮೇಲೆ ದುಪಟ್ಟಾ ಕೂಡ ಧರಿಸುವುದಿಲ್ಲ, ಬದಲಿಗೆ ದುಪಟ್ಟಾ ಅವಳ ತಲೆಯಿಂದ ಮಾಯವಾಗುತ್ತದೆ. ಸ್ಕಾರ್ಫ್ ಬಗ್ಗೆ ಯಾವುದೇ ಪ್ರಶ್ನೆಯಿಲ್ಲ, ಒಟ್ಟಿನಲ್ಲಿ ತಾಯಂದಿರು, ನೀವು ಸಹ ನಿಮ್ಮ ಕಾರ್ಯಗಳಿಂದ ಅದನ್ನು ಮಾಡಿದರೆ, ನಮ್ಮ ಬಟ್ಟೆಗಳು ಸಾಧಾರಣವಾಗಿರಬೇಕು ಮತ್ತು ನಮಗೆ ಪವಿತ್ರ ಸ್ಥಾನವಿದೆ ಎಂದು ಅವರಿಗೆ ನಾವು ನಮ್ಮ ಸಲಹೆಗಳ ಮೂಲಕ ಹುಡುಗಿಯರಿಗೆ ಅರಿವು ಮೂಡಿಸುವುದನ್ನು ಮುಂದುವರಿಸಿದರೆ ಅವರು ಸ್ವತಃ ಬಹಳಷ್ಟು ಕೆಡುಕುಗಳಿಂದ ರಕ್ಷಿಸಲ್ಪಡುತ್ತಾರೆ ಮತ್ತು ಅವರ ಮಕ್ಕಳು ಕೂಡ ರಕ್ಷಿಸಲ್ಪಡುತ್ತಾರೆ. ಹೀಗೆ ನಾವು ನಮ್ಮ ಭಾವನೆಗಳ ಸಣ್ಣ ತ್ಯಾಗಗಳಿಗೆ ನಾವು ಸಿದ್ಧರಿಲ್ಲದಿದ್ದರೆ, ನಾವು ಹೇಗೆ ದೊಡ್ಡ ತ್ಯಾಗಗಳನ್ನು ಮಾಡಲು ಸಾಧ್ಯ?" (ಮಹಿಳೆರಿಗೆ ಉದ್ದೇಶಿಸಿ ಸಂಬೋಧನೆ, ಭಾಷಣ ಜಲ್ಸ ಸಾಲಾನ ಕೆನೆಡ 28-06-2008)

ಹುಝೂರ್ ಅನ್ವರ್(ಅತಬಿಅ) ಮನೆಯಲ್ಲಿಯೂ ಸಹ ಲಜ್ಜೆವುಳ್ಳ ಉಡುಪುಗಳನ್ನು ಧರಿಸುವುದರ ಬಗ್ಗೆ ಗಮನ ಸೆಳೆದಿದ್ದಾರೆ. ಅವರು ಹೇಳಿದರು: "ಕೆಲವು ಹುಡುಗಿಯರು ಮನೆಯಲ್ಲಿ ಜೀನ್ಸ್ ಮೇಲೆ ಟಿ-ಶರ್ಟ್ ಅಥವಾ ಶಾರ್ಟ್ ಬ್ಲೌಸ್ ಧರಿಸಿದರೆ ಪರವಾಗಿಲ್ಲ ಮತ್ತು ಮನೆಯಿಂದ ಹೊರಡುವಾಗ ಉದ್ದನೆಯ ಕೋಟ್ ಧರಿಸುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಭಾವಿಸುತ್ತಾರೆ. ಆದರೆ, ಮನೆಯಲ್ಲಿ, ನಿಮ್ಮ ಪೋಷಕರು ಮತ್ತು ಸಹೋದರರ ಮುಂದೆ ನೀವು ಲಜ್ಜೆವುಳ್ಳ ಮತ್ತು ಸೂಕ್ತವಾದ ಬಟ್ಟೆಗಳನ್ನು ಧರಿಸಬೇಕು. ನಿಸ್ಸಂದೇಹವಾಗಿಯೂ, ಸರ್ವಶಕ್ತನಾದ ಅಲ್ಲಾಹನು ಅವರಿಂದ ಪರದೆ ಮಾಡುವ ಅವಶ್ಯಕತೆ ಇಲ್ಲೆ ಎಂದು ಹೇಳಿದ್ದಾನೆ, ಆದರೆ ಲಜ್ಜೆಯನ್ನು ವಿಶ್ವಾಸದ ಭಾಗವೆಂದು ಪರಿಗಣಿಸಲಾಗಿದೆ. ನಂತರ, ಒಂದು ಹಂತದಲ್ಲಿ, ಒಬ್ಬ ಆತ್ಮೀಯ ಸಂಬಂಧಿ ಮನೆಗೆ ಬರುತ್ತಾನೆ. ಕೆಲವೊಮ್ಮೆ, ಯಾರಾದರೂ ಇದ್ದಕ್ಕಿದ್ದಂತೆ ನಿಮ್ಮ ಪೋಷಕರು ಮತ್ತು ಸಹೋದರರ ಮುಂದೆ ಬರುತ್ತಾರೆ, ಆದ್ದರಿಂದ ನೀವು ಮುಂದೆ ಬರಬೇಕಾಗುತ್ತದೆ, ಮತ್ತು ಅಂತಹ ಬಟ್ಟೆಗಳು ಅವರ ಮುಂದೆ ಸೂಕ್ತವಲ್ಲ. ಆದ್ದರಿಂದ, ನೀವು ಮನೆಯಲ್ಲಿಯೂ ಅವರ ಮುಂದೆ ಲಜ್ಜೆವುಳ್ಳ ಬಟ್ಟೆಗಳನ್ನು ಧರಿಸಬೇಕು. ನಿಜಕ್ಕೂ, ಹಿಜಾಬ್ ಅಗತ್ಯವಿಲ್ಲ. ಅವರು ತಲೆಯನ್ನು ಬೆತ್ತಲೆಯಾಗಿಟ್ಟು ತಿರುಗಾಡಬಹುದು. ಅಲ್ಲಾಹನ ಮೇಲಿನ ಪ್ರೀತಿಯು ಅವನ ಆಜ್ಞೆಗಳನ್ನು ಪಾಲಿಸಬೇಕು ಮತ್ತು ಮನೆಯ ಒಳಗೆ ಮತ್ತು ಹೊರಗೆ ಲಜ್ಜೆವುಳ್ಳ ಬಟ್ಟೆಗಳನ್ನು ಧರಿಸಬೇಕು ಎಂದು ಬಯಸುತ್ತದೆ. ಇದು ಸರ್ವಶಕ್ತನಾದ ಅಲ್ಲಾಹನ ಆಜ್ಞೆಯಾಗಿದೆ. ಲಜ್ಜೆಯ ಅವಶ್ಯಕತೆಗಳನ್ನು ಪೂರೈಸಿದ ನಂತರ, ನೀವು ವೈದ್ಯ, ಎಂಜಿನಿಯರ್, ಶಿಕ್ಷಕ ಅಥವಾ ಮಾನವೀಯತೆಗೆ ಪ್ರಯೋಜನಕಾರಿಯಾದ ಯಾವುದೇ ವೃತ್ತಿಯಾಗುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಅದರೊಂದಿಗೆ ನೀವು ಸಂಪೂರ್ಣವಾಗಿ ಸ್ವತಂತ್ರರು. ಪ್ರತಿಯೊಬ್ಬ ಅಹ್ಮದಿ ಹುಡುಗಿಯಲ್ಲೂ ಒಂದು ಪವಿತ್ರತೆ ಇದ್ದು ಅದನ್ನು ನೋಡಿಕೊಳ್ಳಬೇಕು. ನಿಮ್ಮ ಸ್ವಂತ ಪಾವಿತ್ರ್ಯದ ಚಿಂತನೆ ಮತ್ತು ಲಜ್ಜೆಯ ಅಭಿವ್ಯಕ್ತಿಯೇ ನಿಮ್ಮನ್ನು ಒಳ್ಳೆಯ ಕಾರ್ಯಗಳ ಪ್ರತಿಪಾದಕರನ್ನಾಗಿ ಮತ್ತು ಕೆಟ್ಟದ್ದನ್ನು ನಿಷೇಧಿಸುವವರನ್ನಾಗಿ ಮಾಡುತ್ತದೆ, ಮತ್ತು ನಿಮ್ಮ ಮಾದರಿಯು ನಿಮ್ಮನ್ನು ಇತರರಿಗೆ ಮತ್ತು ನಿಮ್ಮ ಸ್ನೇಹಿತರಿಗೆ ಗಮನ ಸೆಳೆಯುವ ಮೂಲವನ್ನಾಗಿ ಮಾಡುತ್ತದೆ, ಇದು ನಿಮಗೆ ಧರ್ಮೋಪದೇಶದ ಮಾರ್ಗಗಳನ್ನು ತೆರೆಯುತ್ತದೆ." (ಜೂನ್ 2, 2005 ರಂದು ಜರ್ಮನಿಯಲ್ಲಿ ನಡೆದ ಜಲ್ಸ ಸಆಲಾನದಲ್ಲಿ ಮಹಿಳೆಯರಿಗೆ ಸಂಬೋಧನೆ)

ನಾರ್ವೇಯ ರಾಷ್ಟ್ರೀಯ ಮಜ್ಲಿಸ್ ಆಮಿಲಾದೊಂದಿಗಿನ ಒಂದು ಸಭೆಯಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಮುಸುಕಿನ ಕುರಿತು ಸೂಚನೆಗಳನ್ನು ನೀಡಿದರು:

"ಮನೆಗಳಲ್ಲಿ ಬೇರೆ ಬೇರೆ ಕುಟುಂಬಗಳು ಬಂದು ಹೋಗುತ್ತವೆ. ನಮಗೆ ಸಂಬಂಧಗಳಿವೆ ಎಂದು ಅವರು ಹೇಳುತ್ತಾರೆ. ನಾವು ಹಳೆಯ

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.06, Thursday, 15-22 May 2025, Issue No. 20-21

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಪರಿಚಯಸ್ಥರು, ಇದು ಸರಿಯಲ್ಲ. ಅವರು ಪರಸ್ಪರರ ಮನೆಗಳಿಗೆ ಬಂದಾಗ, ಪುರುಷರು ಪ್ರತ್ಯೇಕವಾಗಿ ಕುಳಿತುಕೊಳ್ಳಬೇಕು ಮತ್ತು ಮಹಿಳೆಯರು ಪ್ರತ್ಯೇಕ ಪರದೆಗಳ ಹಿಂದೆ ಕುಳಿತುಕೊಳ್ಳಬೇಕು. ಅವರು(ಅತಬಿಅ) ಹೀಗೆ ಹೇಳಿದರು: "ಕೆಲವೊಮ್ಮೆ, ಒಳ್ಳೆಯತನದ ಹೆಸರಿನಲ್ಲಿ, ಮಾನವ ಕರುಣೆಯ ಹೆಸರಿನಲ್ಲಿ, ಇತರರಿಗೆ ಸಹಾಯ ಮಾಡುವ ಹೆಸರಿನಲ್ಲಿ, ಒಬ್ಬ ಪುರುಷ ಮತ್ತು ಮಹಿಳೆ ಪರಸ್ಪರ ಪರಿಚಯವಾಗುತ್ತಾರೆ, ಇದು ಕೆಲವೊಮ್ಮೆ ಕೆಟ್ಟ ಪರಿಣಾಮಗಳಿಗೆ ಕಾರಣವಾಗುತ್ತದೆ. ಅದಕ್ಕಾಗಿಯೇ ಹಝ್ರತ್ ಪೈಗಂಬರ್(ಸ)ರು ಮನೆಯಲ್ಲಿ ಗಂಡಂದಿರು ಇಲ್ಲದ ಮಹಿಳೆಯರ ಮನೆಗಳಿಗೆ ಮಹಿಳೆಯರು ಪ್ರವೇಶಿಸುವುದನ್ನು ನಿಷೇಧಿಸುತ್ತಿದ್ದರು ಮತ್ತು ಸೈತಾನನು ರಕ್ತದಂತೆ ವ್ಯಕ್ತಿಯ ರಕ್ತನಾಳಗಳ ಮೂಲಕ ಹಾದು ಹೋಗುತ್ತಾನೆ ಎಂದು ಅವರು ವಿವರಿಸಿದರು."

ಈ ನಿಟ್ಟಿನಲ್ಲಿ, ಅಹ್ಮದಿ ಮಹಿಳೆಯರಿಗೆ ಮಾರ್ಗದರ್ಶನ ನೀಡುವಾಗ, ಹುಝೂರ್ ಅನ್ವರ್(ಅತಬಿಅ) ಬಹಳ ಯುಕ್ತಿಯುತ ಸಲಹೆಯನ್ನು ನೀಡಿದರು:

"ನೀವು ಬುರ್ಖಾ ಧರಿಸಿ ಪುರುಷರ ಕೂಟಗಳಲ್ಲಿ ಕುಳಿತು ಪುರುಷರೊಂದಿಗೆ ಕೈಕುಲುಕಲು ಪ್ರಾರಂಭಿಸಿದರೆ, ಮುಸುಕಿನ ಉದ್ದೇಶವೇ ಕಳೆದುಹೋಗುತ್ತದೆ... ಮಹ್ರಮ್ ಅಲ್ಲದ ಪುರುಷರು ಮತ್ತು ಮಹಿಳೆಯರು ಬಹಿರಂಗವಾಗಿ ಬೆರೆಯಬಾರದು, ಪರಸ್ಪರ ಭೇಟಿಯಾಗಬಾರದು ಎಂಬುದು ಮುಸುಕಿನ ಉದ್ದೇಶವಾಗಿದೆ. ಎರಡೂ ಸ್ಥಳಗಳು ಪ್ರತ್ಯೇಕವಾಗಿರಬೇಕು. ನೀವು ನಿಮ್ಮ ಸ್ನೇಹಿತೆಯ ಮನೆಗೆ ಹೋಗಿ ಆಕೆಯ ಪತಿ, ಸಹೋದರರು ಅಥವಾ ಸಂಬಂಧಿಕರಿಂದ ಮುಕ್ತವಾದ ವಾತಾವರಣದಲ್ಲಿ ಕುಳಿತರೆ, ನೀವು ಮುಖ ಮುಚ್ಚಿಕೊಂಡು ಕುಳಿತಿರಲಿ ಅಥವಾ ಮುಖ ಮುಚ್ಚಿಕೊಂಡು ಯಾರೊಂದಿಗಾದರೂ ಕೈಕುಲುಕುತ್ತಿರಲಿ, ಆಗ ಇದು ಮುಸುಕು ಅಲ್ಲ... ಎಲ್ಲರ ಸಭೆಯೂ ಪ್ರತ್ಯೇಕವಾಗಿರಬೇಕು. ವಾಸ್ತವವಾಗಿ, ಪವಿತ್ರ ಖುರ್‌ಆನ್ ಮಾರುಕಟ್ಟೆಯ ಸ್ವಭಾವದ ಅಥವಾ ಕೊಳಕು ಆಲೋಚನೆಗಳನ್ನು ಹೊಂದಿರುವ ಕೆಲವು ಮಹಿಳೆಯರಿಂದಲೂ ನೀವು ಮುಸುಕು ಹಾಕಿಕೊಳ್ಳಬೇಕೆಂದು ಆದೇಶಿಸುತ್ತದೆ. ಅವುಗಳನ್ನು ತಪ್ಪಿಸುವಂತೆಯೂ ಆದೇಶಿಸಲಾಗಿದೆ. ಆದ್ದರಿಂದ, ಜಾಗರೂಕರಾಗಿರಿ ಮತ್ತು ಅಂತಹ ಕೂಟಗಳನ್ನು ತಪ್ಪಿಸಿ."

ಪ್ರಿಯ ಸಹೋದರಿಯರೇ! ಹುಝೂರ್ ಅನ್ವರ್(ಅತಬಿಅ) ಅವರು ಮಹಿಳೆಯರು ತಮ್ಮ ಸೌಂದರ್ಯವನ್ನು ಪ್ರದರ್ಶಿಸಬಾರದು, ಜೊತೆಗೆ ಲಜ್ಜೆ, ನಾಚಿಕೆ ಮತ್ತು ಒಬ್ಬರನ್ನೊಬ್ಬರು ನೋಡುವ ಅಭ್ಯಾಸವನ್ನು ತ್ಯಜಿಸಬೇಕು ಎಂದು ಸಲಹೆ ನೀಡುವುದರ ಜೊತೆಗೆ ಮಹಿಳೆಯರು ತಮ್ಮ ಸೌಂದರ್ಯವನ್ನು ವ್ಯಕ್ತವಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು: "ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳಲ್ಲಿ ಪುರುಷರು ಮತ್ತು ಮಹಿಳೆಯರು ಪರಸ್ಪರ ನೋಡಬಾರದು. ಒಂದು ಲಜ್ಜೆ ಅವರಲ್ಲಿರಬೇಕು. ಎರಡನೆಯದು ಅವರು ತಮ್ಮ ಅಲಂಕಾರವನ್ನು ಮರೆಮಾಡಬೇಕು. ಅವರು ತಮ್ಮ ದೇಹವನ್ನು ಬಹಿರಂಗಪಡಿಸದ ಬಟ್ಟೆಗಳನ್ನು ಧರಿಸಬೇಕು. ಮೂರನೆಯದು ಅವರು ತಮ್ಮ ಅಲಂಕಾರವನ್ನು ಮರೆಮಾಡಲು ತಮ್ಮ ಕುತ್ತಿಗೆ, ತಲೆ ಮತ್ತು ಮುಂಭಾಗವನ್ನು ಮುಚ್ಚಿಕೊಳ್ಳಬೇಕು. ಅವರು ಧರಿಸುವ ಬುರ್ಖಾ ಸಡಿಲವಾಗಿರಬೇಕು. ಮೇಕಪ್ ಧರಿಸಿ ಮುಖವನ್ನು ಬರಿಗಾಲಿನಲ್ಲಿ ತಿರುಗಿಸುವವರು ಸಹ ಅಲಂಕಾರವನ್ನು ಪ್ರದರ್ಶಿಸುವ ವರ್ಗಕ್ಕೆ ಸೇರುತ್ತಾರೆ. ಅದೇ ರೀತಿ, ತಮ್ಮ ಕೂದಲನ್ನು ಪ್ರದರ್ಶಿಸುವವರು ಸಹ ಅಲಂಕಾರವನ್ನು ಪ್ರದರ್ಶಿಸುವ ವರ್ಗಕ್ಕೆ ಸೇರುತ್ತಾರೆ... ಆದ್ದರಿಂದ, ತಲೆಯನ್ನು ಮುಚ್ಚುವುದು ಎಂದರೆ ಮುಖವು ತೆರೆದುಕೊಳ್ಳದ ಮಟ್ಟಿಗೆ ಮುಖವನ್ನು ಮುಚ್ಚುವುದು ಮತ್ತು ಸೂಕ್ತವಾದ ಬಟ್ಟೆಗಳನ್ನು ಧರಿಸುವುದು ಕನಿಷ್ಠ ಮುಸುಕು ಆಗಿದೆ, ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರು ಇದು ಕನಿಷ್ಠ ಮಾನದಂಡವಾಗಿರಬೇಕು ಎಂದು ಸಲಹೆ ನೀಡಿದ್ದಾರೆ. (ಮಹಿಳೆಯರಿಗೆ ಸಂಬೋಧಿಸಿ ನೀಡಿದ ಭಾಷಣ, ಜಲ್ಸ ಸಾಲಾನ ಯುಕೆ ಜುಲೈ 30, 2010, ಅಲ್ ಫಝಲ್ ಇಂಟರ್ನ್ಯಾಷನಲ್, ಮಾರ್ಚ್ 11, 2011)

ನಾಚಿಕೆ ಮತ್ತು ಲಜ್ಜೆಯನ್ನು ಕಾಪಾಡಿಕೊಳ್ಳುವಾಗ ಪವಿತ್ರ ಖುರ್‌ಆನ್‌ನ ಮುಸುಕು ಧರಿಸುವ ಆದೇಶವನ್ನು ಅಳವಡಿಸಿಕೊಳ್ಳುವುದು ಅಹ್ಮದಿ ಮಹಿಳೆಯ ಘನತೆಯಾಗಿದೆ. ಹುಝೂರ್ ಅನ್ವರ್(ಅತಬಿಅ) ಈ ಮಹತ್ವದ ಜವಾಬ್ದಾರಿಯ ಬಗ್ಗೆ ಜಮಾಅತ್ತಿನ ಸ್ನೇಹಿತರ ಗಮನವನ್ನು ಪದೇ ಪದೇ ಸೆಳೆದಿದ್ದಾರೆ ಮತ್ತು ಹೀಗೆ ಹೇಳುತ್ತಾರೆ: "ಹಾಗಾದರೆ ಓರ್ವ ಸತ್ಯವಿಶ್ವಾಸಿ ಮಹಿಳೆಗೆ ತನ್ನ ಅಲಂಕಾರವನ್ನು ಮರೆಮಾಡಲು ಮತ್ತು ಮುಸುಕು ಧರಿಸಲು ಸರ್ವಶಕ್ತನಾದ ಅಲ್ಲಾಹನಿಂದ ಬಹಳ ಮುಖ್ಯವಾದ ಆಜ್ಞೆ ಇದೆ... ಕೆಲವು ವಿದ್ಯಾವಂತ ಹುಡುಗಿಯರು ಮತ್ತು ಮಹಿಳೆಯರು, ಸಮಾಜದ ಪ್ರಭಾವದಿಂದ ಅಥವಾ ಭಯದಿಂದಾಗಿ, ಇತ್ತೀಚಿನ ದಿನಗಳಲ್ಲಿ... ಮುಸುಕು ಹಾಕುವ ಬಗ್ಗೆ ಕಾಳಜಿ ವಹಿಸುವುದಿಲ್ಲ; ಅವರ ಬಟ್ಟೆಗಳು ಹೆಚ್ಚು ಫ್ಯಾಶನ್ ಆಗುತ್ತಿವೆ. ಅವರು ಮಸೀದಿಗೆ ಅಥವಾ ಕೇಂದ್ರಕ್ಕೆ ಹೋಗಬೇಕಾದರೂ, ಅವರು ಮುಸುಕು ಧರಿಸಿ ಅಥವಾ ಉತ್ತಮ ಬಟ್ಟೆ ಧರಿಸಿ ಬರುತ್ತಾರೆ. ಆದಾಗ್ಯೂ, ಮಾರುಕಟ್ಟೆಗಳಲ್ಲಿ ಜನರು ತಮ್ಮ ಬಟ್ಟೆಗಳನ್ನು ನೋಡಿಕೊಳ್ಳುವುದಿಲ್ಲ ಎಂದು ಕೆಲವರು ದೂರುತ್ತಾರೆ. ಒಂದು ವಿಷಯವನ್ನು ನೆನಪಿಡಿ: ಲಜ್ಜೆಯು ವಿಶ್ವಾಸದ ಒಂದು ಭಾಗವಾಗಿದೆ ಮತ್ತು ಲಜ್ಜೆ ಮಹಿಳೆಯ ನಿಧಿಯಾಗಿದೆ. ಆದ್ದರಿಂದ, ನಾವು ಯಾವಾಗಲೂ ಲಜ್ಜೆವುಳ್ಳ, ಸಾಧಾರಣ ಬಟ್ಟೆಗಳನ್ನು ಧರಿಸಬೇಕು. ಅಹ್ಮದಿ ಮಹಿಳೆ ಮತ್ತು ಅಹ್ಮದಿ ಹುಡುಗಿಗೆ ಪವಿತ್ರ ಸ್ಥಾನವಿದೆ ಎಂಬುದನ್ನು ಯಾವಾಗಲೂ ನೆನಪಿಡಿ, ಮತ್ತು ನೀವು ಅದನ್ನು ಎತ್ತಿಹಿಡಿಯಬೇಕು. ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಮುಸುಕನ್ನು ಆದೇಶಿಸಿದ್ದರೆ, ಅದಕ್ಕೆ ಸ್ವಲ್ಪ ಮಹತ್ವವಿರಬೇಕು ಎಂಬುದನ್ನು ಯಾವಾಗಲೂ ನೆನಪಿಡಿ. ಮುಸುಕು ಧರಿಸುವ ಕ್ರಮವು ಹಳೆಯದು ಅಥವಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ಎಂದು ಹೇಳುವ ಪಾಶ್ಚಿಮಾತ್ಯ ಜನರಂತೆ ಇರಬೇಡಿ. ಪವಿತ್ರ ಖುರ್‌ಆನ್‌ನ ಯಾವುದೇ ಆಜ್ಞೆಯು ಎಂದಿಗೂ ಹಳೆಯದಾಗುವುದಿಲ್ಲ ಮತ್ತು ಎಂದಿಗೂ ಬದಲಾಗುವುದಿಲ್ಲ. ಅಂತಹ ಆಲೋಚನೆ ಒಂದು ಸಮಯದಲ್ಲಿ ಉದ್ಭವಿಸುತ್ತದೆ ಎಂದು ಅಲ್ಲಾಹನಿಗೆ ತಿಳಿದಿತ್ತು, ಆದ್ದರಿಂದ ಅವನು ಈ ಶಾಶ್ವತ ಆಜ್ಞೆಯನ್ನು ಬಹಿರಂಗಪಡಿಸಿದ್ದಾನೆ, ನೀವು ಅದನ್ನು ನಿಮ್ಮ ಬಾಯಿಂದ ಹೇಳುವುದರಿಂದ ಅಲ್ಲಾಹನ ಗುಲಾಮರಾಗುವುದಿಲ್ಲ, ಆದರೆ ಪವಿತ್ರ ಖುರ್‌ಆನ್‌ನಲ್ಲಿ ನೀಡಲಾದ ಸಲಹೆ ಮತ್ತು ಆಜ್ಞೆಗಳನ್ನು ಅನುಸರಿಸುವ ಮೂಲಕ, ನಿಮ್ಮನ್ನು ನಿಜವಾದ ನಂಬಿಕೆಯುಳ್ಳವರು ಎಂದು ಕರೆಯಲಾಗುತ್ತದೆ.

(ಸೆಪ್ಟೆಂಬರ್ 1, 2007, ಮ್ಯೂನಿಚ್‌ನಲ್ಲಿ ಜರ್ಮನಿಯಲ್ಲಿ ನಡೆದ ಜಲ್ಸ ಸಾಲಾನದ ಭಾಷಣ, ಅಲ್-ಫಝಲ್ ಇಂಟರ್ನ್ಯಾಷನಲ್, ಪ್ರಕಟಣೆ, ಡಿಸೆಂಬರ್ 2, 2016)

ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರು ತಮ್ಮ ಒಂದು ಭಾಷಣದಲ್ಲಿ, ಅಹ್ಮದಿ ಮುಸ್ಲಿಂ ಮಹಿಳೆಯರು ಮತ್ತು ಹುಡುಗಿಯರ ಗಮನವನ್ನು ಲಜ್ಜೆ ಮತ್ತು ಪರಿಶುದ್ಧತೆಯನ್ನು ರಕ್ಷಿಸುವ ಪ್ರಾಮುಖ್ಯತೆಯತ್ತ ಸೆಳೆದರು: "ಕೆಲವು ಹುಡುಗಿಯರು ನಾವು ನಮ್ಮ ತಲೆಯನ್ನು ಮುಚ್ಚಿಕೊಂಡಿದ್ದೇವೆ ಮತ್ತು ಇಷ್ಟು ಸಾಕು ಎಂದು ಹೇಳುತ್ತಾರೆ, ಆದರೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕರು ಆಜ್ಞಾಪಿಸಿದ ರೀತಿಯಲ್ಲಿ ಅವರ ತಲೆಯನ್ನು ಮುಚ್ಚಲಾಗಿಲ್ಲ. ಅವರ ಕೂದಲು ಸ್ಪಷ್ಟವಾಗಿ ಗೋಚರಿಸುತ್ತದೆ, ಅವರ ತಲೆಯ ಅರ್ಧದಷ್ಟು ಮುಚ್ಚಲ್ಪಟ್ಟಿರುತ್ತದೆ ಅರ್ಧ ಬೆತ್ತಲೆಯಾಗಿರುತ್ತದೆ, ಅವರ ಕಾಲರ್‌ಗಳು ಸಹ ಗೋಚರಿಸುತ್ತವೆ. ಕೋಟ್ ಧರಿಸಿದರೆ, ಅವರ ತೋಳುಗಳು ಮೊಣಕೈಯವರೆಗೆ ಬರಿಯವಾಗಿರುತ್ತವೆ. ಮೊಣಕಾಲುಗಳ ಮೇಲೆ ಕೋಟುಗಳಿರುತ್ತವೆ. ಇದು ಅಹ್ಮದಿ ಹುಡುಗಿ ಅಥವಾ ಮಹಿಳೆಯ ಲಜ್ಜೆಯಲ್ಲ ಅಥವಾ ಅಹ್ಮದಿ ಮಹಿಳೆಯ ಸ್ವಾತಂತ್ರ್ಯದ ಮಿತಿಯೂ ಅಲ್ಲ. ಬದಲಿಗೆ, ಅಂತಹ ಕೃತ್ಯಗಳನ್ನು ಮಾಡುವ ಮೂಲಕ, ಅವರು ತಮ್ಮ ಲಜ್ಜತನವನ್ನು ಆರೋಪಿಸುತ್ತಾರೆ ಮತ್ತು ಅಹ್ಮದಿಯಾಗಿ, ಅವರು ತಮ್ಮ ಸ್ವಾತಂತ್ರ್ಯದ ಮಿತಿಗಳನ್ನು ಉಲ್ಲಂಘಿಸುತ್ತಿದ್ದಾರೆ... ಅಹ್ಮದಿ ಮಹಿಳೆ ಅಥವಾ ಹುಡುಗಿಯ ಪರಿಶುದ್ಧತೆಯು ಸಾವಿರಾರು ಮತ್ತು ಲಕ್ಷಾಂತರ ಆಭರಣಗಳಿಗಿಂತ ಹೆಚ್ಚು ಮೌಲ್ಯಯುತವಾಗಿದೆ. ಅದನ್ನು ರಕ್ಷಿಸುವುದು ಮತ್ತು ಅದನ್ನು ಹೇಗೆ ರಕ್ಷಿಸಬೇಕೆಂದು ತಿಳಿದುಕೊಳ್ಳುವುದು ಅಹ್ಮದಿ ಮಹಿಳೆ ಅಥವಾ ಹುಡುಗಿಗೆ ಅತ್ಯಂತ ಮುಖ್ಯವಾದ ವಿಷಯವಾಗಿದೆ. ಅದು ಒಂದು ಬಾಧ್ಯತೆ. ಯಾವಾಗಲೂ ನೆನಪಿಟ್ಟುಕೊಳ್ಳಿ, ಅಹ್ಮದಿ ಹುಡುಗಿ ಅಥವಾ ಮಹಿಳೆ ತನ್ನ ಲಜ್ಜೆಯನ್ನು ಕಾಪಾಡಿಕೊಳ್ಳಬೇಕು, ತನ್ನ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಬೇಕು, ತನ್ನ ಪಾವಿತ್ರ್ಯವನ್ನು ಕಾಪಾಡಿಕೊಳ್ಳಬೇಕು, ಮತ್ತು ಇದು... ಒಂದು ಸಂಸ್ಕೃತಿಯಲ್ಲ, ಬದಲಿಗೆ ಇದು

*(ಪುಟ ಸಂಖ್ಯೆ-08ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.